ಶನಿವಾರ, ಜನವರಿ 4, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 4 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಯಾರಿಗಾಗಿ ಬದುಕಬೇಕು ಎಂಬ ಪ್ರಶ್ನೆ ಎದುರಾದ ಕೂಡಲೇ ಆಪ್ತರೊಂದಿಗೆ ಮಾತನಾಡಿ...



ಪ್ರಜಾವಾಣಿ ಸಂದರ್ಶನ 9
ಮರಗಳ ಮೇಲೆ ಸರ್ಕಾರಕ್ಕೆ ಹಕ್ಕಿಲ್ಲ: ಹೈಕೋರ್ಟ್ 7
17 ಲಕ್ಷ ಮಂದಿಗೆ 'ಟೆಲಿ ಮನಸ್' ಸೇವೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,223	24,004	₹81,570 (ಬೆಂಗಳೂರು)	₹93,200 (ಬೆಂಗಳೂರು)	85.79

ಬಸ್ ಪ್ರಯಾಣ ದರ ಏರಿಕೆಗೆ ಬಿಜೆಪಿ– ಜೆಡಿಎಸ್ ಆಕ್ರೋಶ: ಸಮರ್ಥನೆಗೆ ನಿಂತ ಕಾಂಗ್ರೆಸ್ ನಾಯಕರು

ದರ: ಪರ–ವಿರೋಧ ಸಮರ

ನಾಲ್ಕು ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಶೇ 15ರಷ್ಟು ಹೆಚ್ಚಿಸಲು ಅನುವು ಮಾಡಿಕೊಟ್ಟ ಕಾಂಗ್ರೆಸ್ ಸರ್ಕಾರದ ತೀರ್ಮಾನಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ವಿರೋಧ ಪಕ್ಷ ಬಿಜೆಪಿ, ಮೊದಲ ದಿನವೇ ಬೀದಿಗೆ ಇಳಿದಿದೆ. ಏರಿಕೆ ಅನಿವಾರ್ಯವನ್ನು ವಿವರಿಸಿರುವ ಸರ್ಕಾರ, ಹೆಚ್ಚಳವನ್ನು ಸಮರ್ಥಿಸಿಕೊಂಡಿದೆ

ಗುಲಾಬಿ ಕೊಟ್ಟು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪ್ರಯಾಣ ದರ ಏರಿಕೆಯನ್ನು ಖಂಡಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಕೇಂದ್ರ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು.

ಬಸ್ ಪ್ರಯಾಣಿಕರ ಕೈಗೆ ಗುಲಾಬಿ ಹೂವು ಕೊಟ್ಟು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕ್ಷಮೆ ಯಾಚಿಸುವ ಮೂಲಕ ಪ್ರತಿಭಟಿಸಿದರು. ಬಸ್‌ನಲ್ಲಿದ್ದ ಪ್ರಯಾಣಿಕರ ಬಳಿ ಹೋದ ಅಶೋಕ, 'ಕಾಂಗ್ರೆಸ್ ಸರ್ಕಾರ ಬೆಲೆ ಏರಿಕೆ ಮಾಡುವುದಿಲ್ಲವೆಂದು ನೀವು ಮತ ನೀಡಿದ್ದೀರಿ. ಆದರೆ, ಮಾತಿಗೆ ತಪ್ಪಿದ ಸರ್ಕಾರ ಹೊಸ ವರ್ಷದಂದೇ ಟಿಕೆಟ್ ದರ ಏರಿಕೆಯ ಕೊಡುಗೆ ನೀಡಿದೆ. ಆದ್ದರಿಂದ, ಮುಖ್ಯಮಂತ್ರಿ ಪರವಾಗಿ ನಾನು ಕ್ಷಮೆ ಕೇಳುತ್ತೇನೆ' ಎಂದರು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಿಜೆಪಿ ಅವಧಿಯಲ್ಲಿ ನಷ್ಟ ಆಗಿತ್ತು ಎಂದು ಸಬೂಬು ಹೇಳುತ್ತಾರೆ. ಆಗ ಕೋವಿಡ್ ಇತ್ತು. ಲಾಕ್‌ಡೌನ್‌ನಿಂದ ತಿಂಗಳುಗಟ್ಟಲೆ ಬಸ್ ಸಂಚಾರವೇ ನಿಂತು ಹೋಗಿತ್ತು. ಹತ್ತು ವರ್ಷಗಳಲ್ಲಿ ಇಂಧನ ಬೆಲೆ ಏರಿಕೆ ಆಗಿಲ್ಲವೇ? ನೌಕರರಿಗೆ ಟಿ.ಎ–ಡಿ.ಎ ಹೆಚ್ಚು ಮಾಡಿರಲಿಲ್ಲವೇ? ಹಿಂದಿನ ಬಿಜೆಪಿ ಸರ್ಕಾರ ಪ್ರಯಾಣ ದರ ಏರಿಕೆ ಮಾಡಿತ್ತೇ? 2013ರಲ್ಲಿ ನಾನು ಸಾರಿಗೆ ಸಚಿವನಾಗಿದ್ದಾಗ, ₹1ಸಾವಿರ ಕೋಟಿಗೂ ಹೆಚ್ಚು ಲಾಭ ತಂದುಕೊಟ್ಟಿದ್ದೆ' ಎಂದರು.

12ನೇ ಪುಟ ನೋಡಿ



ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ಅವರು ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಶುಕ್ರವಾರ ಪ್ರಯಾಣಿಕರಿಗೆ ಗುಲಾಬಿ ಹೂವು ನೀಡುವ ಮೂಲಕ ಪ್ರತಿಭಟನೆ ನಡೆಸಿದರು

ಜನ ಬೆಲೆ ಏರಿಕೆ ಮರೆತುಬಿಡುತ್ತಾರೆ: ಎಚ್‌ಡಿಕೆ



'ಬಸ್ ದರ ಏರಿಕೆ ಬಗ್ಗೆ ಜನ ಒಂದೆರಡು ದಿನ ಗೊಣಗುತ್ತಾರೆ. ಆಮೇಲೆ ಮರೆತುಹೋಗುತ್ತಾರೆ. ಗ್ಯಾರಂಟಿಗಳ ಸಂತೋಷದಲ್ಲಿ ಜನರು ಆಕ್ರೋಶ ವ್ಯಕ್ತಪಡಿಸುವುದನ್ನೇ ಮರೆತಿದ್ದಾರೆ' ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಸರ್ಕಾರ ಒಂದು ಕೈಯಲ್ಲಿ ಗ್ಯಾರಂಟಿಗಳನ್ನು ನೀಡಿ, ಇನ್ನೊಂದು ಕೈಯಲ್ಲಿ ಬೆಲೆ ಏರಿಕೆ ಮಾಡುತ್ತಿದೆ. ಆದರೆ ಜನರು ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಲೇ ಇಲ್ಲ' ಎಂದರು.

12ನೇ ಪುಟ ನೋಡಿ

ಬಿಜೆಪಿ ಅವಧಿಯಲ್ಲಿ ಶೇ 47.8ರಷ್ಟು ಏರಿಕೆ



2008ರಿಂದ 2013ರ ಅವಧಿಯಲ್ಲಿ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಅಂದು ಸಾರಿಗೆ ಸಚಿವರಾಗಿದ್ದ ಆರ್. ಅಶೋಕ ಅವರ ಅವಧಿಯಲ್ಲೇ ಏಳು ಬಾರಿ ಪ್ರಯಾಣದರ ಹೆಚ್ಚಳ ಮಾಡಿದ್ದಾರೆ. ಆಗ ಒಟ್ಟು ಶೇ 47.8ರಷ್ಟು ಏರಿಕೆ ಮಾಡಲಾಗಿತ್ತು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಬಿಜೆಪಿ ಅವಧಿಯಲ್ಲಿ ಸಾರಿಗೆ ನಿಗಮಗಳಿಗೆ ಬಿಟ್ಟು ಹೋಗಿದ್ದ ₹5,900 ಕೋಟಿ ಸಾಲದ ಹೊರೆ ತೀರಿಸಲು ಬಸ್ ಪ್ರಯಾಣ ದರ ಹೆಚ್ಚಳದ ನಿರ್ಧಾರ ತೆಗೆದುಕೊಂಡಿದ್ದೇವೆ' ಎಂದು ಸಮರ್ಥಿಸಿಕೊಂಡರು.

ಶಕ್ತಿ ಯೋಜನೆಯ ಹೊರೆ ಕಡಿಮೆ ಮಾಡಿಕೊಳ್ಳಲು ದರ ಹೆಚ್ಚಳ ಮಾಡಲಾಗಿದೆ ಎಂದು ಬಿಜೆಪಿ ಮುಖಂಡರು ಅಪಪ್ರಚಾರ ನಡೆಸುತ್ತಿದ್ದಾರೆ. ಮನುವಾದಿಗಳಿಗೆ ಮಹಿಳಾ ಸಬಲೀಕರಣ ಇಷ್ಟವಿಲ್ಲ. ಹಾಗಾಗಿ, ಶಕ್ತಿ ಯೋಜನೆ ವಿರೋಧಿಸುತ್ತಿದ್ದಾರೆ ಎಂದು ದೂರಿದರು.

2018ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 18.46ರಷ್ಟು ಹೆಚ್ಚಳ ಮಾಡಲಾಗಿತ್ತು. ಡೀಸೆಲ್ ದರ ಇಳಿಕೆಯ ನಂತರ ಮತ್ತೆ ಶೇ 2ರಷ್ಟು ಇಳಿಕೆ ಮಾಡಲಾಗಿತ್ತು. ಬಿ.ಎಸ್. ಯಡಿಯೂರಪ್ಪ 2020ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಶೇ 12ರಷ್ಟು ಹೆಚ್ಚಳ ಮಾಡಿದ್ದರು. 2023ರಲ್ಲಿ ಬಿಜೆಪಿ ಸರ್ಕಾರದ ಅವಧಿ ಮುಗಿದಾಗ ₹5,900 ಕೋಟಿ ಹೊರೆ ಉಳಿಸಿದ್ದರು ಎಂದು ವಿವರ ನೀಡಿದರು.

ಬಿಜೆಪಿ ಅವಧಿಯಲ್ಲಿ ಬೇಡಿಕೆಗಾಗಿ ಹೋರಾಟ ನಡೆಸಿದ್ದ 3 ಸಾವಿರ ನೌಕರರನ್ನು ವಜಾ ಮಾಡಿತ್ತು. 15 ಸಾವಿರ ನೌಕರರ ವಿರುದ್ಧ ಕ್ರಮ ಕೈಗೊಂಡಿತ್ತು ಎಂದರು.

12ನೇ ಪುಟ ನೋಡಿ

'ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ ತಡೆಗೆ ಕ್ರಮ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೇಶದ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಸೂಕ್ಷ್ಮ ವಿಷಯ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಈ ಪಿಡುಗನ್ನು ಎದುರಿಸಲು ಪರಿಣಾಮಕಾರಿ ಕಾರ್ಯವಿಧಾನ ರೂಪಿಸುವುದಾಗಿ ಶುಕ್ರವಾರ ಹೇಳಿದೆ.


ಕೇಂದ್ರ ಮತ್ತು ರಾಜ್ಯ ಸರ್ಕಾರದ ಅಧೀನದ ವಿಶ್ವವಿದ್ಯಾಲಯಗಳು, ಖಾಸಗಿ ಹಾಗೂ ಡೀಮ್ಡ್ ವಿ.ವಿಗಳಲ್ಲಿ ವಿದ್ಯಾರ್ಥಿಗಳು ಜಾತಿ ಆಧಾರಿತ ತಾರತಮ್ಯಕ್ಕೆ ಒಳಗಾಗುವುದನ್ನು ತಡೆಯಲು ರೂಪಿಸಿರುವ ಕರಡು ನಿಯಮಾವಳಿ ಸಂಬಂಧ ಅಧಿಸೂಚನೆ ಹೊರಡಿಸುವಂತೆ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾಂ ಅವರನ್ನೊಳಗೊಂಡ ಪೀಠವು, ವಿಶ್ವವಿದ್ಯಾಲಯ ಅನುದಾನ ಆಯೋಗಕ್ಕೆ (ಯುಜಿಸಿ) ನಿರ್ದೇಶನ ನೀಡಿತು.



ದೇಶದ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 2012ರ ನಿಯಮಾವಳಿಗಳ ಅಡಿಯಲ್ಲಿ ಜಾತಿ ತಾರತಮ್ಯದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಿರುವ ಒಟ್ಟು ದೂರುಗಳ ಮಾಹಿತಿಯನ್ನು ಆರು ವಾರಗಳ ಒಳಗಾಗಿ ನೀಡುವಂತೆಯೂ ಸೂಚಿಸಿತು.

11ನೇ ಪುಟ ನೋಡಿ

ಲಡಾಖ್: ಚೀನಾದಿಂದ 2 ಹೊಸ 'ಕೌಂಟಿ' ರಚನೆ



ನವದೆಹಲಿ(ಪಿಟಿಐ): ಕೇಂದ್ರಾಡಳಿತ ಪ್ರದೇಶ ಲಡಾಖ್ ವ್ಯಾಪ್ತಿಯ ಪ್ರದೇಶಗಳನ್ನು ಒಳಗೊಂಡಿರುವ ಎರಡು ಹೊಸ 'ಕೌಂಟಿ'ಗಳನ್ನು ಚೀನಾ ರಚಿಸಿದೆ. ಚೀನಾದ ಈ ನಡೆಯನ್ನು ತೀವ್ರವಾಗಿ ಖಂಡಿಸಿರುವ ಭಾರತ, 'ತೀವ್ರ ಪ್ರತಿಭಟನೆ' ದಾಖಲಿಸಿದ್ದಾಗಿ ಶುಕ್ರವಾರ ಹೇಳಿದೆ.

'ತನ್ನ ಭೂಪ್ರದೇಶ ಕುರಿತು ಭಾರತ ಹೊಂದಿರುವ ಸಾರ್ವಭೌಮತೆ ಹಾಗೂ ನಿಲುವಿನ ಮೇಲೆ, ಹೊಸ 'ಕೌಂಟಿ'ಗಳನ್ನು ಸೃಷ್ಟಿಸಿರುವ ಚೀನಾದ ನಡೆಯಿಂದ ಯಾವುದೇ ಪರಿಣಾಮ ಉಂಟಾಗದು. ಅಲ್ಲದೇ, ಇಂತಹ ನಡೆಯು, ಈ ಪ್ರದೇಶವನ್ನು 'ಅಕ್ರಮ'ವಾಗಿ ಹಾಗೂ 'ಬಲವಂತ'ದಿಂದ ಆಕ್ರಮಿಸಿಕೊಳ್ಳಲು ಚೀನಾಕ್ಕೆ ಯಾವುದೇ ಅಧಿಕಾರ ನೀಡುವುದಿಲ್ಲ' ಎಂದು ಭಾರತ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಹೋಟನ್ ಪ್ರಾಂತ್ಯವು ಚೀನಾದ ವಾಯವ್ಯ ಭಾಗದಲ್ಲಿರುವ ಜಿನ್‌ಜಿಯಾಂಗ್ ಪ್ರದೇಶದಲ್ಲಿದೆ. ಹೊಸದಾಗಿ ರಚಿಸಲಾಗಿರುವ 'ಕೌಂಟಿ'ಗಳು ಹೋಟನ್ ಪ್ರಾಂತ್ಯದಲ್ಲಿವೆ ಎಂದು ಚೀನಾ ಹೇಳಿಕೊಂಡಿದೆ. 'ನಮ್ಮ ಭೂಭಾಗವನ್ನು ಆಕ್ರಮಿಸಿಕೊಳ್ಳುವ ಚೀನಾದ 'ಕಾನೂನುಬಾಹಿರ' ಕ್ರಮವನ್ನು ಭಾರತ ಎಂದಿಗೂ ಒಪ್ಪಿಕೊಂಡಿಲ್ಲ' ಎಂದು ವಿದೇಶಾಂಗ ಸಚಿವಾಲಯ ವಕ್ತಾರ ರಣಧೀರ ಜೈಸ್ವಾಲ್ ಹೇಳಿದ್ದಾರೆ.

> **ಲಡಾಖ್‌ಗೆ ಸೇರಿದ ಪ್ರದೇಶ ಒಳಗೊಂಡ ಎರಡು ಹೊಸ ಕೌಂಟಿಗಳ ರಚನೆ ಖಂಡಿಸಿ ಭಾರತ ಪ್ರತಿಭಟನೆ ದಾಖಲಿಸಿದೆ**
> **ರಣಧೀರ ಜೈಸ್ವಾಲ್**, ವಿದೇಶಾಂಗ ಸಚಿವಾಲಯ ವಕ್ತಾರ

'ಚೀನಾದ ಹೋಟನ್ ಪ್ರಾಂತ್ಯದಲ್ಲಿ ಎರಡು ಹೊಸ ಕೌಂಟಿಗಳನ್ನು ಸ್ಥಾಪನೆ ಮಾಡಿರುವುದಕ್ಕೆ ಸಂಬಂಧಿಸಿದ ಪ್ರಕಟಣೆಯನ್ನು ನಾವು ನೋಡಿದ್ದೇವೆ. ಕೇಂದ್ರಾಡಳಿತ ಪ್ರದೇಶ ಲಡಾಖ್‌ನ ಕೆಲ ಪ್ರದೇಶಗಳನ್ನು ಚೀನಾ ತನ್ನ ಹೊಸ 'ಕೌಂಟಿ'ಗಳ ವ್ಯಾಪ್ತಿಗೆ ಸೇರಿಸಿದೆ' ಎಂದು ಹೇಳಿದ್ದಾರೆ.

ಪೂರ್ವ ಲಡಾಖ್ ಗಡಿಯಲ್ಲಿ ನಾಲ್ಕೂವರೆ ವರ್ಷಗಳಿಂದ ನಿರ್ಮಾಣವಾಗಿದ್ದ ಸಂಘರ್ಷಮಯ ಸ್ಥಿತಿ ತಿಳಿಗೊಳಿಸುವ ಸಂಬಂಧ ಎರಡೂ ದೇಶಗಳ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದವು.

ಉಭಯ ದೇಶಗಳ ನಡುವೆ ವಿಶ್ವಾಸವೃದ್ಧಿಗಾಗಿ, ಗಡಿ ಸ್ಥಳಗಳಲ್ಲಿ ನಿಯೋಜನೆಗೊಂಡಿದ್ದ ಯೋಧರನ್ನು ಹಿಂದಕ್ಕೆ ಕರೆಸಿಕೊಳ್ಳುವ ಪ್ರಕ್ರಿಯೆ ಕೂಡ ಪೂರ್ಣಗೊಂಡಿದೆ. ಆದರೆ, ಚೀನಾ ಈ ಹೊಸ ಕ್ಯಾತೆ ತೆಗೆದಿದೆ.

ಮೆಡಿಕಲ್ ಸೀಟು ಖಾಲಿ ಉಳಿಸುವಂತಿಲ್ಲ

ನವದೆಹಲಿ (ಪಿಟಿಐ): 'ವೈದ್ಯಕೀಯ ಶಿಕ್ಷಣ ಕೋರ್ಸ್‌ಗಳ ಸೀಟುಗಳು ಖಾಲಿ ಉಳಿಯಬಾರದು' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

'ಈ ಕುರಿತು ರಚನೆಯಾಗಿದ್ದ ಸಮಿತಿಯ ಶಿಫಾರಸುಗಳನ್ನು ಪರಿಗಣಿಸಲು ವಿವಿಧ ರಾಜ್ಯಗಳು ಹಾಗೂ ಭಾಗಿದಾರರ ಸಭೆ ಆಯೋಜಿಸಬೇಕು' ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿತು.

'ಮೂರು ತಿಂಗಳ ಅವಧಿಯಲ್ಲಿ ಈ ಕುರಿತು ಸ್ಪಷ್ಟ ತೀರ್ಮಾನ ಕೈಗೊಳ್ಳಬೇಕು' ಎಂದೂ ಸಲಹೆ ನೀಡಿರುವ ಪೀಠವು ಈ ಕುರಿತ ವಿಚಾರಣೆಯನ್ನು ಏಪ್ರಿಲ್ ತಿಂಗಳಿಗೆ ಮುಂದೂಡಿತು.

ಸುಪ್ರೀಂ ಕೋರ್ಟ್ 2023ರ ಏಪ್ರಿಲ್‌ನಲ್ಲಿ 'ವೈದ್ಯಕೀಯ ಕೋರ್ಸ್‌ಗಳಲ್ಲಿ ಸೂಪರ್ ಸ್ಪೆಷಾಲಿಟಿ ಸೀಟುಗಳು ಖಾಲಿ ಉಳಿಯುತ್ತಿವೆ' ಎನ್ನುವ ವಿಷಯ ಕುರಿತು ವಿಚಾರಣೆ ಆರಂಭಿಸಿತ್ತು.

ಕೇಂದ್ರ ಸರ್ಕಾರ ಆ ಬಳಿಕ ಆರೋಗ್ಯ ಸಚಿವಾಲಯದ ಪ್ರಧಾನ ನಿರ್ದೇಶಕರ ಅಧ್ಯಕ್ಷತೆಯಲ್ಲಿ ವಿವಿಧ ರಾಜ್ಯಗಳು, ಖಾಸಗಿ ವೈದ್ಯಕೀಯ ಕಾಲೇಜುಗಳ ಪ್ರತಿನಿಧಿಗಳಿರುವ ಸಮಿತಿ ರಚಿಸಿತ್ತು.

'ಈ ಸಮಿತಿಯು ಕೇಂದ್ರ ಸರ್ಕಾರಕ್ಕೆ ತನ್ನ ವರದಿಯನ್ನು ನೀಡಿದೆ. ಸಂಬಂಧಪಟ್ಟ ಪ್ರಮುಖರ ಜೊತೆಗೆ ಸಭೆ ನಡೆಸಿ ಸ್ಪಷ್ಟ ಪ್ರಸ್ತಾವ ಸಲ್ಲಿಸಬಹುದು' ಎಂದು ಶುಕ್ರವಾರ ವಿಚಾರಣೆಯ ವೇಳೆ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ವಕೀಲರು ಪೀಠದ ಗಮನಕ್ಕೆ ತಂದರು. ಇದನ್ನು ಮಾನ್ಯ ಮಾಡಿದ ಪೀಠವು 'ಸಭೆ ಏರ್ಪಡಿಸಬೇಕು' ಎಂದು ಕೇಂದಕ್ಕೆ ಸೂಚಿಸಿತು.

3ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸಂಚಾರ ನಿರ್ಬಂಧ, ಪರ್ಯಾಯ ಮಾರ್ಗದ ವ್ಯವಸ್ಥೆ

ಚಿತ್ರಕಲಾ ಪರಿಷತ್: ಚಿತ್ರಸಂತೆ ನಾಳೆ

ಪ್ರಜಾವಾಣಿ ವಾರ್ತೆ



ಚಿತ್ರಕಲಾ ಪರಿಷತ್‌ನಲ್ಲಿ ಭಾನುವಾರ ನಡೆಯುವ 22ನೇ ಚಿತ್ರಸಂತೆಗೆ ವಿದ್ಯಾರ್ಥಿಗಳು ಸಿದ್ಧತೆಯಲ್ಲಿ ತೊಡಗಿದ್ದ ದೃಶ್ಯ ಶುಕ್ರವಾರ ಕಂಡುಬಂತು
ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ ವತಿಯಿಂದ ಭಾನುವಾರ (ಜ.5ರಂದು) ಕುಮಾರಕೃಪಾ ರಸ್ತೆಯಲ್ಲಿ 22ನೇ ಚಿತ್ರಸಂತೆ ಆಯೋಜಿಸಲಾಗಿದ್ದು, ಕುಮಾರಕೃಪಾ ರಸ್ತೆಯ ವಿಂಡ್ಸರ್ ಮ್ಯಾನರ್ ವೃತ್ತದಿಂದ ಶಿವಾನಂದ ವೃತ್ತದವರೆಗೆ (ಈಶಾನ್ಯ ದಿಕ್ಕಿನಿಂದ ನೈರುತ್ಯ ದಿಕ್ಕಿನ ಕಡೆಗೆ) ಅಂದು ಎಲ್ಲ ಮಾದರಿಯ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಚಿತ್ರಸಂತೆಯಲ್ಲಿ ಭಾಗವಹಿಸುವ ವಿವಿಧ ರಾಜ್ಯಗಳ ಕಲಾವಿದರು ಕಲಾಕೃತಿಗಳನ್ನು ಚಿತ್ರಕಲಾ ಪರಿಷತ್ ಆವರಣ ಹಾಗೂ ಕುಮಾರ ಕೃಪಾ ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗದಲ್ಲಿ ಪ್ರದರ್ಶನಕ್ಕೆ ಇಡಲಿದ್ದಾರೆ. ಕಲಾಕೃತಿಯ ವೀಕ್ಷಣೆ ಹಾಗೂ ಖರೀದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಲಾಭಿಮಾನಿಗಳು, ಕಲಾವಿದರು ಹಾಗೂ ಸಾರ್ವಜನಿಕರು ಬರುವ ನಿರೀಕ್ಷೆಯಿದ್ದು, ಭಾನುವಾರ ಬೆಳಿಗ್ಗೆ 6ರಿಂದ ರಾತ್ರಿ 9 ಗಂಟೆವರೆಗೆ ಈ ಮಾರ್ಗದಲ್ಲಿ ವಾಹನ ಸಂಚಾರ ನಿಷೇಧಿಸಲಾಗಿದೆ. ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಅಲ್ಲದೇ ಚಿತ್ರಸಂತೆಗೆ ಬರುವವರಿಗೆ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಪರ್ಯಾಯ ಮಾರ್ಗ

- ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಕುಮಾರಕೃಪಾ ರಸ್ತೆಯ ಕಡೆಗೆ ತೆರಳುವ ವಾಹನಗಳು ರೇಸ್ ವ್ಯೂ ಜಂಕ್ಷನ್‌ನಲ್ಲಿ ಬಸವೇಶ್ವರ ವೃತ್ತಕ್ಕೆ ನೇರವಾಗಿ ಸಾಗಿ ಅಲ್ಲಿಂದ ಬಸವೇಶ್ವರ ವೃತ್ತದಲ್ಲಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು. ಹಳೇ ಹೈಗ್ರೌಂಡ್ಸ್ ಜಂಕ್ಷನ್ ವಿಂಡ್ಸರ್ ಮ್ಯಾನರ್ ಜಂಕ್ಷನ್ ಮೂಲಕ ಸಾಗಬಹುದು.
- ಟಿ.ಚೌಡಯ್ಯ ರಸ್ತೆಯಿಂದ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕುಮಾರಕೃಪಾ ರಸ್ತೆಗೆ ಪ್ರವೇಶ ಪಡೆಯುವ ವಾಹನಗಳು, ವಿಂಡ್ಸರ್ ಮ್ಯಾನರ್ ವೃತ್ತದಲ್ಲಿಯೇ ಕುಮಾರಕೃಪಾ ರಸ್ತೆಗೆ ಪ್ರವೇಶ ಪಡೆಯುವುದನ್ನು ನಿರ್ಬಂಧಿಸಲಾಗಿದೆ. ಹಳೇ ಹೈಗ್ರೌಂಡ್ಸ್ ಜಂಕ್ಷನ್‌ಗೆ ನೇರವಾಗಿ ಸಾಗಿ, ಎಲ್‌ಆರ್‌ಡಿಇ ಬಳಿ ಬಲಕ್ಕೆ ತಿರುವು ಪಡೆದು ಬಸವೇಶ್ವರ ವೃತ್ತ– ರೇಸ್ ಕೋರ್ಸ್ ರಸ್ತೆ ಮೂಲಕ ಮುಂದಕ್ಕೆ ಸಾಗಲು ವ್ಯವಸ್ಥೆ ಕಲ್ಪಿಸಲಾಗಿದೆ.
- ಟಿ.ಚೌಡಯ್ಯ ರಸ್ತೆಯಲ್ಲಿ ಹೈಗ್ರೌಂಡ್ಸ್ ಜಂಕ್ಷನ್‌ನಿಂದ ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕುಮಾರಕೃಪಾ ರಸ್ತೆಗೆ ಪ್ರವೇಶ ಪಡೆಯುವ ವಾಹನಗಳು ನೇರವಾಗಿ ಸಾಗಿ, ಆರ್‌ಪಿ ರಸ್ತೆ ಮೂಲಕ ಮುಂದಕ್ಕೆ ಸಾಗಲು ವ್ಯವಸ್ಥೆ ಕಲ್ಪಿಸಲಾಗಿದೆ.
- ನೆಹರೂ ವೃತ್ತದಿಂದ ಉಕ್ಕಿನ ಸೇತುವೆ (ಸ್ಟೀಲ್ ಬ್ರಿಡ್ಜ್) ಕೆಳಭಾಗದಲ್ಲಿ ಶಿವಾನಂದ ವೃತ್ತದ ಮೂಲಕ ಟ್ರಿಲೈಟ್ ಜಂಕ್ಷನ್ ಮತ್ತು ರೇಸ್ ಕೋರ್ಸ್ ಕಡೆಗೆ ಸಾಗುವ ವಾಹನಗಳು ನೆಹರೂ ವೃತ್ತದಿಂದ ಉಕ್ಕಿನ ಮೇಲ್ಸೇತುವೆಯಲ್ಲಿ ಸಾಗಿ ಟ್ರಿಲೈಟ್ ಜಂಕ್ಷನ್ ಹಾಗೂ ರೇಸ್ ಕೋರ್ಸ್ ರಸ್ತೆ ಕಡೆಗೆ ತೆರಳಬಹುದಾಗಿದೆ.
- ಮೌರ್ಯ ವೃತ್ತ ಮತ್ತು ಆನಂದರಾವ್ ವೃತ್ತದ ಕಡೆಯಿಂದ ಬರುವ ವಾಹನ ಸಂಚಾರವನ್ನು ಶಿವಾನಂದ ಜಂಕ್ಷನ್ ಮೂಲಕ ಕೆ.ಕೆ.ರಸ್ತೆ ಪ್ರವೇಶ ನಿರ್ಬಂಧಿಸಲಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಟ್ರಿಲೈಟ್ ಜಂಕ್ಷನ್ –ಬಸವೇಶ್ವರ ವೃತ್ತ – ಹಳೇ ಹೈಗ್ರೌಂಡ್ಸ್ ಜಂಕ್ಷನ್ – ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಮುಂದಕ್ಕೆ ಸಾಗಬಹುದಾಗಿದೆ.
- ಟಿ.ಚೌಡಯ್ಯ ರಸ್ತೆಯಿಂದ ಬಂದು ವಿಂಡ್ಸರ್ ಮ್ಯಾನರ್ ವೃತ್ತದ ಮೂಲಕ ಕೆ.ಕೆ.ರಸ್ತೆ ಪ್ರವೇಶಿಸುವ ವಾಹನಗಳನ್ನು ವಿಂಡ್ಸರ್ ಮ್ಯಾನರ್ ಬಳಿ ನಿರ್ಬಂಧಿಸಲಾಗಿದೆ. ವಾಹನಗಳು ಟಿ.ಚೌಡಯ್ಯ ರಸ್ತೆ ಹಳೇ ಹೈಗ್ರೌಂಡ್ಸ್ ಜಂಕ್ಷನ್ - ಎಲ್‌ಆರ್‌ಡಿಇ- ಬಸವೇಶ್ವರ ವೃತ್ತ- ರೇಸ್ ಕೋರ್ಸ್ ರಸ್ತೆ ಮೂಲಕ ಮುಂದಕ್ಕೆ ಸಾಗಬಹುದಾಗಿದೆ.

'ಸಾರ್ವಜನಿಕ ಸಾರಿಗೆ ಬಳಸಿ'

ವಾಹನಗಳ ನಿಲುಗಡೆಗೆ ಕೆ.ಕೆ. ರಸ್ತೆಯ ಸುತ್ತಮುತ್ತ ಸ್ಥಳಾವಕಾಶ ಕೊರತೆ ಇರುವುದರಿಂದ ಕಾರ್ಯ-ಕ್ರಮಕ್ಕೆ ಬರುವವರು ಬಿಎಂಟಿಸಿ ಬಸ್, ಮೆಟ್ರೊ, ಒಲಾ, ಊಬರ್ ಸೇರಿದಂತೆ ಇತರೆ ಸಾರ್ವಜನಿಕ ಸಾರಿಗೆ ಸಂಪರ್ಕವನ್ನು ಬಳಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

ವಾಹನ ನಿಲುಗಡೆ

- ರೈಲ್ವೆ ಪ್ಯಾರಲಲ್ ರಸ್ತೆಯಲ್ಲಿ ನಾಲ್ಕು ಚಕ್ರಗಳ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.
- ಕ್ರೆಸೆಂಟ್ ರಸ್ತೆಯಲ್ಲಿ, ಗುರುರಾಜ ಕಲ್ಯಾಣ ಮಂಟಪದಿಂದ ಹೋಟೆಲ್ ಜನಾರ್ದನದವರೆಗೆ ರಸ್ತೆಯ ಪಶ್ಚಿಮಕ್ಕೆ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಲಾಗಿದೆ.
- ರೇಸ್‌ಕೋರ್ಸ್ ರಸ್ತೆ, ಟ್ರಿಲೈಟ್ ಜಂಕ್ಷನ್ ನಿಂದ ಮೌರ್ಯ ಜಂಕ್ಷನ್‌ವರೆಗೆ, ರಸ್ತೆಯ ಪೂರ್ವ ಭಾಗಕ್ಕೆ ನಾಲ್ಕು ಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ

ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಲು ಆಗ್ರಹ

ಬೆಂಗಳೂರು: ರಸ್ತೆ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಶೇ 15ರಷ್ಟು ಏರಿಕೆ ಮಾಡಿರುವುದನ್ನು ಹಿಂಪಡೆಯಬೇಕು. ನಮ್ಮ ಮೆಟ್ರೊ ದರ ಏರಿಕೆಯ ಪ್ರಸ್ತಾವ ಕೈಬಿಡಬೇಕು ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷ ಆಗ್ರಹಿಸಿದೆ.

ಆಹಾರ ಪದಾರ್ಥಗಳ ಬೆಲೆ ಏರಿಕೆ, ಇಂಧನ ಹಣದುಬ್ಬರದ ಬಿಸಿಯಿಂದ ರಾಜ್ಯದ ಜನರು ಬಸವಳಿದಿದ್ದಾರೆ. ಆಧುನಿಕ ಬದುಕಿನ ಮೂಲ ಅವಶ್ಯಕತೆಯಾಗಿರುವ ಸಾರಿಗೆ ನಿಗಮಗಳ ಬಸ್ ಟಿಕೆಟ್ ದರ ಏರಿಕೆ ಮಾಡಿರುವುದು ಗಾಯದ ಮೇಲೆ ಬರೆ ಎಳೆದಂತಾಗುತ್ತದೆ. ಹೊಸ ವರ್ಷಕ್ಕೆ ಸರ್ಕಾರವು ಜನರಿಗೆ ಸಂಕಷ್ಟ ತರುವ ಉಡುಗೊರೆ ನೀಡಿದೆ ಎಂದು ಎಸ್‌ಯುಸಿಐ ರಾಜ್ಯ ಘಟಕದ ಕಾರ್ಯದರ್ಶಿ ಕೆ. ಉಮಾ ಟೀಕಿಸಿದ್ದಾರೆ.

ರಾಜ್ಯ ಸರ್ಕಾರದ ಶಕ್ತಿ ಯೋಜನೆಯ ಬಾಕಿ ಹಣವನ್ನು ತಡ ಮಾಡದೆ ಸಾರಿಗೆ ನಿಗಮಗಳಿಗೆ ಪಾವತಿ ಮಾಡಬೇಕು. ಸಾರಿಗೆ ನಿಗಮಗಳಲ್ಲಿರುವ ಭ್ರಷ್ಟಾಚಾರ, ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಬೇಕಾದ ನ್ಯಾಯಸಮ್ಮತ ತೆರಿಗೆ ಬಾಕಿ ಪಾವತಿಸಬೇಕು. ಆ ಮೂಲಕ ಸಾರಿಗೆ ಸಂಸ್ಥೆಗಳ ಆದಾಯ ಕೊರತೆಯನ್ನು ತುಂಬಬೇಕು ಎಂದು ಒತ್ತಾಯಿಸಿದ್ದಾರೆ.

'ಬೀದಿ ವ್ಯಾಪಾರ ಜಾಗ ಗುರುತಿಸಿ'

ಬೆಂಗಳೂರು: ಪಶ್ಚಿಮ ವಲಯ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರ ಮಾಡಲು ಅವಕಾಶವಿರುವ ರಸ್ತೆಗಳನ್ನು ಮಾರ್ಗಸೂಚಿ ಅನುಸಾರ ಗುರುತಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಪಶ್ಚಿಮ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಲ್ಲಿ ಸಾರ್ವಜನಿಕ-ರಿಂದ ಶುಕ್ರವಾರ ಅಹವಾಲು ಸ್ವೀಕರಿಸಿದ ಅವರು ಅಧಿಕಾರಿಗಳಿಗೆ ಆದೇಶ ನೀಡಿದರು.

'ವ್ಯಾಪಾರ ವಲಯವನ್ನು ಗುರುತಿಸುವವರೆಗೆ ಸಮಸ್ಯೆ ಮಾಡಬಾರದು' ಎಂದು ಬೀದಿಬದಿ ವ್ಯಾಪಾರಿಗಳು ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಆಯುಕ್ತರು, 'ಪಶ್ಚಿಮ ವಲಯದಲ್ಲಿ ಸುಮಾರು ಏಳು ಸಾವಿರ ಬೀದಿ ಬದಿ ವ್ಯಾಪಾರಿಗಳನ್ನು ಗುರುತಿಸಲಾಗಿದೆ. ಪಾಲಿಕೆಯಿಂದ ವ್ಯಾಪಾರ ವಲಯ ಗುರುತಿಸುವ ಕೆಲಸ ನಡೆಯುತ್ತಿದೆ. ಅದು ಮುಗಿಯುವವರೆಗೆ ಯಾವ ರಸ್ತೆಗಳಲ್ಲಿ ವ್ಯಾಪಾರ ಮಾಡಬಹುದು ಎಂಬುದನ್ನು ಪರಿಶೀಲಿಸಿ, ಅವಕಾಶ ಕಲ್ಪಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದರು.

ಚಾಮರಾಜಪೇಟೆಯ ಟಿ.ಆರ್. ಮಿಲ್ ಬಳಿಯ ರುದ್ರಭೂಮಿಯಲ್ಲಿ ವಿದ್ಯುತ್ ಚಿತಾಗಾರ ನಿರ್ಮಾಣಕ್ಕೆ ಪ್ರಸ್ತಾವ ಸಲ್ಲಿಸಲು ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಸೂಚಿಸಿದರು.

ವಲಯ ಆಯುಕ್ತೆ ಅರ್ಚನಾ, ವಲಯ ಜಂಟಿ ಆಯುಕ್ತ ಸಂಗಪ್ಪ, ಉಪ ಆಯುಕ್ತ ಶ್ರೀನಿವಾಸ್ ಉಪಸ್ಥಿತರಿದ್ದರು.

ಮನಮೋಹನ ಸಿಂಗ್ ಸ್ಮರಣಾರ್ಥ ಉಪನ್ಯಾಸ: ಯೋಗೇಂದ್ರ ಯಾದವ್ ಅಭಿಮತ

‘ಸಲಹೆ ಕೇಳದ ಪ್ರಧಾನಿಯಿಂದಲೇ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದಾಗ, ಅವರಿಗೆ ಯಾರೋ ಸಲಹೆ ನೀಡಿ ಸರ್ಕಾರ ನಡೆಸುತ್ತಿದ್ದರು ಎಂಬ ಅಪವಾದ ಇತ್ತು. ಆದರೆ ಸಲಹೆ ಕೇಳದ ಪ್ರಧಾನಿಯೇ ದೇಶಕ್ಕೆ ಅಪಾಯಕಾರಿ’ ಎಂದು ಸಾಮಾಜಿಕ ಕಾರ್ಯಕರ್ತ ಯೋಗೇಂದ್ರ ಯಾದವ್ ಹೇಳಿದರು.

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಸ್ಮರಣಾರ್ಥ ಜಾಗೃತ ಕರ್ನಾಟಕವು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅವರಿಗೆ ಸಲಹೆ ನೀಡುತ್ತಿದ್ದವರಾದರೂ ಯಾರು? ಪ್ರಧಾನಿಯಾಗಿ ಎಂದು ಜನರು ಆಯ್ಕೆ ಮಾಡಿದರೂ, ಆ ಹುದ್ದೆಯನ್ನು ನಿರಾಕರಿಸಿದವರು ಸಲಹೆ ನೀಡುತ್ತಿದ್ದರು. ಅದು ನಿಜವೇ ಆಗಿದ್ದರೆ, ಪ್ರಧಾನಿ ಒಬ್ಬರಿಗೆ ಅಹಮದಾಬಾದಿನ ಉದ್ಯಮಿಯೊಬ್ಬ ಮಾರ್ಗದರ್ಶನ ನೀಡುವಷ್ಟು ಅಪಾಯಕಾರಿಯಂತೂ ಅಲ್ಲ’ ಎಂದರು.

‘ಸಲಹೆ ಅಥವಾ ಮಾರ್ಗದರ್ಶನ ಪಡೆದುಕೊಳ್ಳುವುದರಲ್ಲಿ ಯಾವ ತಪ್ಪಿದೆ? ತನಗೆಲ್ಲ ಗೊತ್ತಿದೆ ಎಂದು ನಿರ್ಧಾರ ತೆಗೆದುಕೊಳ್ಳುವ ಪ್ರಧಾನಿಯಿಂದಲೇ ದೇಶಕ್ಕೆ ಅಪಾಯ. ಪ್ರಧಾನಿ ಸಲಹೆ ಪಡೆಯುವಂತವರಾಗಿದ್ದರೆ, ದೇಶದಲ್ಲಿ ನೋಟು ರದ್ದತಿಯಂತ ಯಾವುದೇ ಕ್ರಮ ಜಾರಿಯಾಗುತ್ತಿರಲಿಲ್ಲ’ ಎಂದರು.

‘ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಮನಮೋಹನ ಸಿಂಗ್ ಅವರ ಸರ್ಕಾರದ ವಿರುದ್ಧ ನಾನೂ ಮಾತನಾಡಿದ್ದೇನೆ. ಹಾಗೆಂದು ಅವರು ತಪ್ಪು ಮಾಡಿದ್ದರು ಎಂದರ್ಥವಲ್ಲ. ಅವರ ಆರ್ಥಿಕ ನೀತಿಗಳು ಯಾವೊಬ್ಬ ಉದ್ಯಮಿ ಅಥವಾ ವ್ಯಾಪಾರಿಯ ಪರವಾಗಿ ಇರಲಿಲ್ಲ. ಬದಲಿಗೆ ದೇಶದ ಕೋಟ್ಯಂತರ ಜನರ ಒಳಿತಿಗಾಗಿ ಕೆಲಸ ಮಾಡಿದ್ದರು’ ಎಂದರು.

ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ. ಅತೀಕ್, ‘ನಮ್ಮದು ಸಮಾಜವಾದಿ ಆರ್ಥಿಕತೆ ಎಂದು ಹೇಳಿದರೂ ಎಲ್ಲ ಅಧಿಕಾರವು ಅಧಿಕಾರಿಗಳಲ್ಲಿ ಕೇಂದ್ರೀಕೃತವಾಗಿತ್ತು. ಮನಮೋಹನ ಸಿಂಗ್ ಅವರು ಉದಾರವಾದಿ ಆರ್ಥಿಕ ನೀತಿ ತರುವ ಮೂಲಕ ನಿಜವಾದ ಸಮಾಜವಾದದತ್ತ ದೇಶವನ್ನು ಕೊಂಡೊಯ್ದಿದ್ದರು. ಪ್ರಧಾನಿಯಾಗಿದ್ದಾಗ ಆಹಾರ ಭದ್ರತಾ ಕಾಯ್ದೆ, ಆರ್‌ಟಿಇ, ಆರ್‌ಟಿಐ ಮತ್ತು ನರೇಗಾದಂತಹ ನೀತಿಗಳನ್ನು ರೂಪಿಸಿ, ವಿಸ್ತೃತ ಕಲ್ಯಾಣ ರಾಜ್ಯದ ಕಾರ್ಯಸೂಚಿಯನ್ನು ಅನುಷ್ಠಾನಕ್ಕೆ ತಂದರು’ ಎಂದರು.



ಶುಕ್ರವಾರ ನಡೆದ ವಿಚಾರಸಂಕಿರಣದಲ್ಲಿ ಯೋಗೇಂದ್ರ ಯಾದವ್ ಮತ್ತು ಎಲ್‌.ಕೆ. ಅತೀಕ್ ಸಮಾಲೋಚನೆ ನಡೆಸಿದರು ಪ್ರಜಾವಾಣಿ ಚಿತ್ರ

‘ಸಾಲಮನ್ನಾ ಆರ್ಥಿಕತೆಯ ಅನಿವಾರ್ಯ’

‘ಸಾಲಮನ್ನಾ ಮಾಡುವುದರಿಂದ ರೈತರು ಅದಕ್ಕೇ ಜೋತು ಬೀಳುತ್ತಾರೆ. ಹೀಗಾಗಿ ಸಾಲ ಮನ್ನಾ ಮಾಡಬಾರದು ಎಂಬುದು ಅಧಿಕಾರಿಗಳ ವಲಯದಲ್ಲಿ ಚಾಲ್ತಿಯಲ್ಲಿದ್ದ ಮಾತು. ಯುಪಿಎ–2 ಅವಧಿಯಲ್ಲಿ ಪ್ರಧಾನಿ ಕಾರ್ಯಾಲಯದ ಅಡಿಯಲ್ಲಿ ಕೆಲಸ ಮಾಡುವಾಗ ನಾನೂ ಈ ಮಾತನ್ನು ನಂಬುತ್ತಿದ್ದೆ. ಆ ಅನಿಸಿಕೆಯನ್ನು ಬದಲಿಸಿದ್ದು ಮನಮೋಹನ ಸಿಂಗ್ ಅವರು’ ಎಂದು ಎಲ್‌.ಕೆ.ಅತೀಕ್ ಹೇಳಿದರು.

‘ಸಾಲಮನ್ನಾ ಕುರಿತ ಸಭೆಯಲ್ಲಿ ವಿರೋಧ ವ್ಯಕ್ತವಾದಾಗ ಮನಮೋಹನ ಸಿಂಗ್ ಅವರು, ರೈತ ಕೃಷಿಗಾಗಿ ಮಾಡುವ ವೆಚ್ಚಕ್ಕಿಂತ ಆತನಿಗೆ ದೊರೆಯುವ ಮೊತ್ತ ತೀರಾ ಕಡಿಮೆ. ಕೃಷಿ ಕಾರ್ಮಿಕರು ತಯಾರಿಕಾ ವಲಯದತ್ತ ಹೋಗಬೇಕು ಎಂಬ ನೀತಿಯ ಕಾರಣದಿಂದಲೇ ರೈತ ನಷ್ಟ ಅನುಭವಿಸುತ್ತಾನೆ. ಹೀಗಾಗಿಯೇ ಆತ ಸಾಲಕ್ಕೆ ಸಿಲುಕುತ್ತಾನೆ. ಇದು ಆರ್ಥಿಕತೆಯ ಭಾಗವೇ ಆಗಿರುವ ಕಾರಣ ಸಾಲ ಮನ್ನಾ ಮಾಡುವುದೂ ಆರ್ಥಿಕತೆಯ ಅನಿವಾರ್ಯಗಳಲ್ಲಿ ಒಂದು ಎಂದು ಮನವರಿಕೆ ಮಾಡಿಕೊಟ್ಟರು’ ಎಂದರು.

‘ಮೆಡಿಕಲ್ ಸೀಟು ಖಾಲಿ ಉಳಿಸುವಂತಿಲ್ಲ’

ಒಂದನೇ ಪುಟದಿಂದ...

‘ಮಹತ್ವದ ಸುಮಾರು 1,003 ಸೂಪರ್ ಸ್ಪೆಷಾಲಿಟಿ ಸೀಟುಗಳು ಖಾಲಿ ಉಳಿದಿವೆ ಎಂಬುದು ಕಳವಳಕಾರಿ-ಯಾದ ಸ್ಥಿತಿ’ ಎಂದು ಸುಪ್ರೀಂ ಕೋರ್ಟ್ 2003ರ ಏಪ್ರಿಲ್‌ನಲ್ಲಿ ಹೇಳಿತ್ತು.

‘ಒಂದೆಡೆ ಸೂಪರ್ ಸ್ಪೆಷಾಲಿಟಿ ವೈದ್ಯರ ಕೊರತೆ ಎದುರಿಸುತ್ತಿದ್ದೇವೆ, ಇನ್ನೊಂದು ಕಡೆ ಅದಕ್ಕೆ ಸಂಬಂಧಿತ ಸೀಟುಗಳು ಖಾಲಿ ಉಳಿಯುತ್ತಿವೆ’ ಎಂದು ಪೀಠ ಅಭಿಪ್ರಾಯಪಟ್ಟಿತ್ತು.



ಐಸಿಸಿ ಕ್ರಮಾಂಕ ಪಟ್ಟಿಯ ಪ್ರಕಾರ ಬುಮ್ರಾ ಅಗ್ರ ಕ್ರಮಾಂಕದ ಭಾರತೀಯ ಬೌಲರ್ ಆಗಿದ್ದಾರೆ!

ಜಾತಿ ನಿಂದನೆ ಆರೋಪ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹೋದ್ಯೋಗಿಗಳು ನನಗೆ ಜಾತಿ ನಿಂದನೆ ಮಾಡಿದ್ದಾರೆ’ ಎಂದು ಆರೋಪಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಂಜ್‌ಮೆಂಟ್ (ಐಐಎಂ-ಬಿ) ಸಹ ಪ್ರಾಧ್ಯಾಪಕರೊಬ್ಬರು ನೀಡಿದ್ದ ದೂರಿನ ಅನ್ವಯ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

‘ನಮ್ಮ ವಿರುದ್ಧದ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಐಐಎಂ-ಬಿ ನಿರ್ದೇಶಕ ರಿಷಿಕೇಶ ಟಿ.ಕೃಷ್ಣನ್ ಸೇರಿದಂತೆ ಎಂಟು ಮಂದಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನ್‌ಗೌಡರ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ದೂರುದಾರ ಗೋಪಾಲ್ ದಾಸ್ ಅವರಿಗೆ ತುರ್ತು ನೋಟಿಸ್ ಮತ್ತು ಪ್ರತಿವಾದಿ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಮುಂದಿನ ವಿಚಾರಣೆ ತನಕ ಎಫ್‌ಐಆರ್‌ಗೆ ತಡೆ ವಿಧಿಸಿ ಆದೇಶಿಸಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ವಾದ ಮಂಡಿಸಿದರು.

ಗಾಂಧಿ ಬಜಾರ್ ಆಧುನೀಕರಣ ಪ್ರಶ್ನಿಸಿದ್ದ ಪಿಐಎಲ್ ವಜಾ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಗಾಂಧಿ ಬಜಾರ್ ಮಾರುಕಟ್ಟೆ ಬೀದಿಯ ಮರು ವಿನ್ಯಾಸ ಯೋಜನೆ’ ಪ್ರಶ್ನಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ, ‘ಹೆರಿಟೇಜ್ ಬಸವನಗುಡಿ ರೆಸಿಡೆಂಟ್ಸ್ ವೆಲ್ಫೇರ್ ಫೋರಂ’ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಯೋಜನೆಯ ಅನುಷ್ಠಾನ 2022ರ ಡಿಸೆಂಬರ್‌ನಲ್ಲೇ ಆರಂಭವಾಗಿದೆ. ಈಗಾಗಲೇ ಶೇ 95ರಷ್ಟು ಪೂರ್ಣಗೊಂಡಿದೆ. ಇದಕ್ಕಾಗಿ ₹24.88 ಕೋಟಿ ವ್ಯಯಿಸಲಾಗಿದೆ. ಬಾಕಿ ಉಳಿದಿರುವ ಶೇ 5ರಷ್ಟು ಕಾಮಗಾರಿ 2025ರ ಜನವರಿಯಲ್ಲಿ ಪೂರ್ಣಗೊಳ್ಳಲಿದೆ. ಈ ಹಂತದಲ್ಲಿ ಯೋಜನೆಗೆ ಯಾವುದೇ ಮಾರ್ಪಾಡು ಮಾಡಲು ನಿರ್ದೇಶಿಸಿದರೆ ಅದರಿಂದ ತೊಂದರೆ ಉಂಟಾಗಲಿದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಜನರ ಅನುಕೂಲಕ್ಕಾಗಿಯೇ ಈ ಯೋಜನೆ ಜಾರಿಗೊಳಿಸುತ್ತಿರುವ ಕಾರಣ, ಯೋಜನೆ ಜಾರಿ ಮಾಡದಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂಬ ಅರ್ಜಿದಾರರ ಮನವಿಯನ್ನು ಪುರಸ್ಕರಿಸಲಾಗದು’ ಎಂದಿದೆ.

ಬಿಜೆಪಿ ಬೌದ್ಧಿಕವಾಗಿ ದಿವಾಳಿ: ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಂಪುಗಾರಿಕೆ, ಆಂತರಿಕ ಕಿತ್ತಾಟದಿಂದ ಕಂಗೆಟ್ಟು, ಬೌದ್ಧಿಕವಾಗಿ ದಿವಾಳಿಯಾಗಿರುವ ಬಿಜೆಪಿ ಮುಖಂಡರು ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ಮಾಡಲು ಹೊರಟಿದ್ದಾರೆ ಎಂದು ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಟೀಕಿಸಿದ್ದಾರೆ.

ರಾಜ್ಯದಲ್ಲಿ ಎಂದೂ ಬಹುಮತ ಪಡೆಯದ ಬಿಜೆಪಿ ವಾಮ ಮಾರ್ಗದ ಮೂಲಕವೇ ಅಧಿಕಾರ ಹಿಡಿದಿತ್ತು. ಹತ್ತಾರು ಹಗರಣ ಮಾಡಿಕೊಂಡಿತ್ತು. 40 ಪರ್ಸೆಂಟ್ ಸರ್ಕಾರ ಎಂಬ ಕುಖ್ಯಾತಿ ಪಡೆದು, ಜನರಿಂದ ತಿರಸ್ಕೃತವಾಗಿತ್ತು. ಈಗ ವಿರೋಧ ಪಕ್ಷದ ಜವಾಬ್ದಾರಿಯನ್ನೂ ಸರಿಯಾಗಿ ನಿಭಾಯಿಸದೆ ವಿಫಲಗೊಂಡಿದೆ. ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಎಂಬ ಹೊಸ ನಾಟಕ ಆರಂಭಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಹಾಗೂ ಜನಪರ ತೀರ್ಮಾನಗಳನ್ನು ಸಹಿಸಲು ಬಿಜೆಪಿಗೆ ಆಗುತ್ತಿಲ್ಲ. ಹಾಗಾಗಿ, ಅನಗತ್ಯ ವಿಷಯ ಮುಂದಿಡುತ್ತಿದೆ. ‘ಮುಡಾ’, ವಕ್ಫ್ ಆಯ್ತು, ಈಗ ಪ್ರಿಯಾಂಕ್ ಖರ್ಗೆ ಅವರನ್ನು ಎದುರಿಸಲು ಸಾಧ್ಯವಾಗದೆ, ಗುತ್ತಿಗೆದಾರ ಸಚಿನ್ ಪಂಚಾಳ ಆತ್ಮಹತ್ಯೆ ಪ್ರಕರಣದಲ್ಲಿ ಅವರ ರಾಜೀನಾಮೆ ಕೇಳುತ್ತಿದೆ. ಇದು ಬಿಜೆಪಿ ಎಳಸುತನಕ್ಕೆ ಸಾಕ್ಷಿ ಎಂದಿದ್ದಾರೆ.

ಉನ್ನತ ಶಿಕ್ಷಣ ನಿರ್ಲಕ್ಷ್ಯ: ಸಿ.ಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳದೇ ರಾಜ್ಯ ಸರ್ಕಾರ ಉನ್ನತ ಶಿಕ್ಷಣವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಅವರು, 'ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ 4,709 ಬೋಧಕ ಹುದ್ದೆಗಳು, 9317 ಬೋಧಕೇತರ ಹುದ್ದೆಗಳು ಮಂಜೂರಾಗಿವೆ. ಆದರೆ ಅವುಗಳಲ್ಲಿ ಕೇವಲ 1,986 ಬೋಧಕ ಹಾಗೂ 2,989 ಬೋಧಕೇತರ ಹುದ್ದೆಗಳು ಮಾತ್ರ ಭರ್ತಿಯಾಗಿವೆ. 9,051 ಹುದ್ದೆಗಳು ಅನೇಕ ವರ್ಷಗಳಿಂದ ಖಾಲಿ ಇವೆ ಎಂದು ಸರ್ಕಾರದ ಅಂಕಿಅಂಶಗಳೇ ಹೇಳುತ್ತಿವೆ. ಈ ಬಗ್ಗೆ ಮಾಧ್ಯಮಗಳಲ್ಲೂ ವರದಿಯಾಗಿದೆ' ಎಂದು ವಿವರಿಸಿದ್ದಾರೆ.

ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಬಾಕಿ ಇರುವ ನೇಮಕಾತಿಗಳನ್ನು ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ನೀರಿನ ದರ ಪರಿಷ್ಕರಣೆ: ತಿಂಗಳಾಂತ್ಯಕ್ಕೆ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣದ ದರದ ಹೆಚ್ಚಳದ ಬೆನ್ನಲ್ಲೇ ಬೆಂಗಳೂರು ಜಲ ಮಂಡಳಿಯಲ್ಲಿ ನೀರಿನ ದರ ಪರಿಷ್ಕರಣೆ ಪ್ರಸ್ತಾವದ ಚರ್ಚೆ ಮುನ್ನಲೆಗೆ ಬಂದಿದೆ.

'ದರ ಪರಿಷ್ಕರಣೆ ವಿಷಯದ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚರ್ಚಿಸಿದ್ದೇವೆ. ದರ ಪರಿಷ್ಕರಣೆ ಕುರಿತು ನಗರದ ಜನಪ್ರತಿನಿಧಿಗಳೊಂದಿಗೆ ಈ ತಿಂಗಳಲ್ಲೇ ಸಭೆ ನಡೆಸಲಿದ್ದಾರೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ನಗರದ ಒಂದೂವರೆ ಕೋಟಿ ಜನರಿಗೆ ನೀರು ಪೂರೈಸುವ ಜೊತೆಗೆ, ಒಳ ಚರಂಡಿ ನಿರ್ವಹಣೆ ಮಾಡುತ್ತಿರುವ ಜಲಮಂಡಳಿ ಆದಾಯದ ಕೊರತೆ ಎದುರಿಸುತ್ತಿದ್ದು, ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗುತ್ತಿದೆ. ಹಾಗಾಗಿ ನೀರಿನ ದರ ಪರಿಷ್ಕರಣೆ ಅನಿವಾರ್ಯ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು.

2014ರ ನಂತರ ಅಂದರೆ ಹತ್ತು ವರ್ಷಗಳಿಂದ ದರ ಪರಿಷ್ಕರಣೆಯಾಗಿಲ್ಲ. ನಗರದ ಜನಸಂಖ್ಯೆ ಹೆಚ್ಚಾಗಿದೆ. ವಿದ್ಯುತ್ ವೆಚ್ಚ(2014-2024ರ ಮಾರ್ಚ್)ಶೇ 107.3ರಷ್ಟು ಹೆಚ್ಚಾಗಿದೆ, ನಿರ್ವಹಣಾ ವೆಚ್ಚ ಶೇ 122.5, ಶೇ 61.3ರಷ್ಟು ಸಿಬ್ಬಂದಿ ವೇತನ ಮತ್ತು ಪಿಂಚಣಿ ಸೇರಿ ಜಲಮಂಡಳಿಯ ಪ್ರತಿ ತಿಂಗಳ ವೆಚ್ಚ ₹170 ಕೋಟಿಯಾಗುತ್ತಿದೆ. ಆದಾಯ ₹129 ಕೋಟಿ ಸಂಗ್ರಹವಾಗುತ್ತಿದೆ. ಆದಾಯಕ್ಕಿಂತ ವೆಚ್ಚ ಹೆಚ್ಚಾಗುತ್ತಿರುವ ಕಾರಣ, 'ನಗರದ ನಾಗರಿಕರಿಗೆ ಸಮರ್ಪಕ ಸೌಲಭ್ಯ ನೀಡುವುದಕ್ಕಾಗಿ ನೀರಿನ ದರ ಪರಿಷ್ಕರಣೆ ಅನಿವಾರ್ಯ'ವಾಗಿದೆ ಎಂದು ಜಲಮಂಡಳಿ ತಿಳಿಸಿದೆ.



ಸಭೆಯಲ್ಲಿ ವ್ಯಕ್ತವಾಗುವ ಸಲಹೆ, ಅಭಿಪ್ರಾಯ ಪರಿಗಣಿಸಿ, ಡಿಸಿಎಂ ಜತೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು
ರಾಮ್‌ಪ್ರಸಾತ್ ಮನೋಹರ್
ಜಲಮಂಡಳಿ ಅಧ್ಯಕ್ಷ

ದರ ಪರಿಷ್ಕರಣೆ ಪ್ರಸ್ತಾವಕ್ಕೆ ಸಲಹೆ ಹಾಗೂ ಬೆಂಬಲ ನೀಡುವಂತೆ ಕೋರಿ ಡಿಸೆಂಬರ್ 20ರಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಬೆಂಗಳೂರು ನಗರದ ಶಾಸಕರಿಗೆ ಪತ್ರ ಬರೆದು ಮನವಿ ಮಾಡಿದ್ದರು. 'ಸ್ವಾಯತ್ತವಾಗಿರುವ ಜಲಮಂಡಳಿಗೆ ನೀರಿನ ಶುಲ್ಕವೇ ಪ್ರಮುಖ ಆದಾಯವಾಗಿದೆ. ಹೀಗಾಗಿ 'ಜಲಮಂಡಳಿ ಉಳಿವಿಗೆ ದರ ಪರಿಷ್ಕರಣೆ' ಅನಿವಾರ್ಯ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಕರೆ

'ನವ ಭಾರತ ನಿರ್ಮಾಣಕ್ಕೆ ಸಜ್ಜಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಸ್ಥಿರ, ಆರೋಗ್ಯ, ಸುರಕ್ಷತೆ ಹಾಗೂ ಶಾಂತಿಯ ನವ ಭಾರತವನ್ನು ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಸಜ್ಜಾಗಬೇಕು' ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಹೇಳಿದರು.

ರಾಮಯ್ಯ ಅಪ್ಲೈಡ್ ಸೈನ್ಸಸ್ ವಿಶ್ವವಿದ್ಯಾಲಯದ 9ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ವಿದ್ಯಾರ್ಥಿಗಳ ಮನದಲ್ಲಿ ಭವಿಷ್ಯದ ಯೋಜನೆಗಳಿರುತ್ತವೆ. ಸಮಾಜ ನಿಮ್ಮಿಂದ ಬಹಳಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತದೆ. ಎಲ್ಲ ವರ್ಗಕ್ಕೂ ಅನುಕೂಲವಾಗುವ ನವ ಭಾರತ ನಿರ್ಮಾಣದ ಜವಾಬ್ದಾರಿಯೂ ನಿಮ್ಮ ಮೇಲಿದೆ' ಎಂದರು.

'ಭವಿಷ್ಯ ಎಂದಿಗೂ ಅನಿಶ್ಚಿತತೆಯಿಂದ ಇರುತ್ತದೆ. ಯಾವಾಗ ಏನಾದರೂ ಆಗಬಹುದು. ಜೀವನದ ಉದ್ದಕ್ಕೂ ಹೊಸ ವಿಷಯಗಳ ಕಲಿಕೆಯತ್ತ ಆಸಕ್ತಿ ವಹಿಸಬೇಕು. ಈ ಸಂದರ್ಭದಲ್ಲಿ ಆರೋಗ್ಯದ ಕಡೆಗೂ ಗಮನಹರಿಸಬೇಕಿದ್ದು, ದೈಹಿಕ ಚಟುವಟಿಕೆಗಳಲ್ಲಿ ಯುವ ಜನತೆ ತೊಡಗಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ಕಲಿಕೆಗೆ ಪೂರಕವಾಗಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರೂಪಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ತಮಗೆ ಇಷ್ಟವಾದ ವಿಷಯವನ್ನು ವ್ಯಾಸಂಗ ಮಾಡಬಹುದು' ಎಂದರು.

'ಜ್ಞಾನಕ್ಕೆ ಇರುವ ಶಕ್ತಿ ಬೇರೆ ಯಾವುದಕ್ಕೂ ಇಲ್ಲ. ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಿರುವ ಎಲ್ಲ ಸೌಲಭ್ಯಗಳನ್ನು ನಾವು ಒದಗಿಸಿಕೊಟ್ಟಿದ್ದೇವೆ. ಸ್ವಕಲಿಕೆ, ಕೌಶಲ, ಆವಿಷ್ಕಾರದಂತಹ ಮೂರು ಅಂಶಗಳತ್ತ ವಿದ್ಯಾರ್ಥಿಗಳು ಹೆಚ್ಚು ಗಮನ ನೀಡಬೇಕು' ಎಂದು ಗೋಕುಲ ಶಿಕ್ಷಣ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ ಹೇಳಿದರು.

32 ಪಿಎಚ್‌.ಡಿ, 670 ಸ್ನಾತಕೋತ್ತರ ಪದವಿ, 1,208 ಪದವಿಗಳನ್ನು ಘಟಿಕೋತ್ಸವದಲ್ಲಿ ಪ್ರದಾನ ಮಾಡಲಾಯಿತು. 102 ವಿದ್ಯಾರ್ಥಿಗಳು ಚಿನ್ನ ಹಾಗೂ ಬೆಳ್ಳಿ ಪದಕ ಪಡೆದುಕೊಂಡರು.



ಯುಜಿಸಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ಸಂಪ್ರೀತಾ ಅವರಿಗೆ ಚಿನ್ನದ ಪದಕದೊಂದಿಗೆ ಪದವಿ ಪ್ರದಾನ ಮಾಡಿದರು. ರಾಮಯ್ಯ ಅಪ್ಲೈಡ್ ಸೈನ್ಸಸ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕುಲದೀಪ್ ಕುಮಾರ್, ಗೋಕುಲ ಶಿಕ್ಷಣ ಫೌಂಡೇಷನ್ ಅಧ್ಯಕ್ಷ ಎಂ.ಆರ್. ಜಯರಾಂ ಉಪಸ್ಥಿತರಿದ್ದರು

ಜೋಡಿಕೊಲೆ: 10 ಮಂದಿಗೆ ದುಪ್ಪಟ್ಟು ಜೀವಾವಧಿ ಶಿಕ್ಷೆ

ಕಾಸರಗೋಡು: ಜಿಲ್ಲೆಯ ಪೆರಿಯ ಕಲ್ಯೋಟ್ ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಕೊಚ್ಚಿಯ ಸಿಬಿಐ ಕೋರ್ಟ್ 10 ಅಪರಾಧಿಗಳಿಗೆ ದುಪ್ಪಟ್ಟು ಜೀವಾವಧಿ ಸಜೆ ಮತ್ತು ನಾಲ್ವರಿಗೆ 4 ವರ್ಷ ಸಜೆಯನ್ನು ಶುಕ್ರವಾರ ವಿಧಿಸಿದೆ.

2010ರ ಫೆ.17ರಂದು ಯುವ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಕೃಪೇಶ್ ಮತ್ತು ಶರತ್ ಲಾಲ್ ಅವರನ್ನು ಥಳಿಸಿ ಕೊಲೆ ಮಾಡಲಾಗಿತ್ತು.

ಪ್ರಕರಣದಲ್ಲಿ ಸಿಪಿಎಂ ಕಾರ್ಯಕರ್ತರಾದ ಎ.ಪೀತಾಂಬರನ್, ಸಜಿ ಸಿ.ಜಾರ್ಜ್, ಕೆ.ಎಂ.ಸಂತೋಷ್, ಕೆ.ಅನಿಲ್ ಕುಮಾರ್, ಜಿಜಿನ್, ಆರ್.ಶ್ರೀರಾಗ್, ಎ.ಅಶ್ವಿನ್, ಸುಬೀಷ್, ಟಿ.ರಂಜಿತ್, ಎ.ಸುರೇಂದ್ರನ್ ಎಂಬುವರು ಜೀವಾವಧಿ ಸಜೆಗೆ ಒಳಗಾಗಿದ್ದಾರೆ. ಕಾಞಂಗಾಡು ಬ್ಲಾಕ್ ಪಂಚಾಯಿತಿ ಅಧ್ಯಕ್ಷ ಕೆ.ಮಣಿಕಂಠನ್, ಉದುಮಾದ ಮಾಜಿ ಶಾಸಕ ಕೆ.ವಿ. ಕುಂಞಿರಾಮನ್, ಸಿಪಿಎಂ ಕಾರ್ಯಕರ್ತರಾದ ರಾಘವನ್ ವೆಳುತ್ತೋಳಿ, ಕೆ.ವಿ.ಭಾಸ್ಕರನ್‌ಗೆ 4 ವರ್ಷ ಸಜೆ ವಿಧಿಸಲಾಗಿದೆ.

ಶಿವಣಗಿ ಆಸ್ಪತ್ರೆ ಉದ್ಘಾಟನೆ ಸಮಾರಂಭದಲ್ಲಿ ರಾಷ್ಟ್ರಪತಿ ಹೇಳಿಕೆ

‘ಜಗತ್ತು ಕ್ಯಾನ್ಸರ್ ಮುಕ್ತವಾಗಲಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಜಗತ್ತಿನಲ್ಲಿ ಅತಿ ಹೆಚ್ಚು ಅಕಾಲಿಕ ಸಾವುಗಳಿಗೆ ಕ್ಯಾನ್ಸರ್ ಕಾರಣ ಎಂಬುದು 2022ರಲ್ಲಿ ಗೊತ್ತಾಗಿದೆ. ಈ ಕಳವಳಕಾರಿ ಪರಿಸ್ಥಿತಿಯಿಂದ ಜಗತ್ತು ಹೊರಬರಬೇಕು. ಗುಣಮಟ್ಟದ ಚಿಕಿತ್ಸೆ ಜತೆಗೆ ಅರಿವು ಮೂಡಿಸುವ ಜವಾಬ್ದಾರಿಯನ್ನೂ ಹೊರಬೇಕು’ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದರು.

ನಗರದಲ್ಲಿ ಶುಕ್ರವಾರ ಕೆಎಲ್‌ಇ ಸಂಸ್ಥೆಯ ಡಾ.ಸಂಪತ್‌ಕುಮಾರ ಶಿವಣಗಿ ಕ್ಯಾನ್ಸರ್ ಆಸ್ಪತ್ರೆ ಉದ್ಘಾಟಿಸಿ ಅವರು ಮಾತನಾಡಿದರು.


‘ವಿಶ್ವದ ಜನಸಂಖ್ಯೆಯಲ್ಲಿ ಪ್ರತಿವರ್ಷ 2 ಕೋಟಿ ಜನರಿಗೆ ಕ್ಯಾನ್ಸರ್ ಬಾಧಿಸುತ್ತಿದೆ. ಇದರಲ್ಲಿ 97 ಲಕ್ಷ ಜನ ಪ್ರಾಣ ಕಳೆದುಕೊಳ್ಳುತ್ತಾರೆ. ಭಾರತದಲ್ಲಿ ಕೂಡ ಕ್ಯಾನ್ಸರ್ ವ್ಯಾಪಕವಾಗಿ ಹರಡುತ್ತಿದೆ. ಪ್ರತಿ 1 ಲಕ್ಷ ಜನರಲ್ಲಿ 100 ಮಂದಿಗೆ ಕ್ಯಾನ್ಸರ್ ಕಂಡುಬರುತ್ತಿದೆ. 2025ರಲ್ಲಿ ಈ ರೋಗ ಹರಡುವ ದರವು ಶೇ 13ರಷ್ಟು ಹೆಚ್ಚಲಿದೆಯೆಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸಂಶೋಧನೆಯಿಂದ ಗೊತ್ತಾಗಿದೆ’ ಎಂದರು.

‘ಕ್ಯಾನ್ಸರ್ ಎಂದಾಗ ರೋಗಿ ಮಾತ್ರವಲ್ಲ, ಅವರ ಇಡೀ ಕುಟುಂಬ ಜರ್ಜರಿತಗೊಳ್ಳುತ್ತದೆ. ಆಗ ಅವರಿಗೆ ಆತ್ಮಸ್ಥೈರ್ಯ ತುಂಬುವುದು ಮುಖ್ಯ. ವೈದ್ಯರು ಗುಣಮಟ್ಟದ ಚಿಕಿತ್ಸೆಯ ಜತೆಗೆ ಕರುಣೆ ತೋರಿಸಬೇಕು. ನಿಮ್ಮ ಸಾಂತ್ವನವೇ ರೋಗಿ ಚೇತರಿಸಿಕೊಳ್ಳಲು ಸಹಕಾರಿ ಆಗುತ್ತದೆ. ಕುಟುಂಬವು ಮತ್ತೆ ಗುಣಮಟ್ಟದ ಜೀವನ ಸಾಗಿಸಲು ಸಾಧ್ಯ’ ಎಂದರು.

‘ಭಾರತೀಯ ಕುಟುಂಬಗಳಲ್ಲಿ ಮಹಿಳೆಯ ಆರೋಗ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಈಗಲೂ ಕೆಲ ಕುಟುಂಬಗಳಲ್ಲಿ ಪುರುಷರಷ್ಟು ಕಾಳಜಿ ಮಹಿಳೆಯರಿಗೆ ತೋರುವುದಿಲ್ಲ. ಮುಖ್ಯವಾಗಿ, ಸಂಪ್ರದಾಯದ ಕಟ್ಟಳೆಗಳ ಕಾರಣ ಅನೇಕ ಮಹಿಳೆಯರು ಕ್ಯಾನ್ಸರ್‌ಗೆ ತುತ್ತಾಗಿದ್ದು ಕಂಡುಬರುತ್ತದೆ. ಇಂಥ ಕಡೆಗಳಲ್ಲಿ ಮಹಿಳೆ– ಪುರುಷರಿಗೆ ಸಮಾನ ಆರೋಗ್ಯ ಸೇವಾಸೌಲಭ್ಯ ಸಿಗುವಂತೆ ಮಾಡಬೇಕಿದೆ’ ಎಂದು ಮುರ್ಮು ಹೇಳಿದರು.

‘ಕೇಂದ್ರ ಸರ್ಕಾರವು ಆಯುಷ್ಮಾನ್ ಆರೋಗ್ಯ ಯೋಜನೆ ಜಾರಿಯಾದ ಬಳಿಕ ಗಮನಾರ್ಹ ಬದಲಾವಣೆ ಕಾಣಿಸುತ್ತಿವೆ. ಬಡವರಿಗೂ ಗುಣಮಟ್ಟದ ಜೀವನ, ಗುಣಮಟ್ಟದ ಚಿಕಿತ್ಸೆ ಒದಗಿಸುವಲ್ಲಿ ಈ ಯೋಜನೆ ಯಶಸ್ವಿ ಆಗಿದೆ’ ಎಂದು ಹೇಳಿದರು.

‘ಕೆಎಲ್‌ಇ ಸಂಸ್ಥೆಯು ಬೆಳಗಾವಿಯಲ್ಲಿ ಅತ್ಯಾಧುನಿಕ ಕ್ಯಾನ್ಸರ್ ಆಸ್ಪತ್ರೆ ತೆರೆದಿರುವುದು ಅಭಿನಂದನೀಯ. ನೂರು ವರ್ಷಗಳಿಂದಲೂ ಈ ಸಂಸ್ಥೆ ಶಿಕ್ಷಣ ಹಾಗೂ ಆರೋಗ್ಯ ಸೇವೆ ಮುಂದುವರಿಸಿಕೊಂಡು ಬಂದಿದ್ದು ನೋಡಿ ನನಗೆ ಹೆಮ್ಮೆ ಅನ್ನಿಸುತ್ತದೆ’ ಎಂದರು.



ಬೆಳಗಾವಿಯಲ್ಲಿ ಶುಕ್ರವಾರ ಕೆಎಲ್‌ಇ ಸಂಸ್ಥೆಯ ಡಾ.ಸಂಪತ್‌ಕುಮಾರ ಶಿವಣಗಿ ಕ್ಯಾನ್ಸರ್ ಆಸ್ಪತ್ರೆಯ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದೀಪ ಬೆಳಗಿಸಿದರು. ಸತೀಶ ಜಾರಕಿಹೊಳಿ, ಪ್ರಭಾಕರ ಕೋರೆ, ಪ್ರಲ್ಹಾದ್ ಜೋಶಿ, ಡಾ.ಶರಣಪ್ರಕಾಶ ಪಾಟೀಲ, ಜಗದೀಶ ಶೆಟ್ಟರ್, ಮಹಾಂತೇಶ ಕೌಜಲಗಿ ಜತೆಯಾದರು –ಪ್ರಜಾವಾಣಿ ಚಿತ್ರ

‘ದಲಿತ’ ಪದಕ್ಕೆ ಅಸಂಬದ್ಧ ಅರ್ಥ ಕೊಡಬೇಡಿ: ಡಿಎಸ್‌ಎಸ್

ಬೆಂಗಳೂರು: ‘ದಲಿತ’ ಪದದ ಕುರಿತು ಬಹಳ ದಿನಗಳಿಂದ ವಿವಾದ ಸೃಷ್ಟಿಸಲಾಗುತ್ತಿದೆ. ಲೇಖಕಿ ಬಿ.ಟಿ. ಲಲಿತಾ ನಾಯಕ್ ಅವರೂ ಅಸಂಬದ್ಧ ಅರ್ಥವನ್ನು ನೀಡಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿ ಖಂಡಿಸಿದೆ.

ದಲಿತ ಸಂಘರ್ಷ ಸಮಿತಿಗಳ ಒಕ್ಕೂಟದ ಇಂದೂಧರ ಹೊನ್ನಾಪುರ, ಗುರುಪ್ರಸಾದ್ ಕೆರಗೋಡು, ಮಾವಳ್ಳಿ ಶಂಕರ್, ವಿ. ನಾಗರಾಜ್, ಎನ್. ವೆಂಕಟೇಶ್, ಎನ್. ಮುನಿಸ್ವಾಮಿ ಈ ಬಗ್ಗೆ ಹೇಳಿಕೆ ನೀಡಿದ್ದು, ‘ದಲಿತ’ ಪದಕ್ಕೆ ಲಲಿತಾ ನಾಯಕ್ ನೀಡಿರುವ ಅರ್ಥವು ಕನ್ನಡ, ಇಂಗ್ಲಿಷ್ ನಿಘಂಟುಗಳಲ್ಲಿ ಇಲ್ಲ’ ಎಂದು ತಿಳಿಸಿದ್ದಾರೆ.

ಆಯುಷ್ ಚಿಕಿತ್ಸಾ ಪದ್ಧತಿಗೆ ಆದ್ಯತೆ: ನಡ್ಡಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಆಯುಷ್ ಚಿಕಿತ್ಸಾ ಪದ್ಧತಿಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದ್ದು, ವಿಶ್ವ ಆರೋಗ್ಯ ಸಂಸ್ಥೆಯಿಂದ ಮಾನ್ಯತೆ ಪಡೆದ ಗುಜರಾತ್‌ನ ಜಾಮ್ ನಗರದಲ್ಲಿರುವ ಜಾಗತಿಕ ಸಾಂಪ್ರದಾಯಿಕ ಔಷಧ ಕೇಂದ್ರವು ವೈದ್ಯಕೀಯ ಅಧ್ಯಯನ ಮತ್ತು ಆವಿಷ್ಕಾರಗಳ ವಿಶ್ವದ ಕೇಂದ್ರವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ತಿಳಿಸಿದರು.

ನಗರದಲ್ಲಿ ಶುಕ್ರವಾರ ಎಸ್. ವ್ಯಾಸ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ‘ಆಯುಷ್ ಈಗ ಸಾಂಪ್ರದಾಯಿಕ ಔಷಧಕ್ಕೆ ಮಾತ್ರ ಸೀಮಿತವಾಗಿಲ್ಲ. ಆಧುನಿಕ ವಿಜ್ಞಾನದ ಜೊತೆಗೆ ಮುಂದುವರಿಯುತ್ತಿದೆ. ಆಯುಷ್ ಚಿಕಿತ್ಸಾ ಪದ್ಧತಿಗೆ ಸಂಬಂಧಿಸಿದ ಸಂಶೋಧನೆಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಆಯುಷ್ ಸಚಿವಾಲಯವು 103 ದೇಶಗಳ ಜತೆ ಸಹಭಾಗಿತ್ವ ಹೊಂದಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಆರೋಗ್ಯ ಕ್ಷೇತ್ರದ ನೀತಿಗಳಲ್ಲಿ ಬದಲಾವಣೆ ತಂದಿದ್ದು, ಆರೋಗ್ಯ ಸೇವೆಯು ಸಮಗ್ರವಾಗಿ ದೊರೆಯುವಂತಾಗಬೇಕು. ಆಯುಷ್ ಚಿಕಿತ್ಸಾ ಪದ್ಧತಿಯನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ 22 ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (ಏಮ್ಸ್)ಗಳಲ್ಲಿ ಆಯುಷ್ ಬ್ಲಾಕ್ ಅಥವಾ ಆಯುರ್ವೇದ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

ದೇಶದಲ್ಲಿ ಹೊಸ ಆರೋಗ್ಯ ನೀತಿ ಜಾರಿಗೆ ತರಲಾಗಿದೆ. 600 ಹಾಸಿಗೆಯ ಆರೋಗ್ಯ ಧಾಮ್ ಮತ್ತು ದೇಶದ ವಿವಿಧೆಡೆ ಯೋಗ ಮತ್ತು ನ್ಯಾಚುರೋಪತಿ ಚಿಕಿತ್ಸಾ ಕೇಂದ್ರವನ್ನು ಆರಂಭಿಸಲಾಗಿದೆ. ಮನುಷ್ಯನ ಮನಸ್ಸು, ದೇಹ ಆರೋಗ್ಯದಿಂದ ಇರಬೇಕು. ಒತ್ತಡ ನಿವಾರಣೆಗೆ ಯೋಗ ಸಹಕಾರಿ. ವಿದ್ಯಾರ್ಥಿಗಳಿಗೆ ಯೋಗ ಮುಖ್ಯ. ಕ್ರೀಡೆ, ಶಿಕ್ಷಣ ಅಥವಾ ಯಾವುದೇ ಕ್ಷೇತ್ರದಲ್ಲಿ ಮನುಷ್ಯನ ಯಶಸ್ಸಿನಲ್ಲಿ ಯೋಗ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು. ಎಸ್–ವ್ಯಾಸ ವಿ.ವಿ ಕುಲಪತಿ ಎಚ್.ಆರ್.ನಾಗೇಂದ್ರ ಮಾತನಾಡಿದರು.

ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ಎಐಸಿಟಿಇ ಮುಖ್ಯಸ್ಥ ಟಿ.ಜಿ.ಸೀತಾರಾಮ್, ಸಂಸದರಾದ ಡಾ. ಸಿ.ಎನ್. ಮಂಜುನಾಥ್, ತೇಜಸ್ವಿ ಸೂರ್ಯ, ಕೈಗಾರಿಕೋದ್ಯಮಿ ಕ್ರಿಸ್ ಗೋಪಾಲಕೃಷ್ಣ, ಸತ್ವ ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಅಗರವಾಲ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಉಪಸ್ಥಿತರಿದ್ದರು.



ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಬೆಂಗಳೂರು ನಗರ ಘಟಕದ 7ನೇ ಜಿಲ್ಲಾಮಟ್ಟದ ಸಮ್ಮೇಳನದಲ್ಲಿ ಎಸ್‌ಯುಸಿಐ(ಕಮ್ಯುನಿಸ್ಟ್) ಬೆಂಗಳೂರು ದಕ್ಷಿಣ ಕಾರ್ಯದರ್ಶಿ ಎಂ.ಎನ್. ಶ್ರೀರಾಮ್, ಎಐಎಂಎಸ್‌ಎಸ್ ರಾಜ್ಯ ಘಟಕದ ಅಧ್ಯಕ್ಷೆ ಎಂ.ಎನ್. ಮಂಜುಳಾ, ಕಾರ್ಯದರ್ಶಿ ಎಸ್. ಶೋಭಾ, ಉಪಾಧ್ಯಕ್ಷೆ ಮೇರಿ ಜಾನ್ ಮತ್ತು ಜಿಲ್ಲಾ ಘಟಕದ ಕಾರ್ಯದರ್ಶಿ ಎ.ಶಾಂತಾ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸಮಾನತೆಗಾಗಿ ಹೋರಾಟ ಅನಿವಾರ್ಯ: ಶ್ರೀರಾಮ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂವಿಧಾನದಲ್ಲಿರುವ ಘೋಷಣೆಯಂತೆ ಎಲ್ಲರೂ ಸಮಾನರು ಎಂಬ ಮಾತು ನಿಜವಾಗಿಲ್ಲ. ಹಾಗಾಗಿ, ಹೆಣ್ಣು ಮಕ್ಕಳು ಸಮಾನತೆ ಪಡೆಯಲು ಹೋರಾಟದ ಹಾದಿ ಹಿಡಿಯುವುದು ಅನಿವಾರ್ಯವಾಗಿದೆ’ ಎಂದು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಕಾರ್ಯದರ್ಶಿ ಶ್ರೀರಾಮ್ ಅಭಿಪ್ರಾಯಪಟ್ಟರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಶುಕ್ರವಾರ ಆಯೋಜಿಸಿದ್ದ ಬೆಂಗಳೂರು ನಗರ ಜಿಲ್ಲಾ ಮಟ್ಟದ ಸಮ್ಮೇಳನ ಉದ್ಘಾಟಿಸಿ, ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಅವರ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಹಕ್ಕೊತ್ತಾಯ ಮಂಡನೆ: ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಬೇಕು ಮತ್ತು ಅವರಿಗೆ ಸೂಕ್ತ ಭದ್ರತೆ ಒದಗಿಸಬೇಕು. ಅಂಗನವಾಡಿ ಸೇರಿದಂತೆ ಅಸಂಘಟಿತ ವಲಯದಲ್ಲಿ ದುಡಿಯುವ ಕಾರ್ಮಿಕರಿಗೆ ₹25 ಸಾವಿರ ಕನಿಷ್ಠ ವೇತನ ಖಾತರಿ ಪಡಿಸಬೇಕು. ಉದ್ಯೋಗ ಸ್ಥಳ ಹಾಗೂ ಶಾಲೆ–ಕಾಲೇಜುಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು(ಐಸಿಸಿ) ರಚಿಸಬೇಕು, ಕಾಲೇಜು ಹಂತದವರೆಗೂ ಬಿಸಿಯೂಟ ಸೌಲಭ್ಯ ವಿಸ್ತರಿಸಬೇಕು ಎಂಬುದು ಸೇರಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು.

ರಂಗಭೂಮಿಯ ಸಮಗ್ರ ಮಾಹಿತಿಗೆ ವೆಬ್‌ಸೈಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಂಗಭೂಮಿಗೆ ಸಂಬಂಧಿಸಿದ ಸಮಗ್ರ ಮಾಹಿತಿ ಒದಗಿಸಲು ಕರ್ನಾಟಕ ನಾಟಕ ಅಕಾಡೆಮಿ ವೆಬ್‌ಸೈಟ್ ಅಭಿವೃದ್ಧಿ ಪಡಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವೆಬ್‌ಸೈಟ್‌ಗೆ ಶನಿವಾರ ಬೆಳಿಗ್ಗೆ 10.30ಕ್ಕೆ ಚಾಲನೆ ನೀಡುವರು.

‘ನೂರಾರು ವರ್ಷಗಳ ಇತಿಹಾಸವುಳ್ಳ ಕನ್ನಡ ರಂಗಭೂಮಿಯ ಚರಿತ್ರೆ ಅತ್ಯಂತ ಸ್ಮರಣೀಯವಾದದ್ದಾಗಿದೆ. ಕನ್ನಡ ರಂಗಭೂಮಿಗೆ ಸಂಬಂಧಿಸಿದ ದಾಖಲೆಗಳು ವಿವಿಧ ಕೃತಿಗಳಲ್ಲಿ ಬಿಡಿ ಬಿಡಿಯಾಗಿ ಲಭ್ಯವಿದ್ದರೂ, ಅವುಗಳ ಸಮಗ್ರ ದೃಶ್ಯ ಮತ್ತು ಬರಹ ರೂಪದ ದಾಖಲೀಕರಣ ಒಂದೇ ಕಡೆ ಇರಲಿಲ್ಲ. ನೂತನ ವೆಬ್‌ಸೈಟ್‌ನಲ್ಲಿ ಡಿಜಿಟಲೀಕರಣಗೊಳಿಸಿದ ಸಮಗ್ರ ದೃಶ್ಯ ಮತ್ತು ಬರಹ ರೂಪದ ರಂಗಭೂಮಿ ದಾಖಲೀಕರಣವನ್ನು ಅಳವಡಿಸಲಾಗುತ್ತದೆ’ ಎಂದು ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ತಿಳಿಸಿದ್ದಾರೆ.

‘ಅಕಾಡೆಮಿಯ ವಾರ್ಷಿಕ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿ, 1959ರಿಂದ ಈವರೆಗಿನ ಅಕಾಡೆಮಿ ಪ್ರಶಸ್ತಿ ಪುರಸ್ಕೃತರ ಪಟ್ಟಿ, ರಂಗಭೂಮಿಗೆ ಸಂಬಂಧಿಸಿದಂತೆ ಸರ್ಕಾರ ನೀಡುವ ವಿವಿಧ ಪ್ರಶಸ್ತಿ ಪುರಸ್ಕೃತರ ಪಟ್ಟಿ, ಅಕಾಡೆಮಿ ಪ್ರಕಟಣೆಗಳ ವಿವರವನ್ನು ವೆಬ್‌ಸೈಟ್ ಒಳಗೊಳ್ಳಲಿದೆ. ರಂಗಭೂಮಿ ಕುರಿತ ಕನ್ನಡದಲ್ಲಿ ಪ್ರಕಟವಾದ 2,464 ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾದ 115 ಪುಸ್ತಕಗಳ ಗ್ರಂಥ ಬಂಡಾರದ ಮಾಹಿತಿಯನ್ನೂ ಒದಗಿಸಲಾಗುತ್ತದೆ. ರಾಜ್ಯದಲ್ಲಿನ ಕಲಾವಿದರ ಮತ್ತು ನಿರ್ದೇಶಕರ ಮಾಹಿತಿ, ರಂಗಭೂಮಿಯ ಅತಿ ಅಪರೂಪದ ಚಿತ್ರಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗುತ್ತದೆ’ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಶನಿವಾರದ ಉಷ್ಣಾಂಶ
27° ಗರಿಷ್ಠ 15° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಇಂದು ಮೋಡ ಕವಿದ ವಾತಾವರಣ ಇರಲಿದೆ.

ಭಾನುವಾರ 28° 18° | ಸೋಮವಾರ 28° 18° | ಮಂಗಳವಾರ 28° 18°

ಸೂರ್ಯೋದಯ: 6:43 ಸೂರ್ಯಾಸ್ತ : 6:06 ಚಂದ್ರೋದಯ: ಬೆ. 10:14 ಚಂದ್ರಾಸ್ತ: ರಾ. 10:20 ಶುಕ್ರವಾರದ ಹವಾಮಾನ : ಗರಿಷ್ಠ 27° ಕನಿಷ್ಠ 15°
ಪ್ರಜಾವಾಣಿ

ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಕೊಡಿಸುವುದಾಗಿ ಹಣ ಪಡೆದು ವಂಚಿಸುತ್ತಿದ್ದ ಪ್ರಕರಣ

ಪರೀಕ್ಷೆ ಪಾಸ್ ಮಾಡಿಸುವ ಜಾಲ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಇಲಾಖೆಯಲ್ಲಿ ಖಾಲಿಯಿರುವ ಸರ್ಕಾರಿ ಹುದ್ದೆಗಳಿಗೆ ನಡೆಸಲಾಗುವ ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳನ್ನು ಉತ್ತೀರ್ಣಗೊಳಿಸುವುದಾಗಿ ನಂಬಿಸಿ, ಹಣ ಪಡೆದು ವಂಚಿಸುತ್ತಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಜಯನಗರ ಠಾಣೆ ಪೊಲೀಸರು, ಇಬ್ಬರು ಮಧ್ಯವರ್ತಿಗಳನ್ನು ಬಂಧಿಸಿದ್ದಾರೆ.

ತುಮಕೂರಿನ ಹನುಮಂತಪ್ಪ ಹಾಗೂ ವಿಜಯಪುರದ ಬಿರಾದಾರ್ ಬಂಧಿತರು. ಇದೇ ಪ್ರಕರಣದ ಪ್ರಮುಖ ಆರೋಪಿ, ರೈಲ್ವೆ ಇಲಾಖೆಯ ಪ್ರಧಾನ ಟಿಕೆಟ್ ಇನ್‌ಸ್ಪೆಕ್ಟರ್ ಗೋವಿಂದರಾಜ್ ಅವರನ್ನು ಕಳೆದ ವಾರ ಬಂಧಿಸಲಾಗಿತ್ತು.

‘ವಿಚಾರಣೆ ವೇಳೆ ಗೋವಿಂದರಾಜು ಅವರ ಮೊಬೈಲ್ ವಶಕ್ಕೆ ಪಡೆದುಕೊಳ್ಳಲಾಗಿತ್ತು. ಮೊಬೈಲ್ ಪರಿಶೀಲಿಸಿದಾಗ ಅದರಲ್ಲಿ ಇಬ್ಬರು ನಿರಂತರ ಸಂಪರ್ಕ ಹೊಂದಿರುವುದು ಪತ್ತೆಯಾಗಿತ್ತು. ಹೆಚ್ಚಿನ ವಿಚಾರಣೆ ನಡೆಸಿದಾಗ ವಂಚನೆಯಲ್ಲಿ ಹನುಮಂತಪ್ಪ ಹಾಗೂ ಬಿರಾದಾರ್ ಪಾತ್ರ ಇರುವುದು ಪತ್ತೆಯಾಗಿದ್ದು, ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ವಂಚನೆ ಹಣದಲ್ಲಿ ಪಾಲು: ‘ಮೆಜೆಸ್ಟಿಕ್ ಬಳಿಯ ನೈರುತ್ಯ ರೈಲ್ವೆ ಇಲಾಖೆ ಕಚೇರಿಯಲ್ಲಿ ಗೋವಿಂದರಾಜು ಕೆಲಸ ಮಾಡುತ್ತಿದ್ದರು. ಮಧ್ಯವರ್ತಿಗಳಾದ ಹನುಮಂತಪ್ಪ ಹಾಗೂ ಬಿರಾದಾರ್ ಮೂಲಕ ಕೆಎಎಸ್, ಪಿಡಿಒ, ಗ್ರಾಮ ಲೆಕ್ಕಾಧಿಕಾರಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳನ್ನು ತೆಗೆದುಕೊಂಡವರನ್ನು ಗೋವಿಂದರಾಜು ಸಂಪರ್ಕಿಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸುವುದಾಗಿ ನಂಬಿಸುತ್ತಿದ್ದರು. ಇದಕ್ಕೆ ಹಣ ಕೊಡುವಂತೆ ಹೇಳುತ್ತಿದ್ದರು. ಪಿಡಿಒ ಹುದ್ದೆಗೆ ₹25 ಲಕ್ಷ ಹಾಗೂ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಲು ₹50 ಲಕ್ಷ ನಿಗದಿ ಪಡಿಸಿಕೊಂಡಿದ್ದರು. ಇದೇ ರೀತಿ ಆಮಿಷವೊಡ್ಡಿ 40 ಅಭ್ಯರ್ಥಿಗಳಿಂದ ಆರೋಪಿಗಳು ಹಣ ಪಡೆದುಕೊಂಡಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಸಂಗ್ರಹವಾದ ಹಣವನ್ನು ಈ ಮೂವರು ಸೇರಿದಂತೆ ಹಲವರು ಹಂಚಿಕೊಂಡಿದ್ದಾರೆ. ಆರೋಪಿಗಳ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪಹರಣ: ಶಿಕ್ಷಕನ ವಿರುದ್ಧ ದೂರು

ಬೆಂಗಳೂರು: ಮನೆಪಾಠಕ್ಕೆ(ಟ್ಯೂಷನ್) ಬರುತ್ತಿದ್ದ 16 ವರ್ಷದ ಬಾಲಕಿಯನ್ನು ಪ್ರೀತಿಸುವುದಾಗಿ ನಂಬಿಸಿ ಶಿಕ್ಷಕರೊಬ್ಬರು ಅಪಹರಿಸಿ ಕರೆದೊಯ್ದಿದ್ದಾರೆ ಎಂದು ಆರೋಪಿಸಿ ಪೋಷಕರು ಜೆ.ಪಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಪೊಲೀಸರು ಆರೋಪಿಗಾಗಿ ಶೋಧ ಆರಂಭಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಓದುತ್ತಿರುವ 16 ವರ್ಷದ ವಿದ್ಯಾರ್ಥಿನಿಯ ಪೋಷಕರು ನೀಡಿದ ದೂರು ಆಧರಿಸಿ ಶಿಕ್ಷಕ ಅಭಿಷೇಕ್ ವಿರುದ್ಧ ಅಪಹರಣ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಅಭಿಷೇಕ್ ಮನೆಪಾಠ ನಡೆಸುತ್ತಿದ್ದರು. ನಾಪತ್ತೆಯಾಗಿರುವ ವಿದ್ಯಾರ್ಥಿನಿ ಮನೆಪಾಠಕ್ಕೆ ತೆರಳುತ್ತಿದ್ದರು. ಈ ಮಧ್ಯೆ ಶಿಕ್ಷಕ ವಿದ್ಯಾರ್ಥಿನಿಯನ್ನು ಪ್ರೀತಿಸುತ್ತಿದ್ದರು ಎನ್ನಲಾಗಿದೆ. ಕೆಲವು ದಿನಗಳ ಹಿಂದೆ ಮನೆಪಾಠಕ್ಕೆ ವಿದ್ಯಾರ್ಥಿನಿ ತೆರಳಿದ್ದರು. ರಾತ್ರಿಯಾದರೂ ವಿದ್ಯಾರ್ಥಿನಿ ಮನೆಗೆ ಬಾರದಿದ್ದಾಗ ಆಕೆಯ ಪೋಷಕರು, ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು. ಆಗ ಅಭಿಷೇಕ್ ಕರೆದುಕೊಂಡು ಹೋಗಿರುವುದಾಗಿ ಸ್ಥಳದಲ್ಲಿದ್ದವರು ಹೇಳಿದ್ದರು. ಅದಾದ ಮೇಲೆ ಪೋಷಕರು ಪೊಲೀಸರಿಗೆ ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.



ಆರೋಪಿ ಶಿಕ್ಷಕ ಮೊಬೈಲ್ ಅನ್ನು ಟ್ಯೂಷನ್ ರೂಂನಲ್ಲೇ ಬಿಟ್ಟು ತೆರಳಿದ್ದಾರೆ. ಪೊಲೀಸರಿಗೆ ಸಿಕ್ಕಿ ಬೀಳಬಾರದು ಎಂಬ ಉದ್ದೇಶದಿಂದ ಘಟನೆ ಬಳಿಕ ಫೋನ್, ಫೋನ್ ಪೇ, ಗೂಗಲ್ ಪೇ, ಎಟಿಎಂ ಸೇರಿದಂತೆ ಯಾವುದೇ ಆನ್‌ಲೈನ್ ವಹಿವಾಟು ನಡೆಸಿಲ್ಲ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಆರೋಪಿಯ ಸುಳಿವು ನೀಡಿದರೆ ₹25 ಸಾವಿರ ಬಹುಮಾನ ನೀಡುವುದಾಗಿ ಪೊಲೀಸ್ ಪ್ರಕಟಣೆ ಹೊರಡಿಸಿದೆ.


ಕಾನ್‌ಸ್ಟೆಬಲ್ ಮೇಲೆ ಹಲ್ಲೆ: ನೈಜೀರಿಯಾ ಪ್ರಜೆ ಸೆರೆ

ಬೆಂಗಳೂರು: ಹೊಸ ವರ್ಷಾಚರಣೆ ವೇಳೆ ಪೊಲೀಸ್ ಕಾನ್‌ಸ್ಟೆಬಲ್‌ಗೆ ಚಾಕುವಿನಿಂದ ಹಲ್ಲೆ ನಡೆಸಿ ಪರಾರಿ ಆಗಿದ್ದ ನೈಜೀರಿಯಾ ಪ್ರಜೆಯನ್ನು ಗೋವಿಂದಪುರ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಟಿನ್ ಫ್ಯಾಕ್ಟರಿಯ ಬಿ.ನಾರಾಯಣಪುರದ ಬಳಿ ನೆಲಸಿದ್ದ ನೈಜೀರಿಯಾದ ಕೆಲ್ವಿನ್ ಬಂಧಿತ ಆರೋಪಿ. ಪೊಲೀಸ್ ಕಾನ್‌ಸ್ಟೆಬಲ್ ನಾಗರಾಜ್ ಭೀಮಪ್ಪ ಹಲ್ಲೆಗೆ ಒಳಗಾಗಿದ್ದರು. ನಾಗರಾಜ್ ಭೀಮಪ್ಪ ಅವರು ಮೂರು ವರ್ಷಗಳಿಂದ ಗೋವಿಂದಪುರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು.

‘ನಗರಕ್ಕೆ ಕೆಲವು ವರ್ಷಗಳ ಹಿಂದೆ ಬಂದಿದ್ದ ಆರೋಪಿ, ಬಟ್ಟೆ ವ್ಯಾಪಾರ ಮಾಡುತ್ತಿದ್ದ. ಆರೋಪಿಯ ಪತ್ನಿ ಮಾದಕ ವಸ್ತುಗಳ ವ್ಯಾಪಾರ ಪ್ರಕರಣದಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಳು. ಬಂಧನದ ವೇಳೆ ಮಹಿಳಾ ಕಾನ್‌ಸ್ಟೆಬಲ್ ಕೈಕಚ್ಚಿ ಗಾಯಗೊಳಿಸಿದ್ದಳು’ ಎಂದು ಮೂಲಗಳು ಹೇಳಿವೆ. ‘ಡಿ.31ರ ರಾತ್ರಿ ಎಚ್‌ಬಿಆರ್ ಬಡಾವಣೆ ಬಳಿ ನಾಗರಾಜ್ ಗಸ್ತಿನಲ್ಲಿ ಇದ್ದರು. ತಡರಾತ್ರಿ 1.50ರ ಸುಮಾರಿಗೆ ಪತ್ನಿಯೊಂದಿಗೆ ಕೆಲ್ವಿನ್ ಬರುತ್ತಿದ್ದಾಗ ಬೈಕ್ ತಡೆದು ಪೊಲೀಸರು ಪ್ರಶ್ನಿಸಿದ್ದರು. ಆಗ ಪೊಲೀಸರಿಗೆ ಹೊಸ ವರ್ಷದ ಶುಭಾಶಯ ಹೇಳಿದ್ದ ಆರೋಪಿ ಮದ್ಯದ ಅಮಲಿನಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಆಗ ಪೊಲೀಸರು ಪ್ರಶ್ನೆ ಮಾಡಿದಾಗ, ತನ್ನ ಬಳಿಯಿದ್ದ ಚಾಕುವಿನಿಂದ ಹಲ್ಲೆ ನಡೆಸಲು ಆರೋಪಿ ಮುಂದಾಗಿದ್ದ. ಆರೋಪಿಯಿಂದ ನಾಗರಾಜ್ ಅವರು ತಪ್ಪಿಸಿ ಕೊಳ್ಳಲು ಮುಂದಾದ ವೇಳೆ, ಕಣ್ಣಿನ ಹುಬ್ಬಿಗೆ ಚಾಕು ತಗುಲಿ ಗಾಯವಾಗಿತ್ತು’ ಎಂದು ಮೂಲಗಳು ತಿಳಿಸಿವೆ.

ನಾಗರಾಜ್ ನೀಡಿದ ದೂರಿನ ಆಧಾರದ ಮೇಲೆ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ಡ್ರಗ್ಸ್ ದಂಧೆಯನ್ನೂ ನಡೆಸುತ್ತಿದ್ದ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ. ಆರೋಪಿ ವಿರುದ್ಧ ಡಿ.ಜೆ.ಹಳ್ಳಿ, ಹೆಣ್ಣೂರು ಠಾಣೆಗಳಲ್ಲಿ ವಿದೇಶಿಯರ ಕಾಯ್ದೆ ಹಾಗೂ ಎನ್‌ಡಿಪಿಎಸ್ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಂಪಿಗೆಹಳ್ಳಿ ಪೊಲೀಸ್ ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ.



ಕಾಲ್‌ಸೆಂಟರ್ ಮಾಲೀಕ ಸೇರಿ ಇಬ್ಬರ ಬಂಧನ

ಬೆಂಗಳೂರು: ಷೇರು ಪೇಟೆಯಲ್ಲಿ ಹೂಡಿಕೆ ಮಾಡುವಂತೆ ಗ್ರಾಹಕರಿಗೆ ಕರೆ ಮಾಡುತ್ತಿದ್ದ ಕಾಲ್ ಸೆಂಟರ್ ಮೇಲೆ ಹುಳಿಮಾವು ಪೊಲೀಸರು ದಾಳಿ ನಡೆಸಿ, ಇಬ್ಬರನ್ನು ಬಂಧಿಸಿ, 15 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಠಾಣಾ ವ್ಯಾಪ್ತಿಯಲ್ಲಿ ವರ್ಷದ ಹಿಂದೆ ತೆರೆಯಲಾಗಿದ್ದ ಕಾಲ್ ಸೆಂಟರ್ ಅಧಿಕೃತವಾಗಿ ನೋಂದಣಿ ಆಗಿಲ್ಲ. ಏಳು ಯುವತಿಯರು ಹಾಗೂ ಎಂಟು ಯುವಕರು ಕೆಲಸ ಮಾಡುತ್ತಿದ್ದು, ಗ್ರಾಹಕರಿಗೆ ಕರೆ ಮಾಡಿ ಷೇರು ಪೇಟೆಯಲ್ಲಿ ಹೂಡಿಕೆ ಮಾಡುವಂತೆ ಒತ್ತಾಯಿಸಿದ್ದರು ಎಂದು ಆರೋಪಿಸಲಾಗಿದೆ.

ಸಾರ್ವಜನಿಕರ ದೂರಿನ ಮೇರೆಗೆ ಕಾಲ್ ಸೆಂಟರ್ ಮೇಲೆ ದಾಳಿ ನಡೆಸಿ, ಮಾಲೀಕ ಜಿತೇಂದ್ರ ಕುಮಾರ್ ಮತ್ತು ಪಾಲುದಾರ ಚಂದನ್ ಕುಮಾರ್ ಅವರನ್ನು ಬಂಧಿಸಿ, ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

15 ನೌಕರರ ವಿಚಾರಣೆ ನಡೆಯುತ್ತಿದೆ. ಈವರೆಗೆ ಎಷ್ಟು ಗ್ರಾಹಕರಿಗೆ ಕರೆ ಮಾಡಲಾಗಿದೆ ಹಾಗೂ ಯಾವ ಕಂಪನಿಗಳ ಷೇರುಗಳ ಮೇಲೆ ಹೂಡಿಕೆ ಮಾಡುವಂತೆ ಗ್ರಾಹಕರಿಗೆ ಕರೆ ಮಾಡಿ ಒತ್ತಡ ಹೇರುತ್ತಿದ್ದರು ಎಂಬ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.


ಚಂದನ್


ಜಿತೇಂದ್ರ

ಸುದ್ದಿ 2 ನಿಮಿಷ

ಪ್ರೇಮ ವೈಫಲ್ಯ: ಯುವಕ ಆತ್ಮಹತ್ಯೆ

ಬೆಂಗಳೂರು: ಪ್ರೇಮ ವೈಫಲ್ಯದಿಂದ ಮನನೊಂದು ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳ್ಳಂದೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸತೀಶ್ ಕುಮಾರ್ (25) ಆತ್ಮಹತ್ಯೆ ಮಾಡಿಕೊಂಡವರು.

‘ಸತೀಶ್ ಕುಮಾರ್ ಅವರು ಕಾಲೇಜು ದಿನಗಳಲ್ಲಿಯೇ ಯುವತಿಯೊಬ್ಬರನ್ನು ಪ್ರೀತಿಸುತ್ತಿದ್ದರು. ವ್ಯಾಸಂಗ ಮುಗಿದ ಮೇಲೆ ಸತೀಶ್ ಅವರು ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಸತೀಶ್ ಅವರನ್ನು ಪ್ರೀತಿಸುವುದು ಯುವತಿಯ ಕುಟುಂಬಸ್ಥರಿಗೆ ಇಷ್ಟ ಇರಲಿಲ್ಲ. ಈ ಸಂಬಂಧ ನಾಲ್ಕು ತಿಂಗಳ ಹಿಂದೆ ಯುವತಿಯ ಕುಟುಂಬದವರು ಸತೀಶ್ ವಿರುದ್ಧ ಇಂದಿರಾನಗರ ಪೊಲೀಸ್ ಠಾಣೆಗೆ ಕಿರುಕುಳ ಆರೋಪದ ಅಡಿ ದೂರು ನೀಡಿದ್ದರು. ಪೊಲೀಸರು ಸತೀಶ್ ಅವರನ್ನು ಠಾಣೆಗೆ ಕರೆಸಿ ಬುದ್ಧಿಮಾತು ಹೇಳಿ ಕಳುಹಿಸಿದ್ದರು. ಹೊಸ ವರ್ಷದಂದು ಯುವತಿಗೆ ಕರೆ ಮಾಡಿದ್ದ ಸತೀಶ್ ಅವರು ಮತ್ತೆ ಪ್ರೀತಿ ಮುಂದುವರಿಸೋಣ ಎಂದು ಯುವತಿ ಬಳಿ ಕೇಳಿಕೊಂಡಿದ್ದರು. ಇದಕ್ಕೆ ಯುವತಿ ಒಪ್ಪದಿದ್ದಾಗ ಮನನೊಂದು ನೇಣಿಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಕ್ತಿ ಯೋಜನೆ ಅಧ್ಯಯನಕ್ಕಾಗಿ ಆಂಧ್ರ ಸಚಿವರ ತಂಡ ಭೇಟಿ



ಬೆಂಗಳೂರು: ರಾಜ್ಯ ಸರ್ಕಾರ ಜಾರಿಗೊಳಿಸಿರುವ ‘ಶಕ್ತಿ’ ಮಹಿಳೆಯರ ಉಚಿತ ಪ್ರಯಾಣ ಯೋಜನೆಯ ಬಗ್ಗೆ ಅಧ್ಯಯನ ಮಾಡಲು ಆಂಧ್ರಪ್ರದೇಶದ ಸಚಿವರು ಮತ್ತು ಅಧಿಕಾರಿಗಳ ತಂಡ ಶುಕ್ರವಾರ ಕೆಎಸ್‌ಆರ್‌ಟಿಸಿಗೆ ಭೇಟಿ ನೀಡಿತು.

ಆಂಧ್ರದ ಸಾರಿಗೆ ಸಚಿವ ರಾಮಪ್ರಸಾದ್ ರೆಡ್ಡಿ, ಗೃಹ ಸಚಿವೆ ಅನಿತಾ ವಂಗಲಪುಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಗುಮ್ಮಿಡಿ ಸಂಧ್ಯಾರಾಣಿ, ಸಾರಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಗೆ ಭೇಟಿ ನೀಡಿ ಚರ್ಚಿಸಿದರು.

ಶಕ್ತಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕೈಗೊಂಡಿರುವ ಕ್ರಮಗಳ ಕುರಿತು ಮಾಹಿತಿ ಪಡೆದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸಾರಿಗೆ ಇಲಾಖೆ ಕಾರ್ಯದರ್ಶಿ, ನಿಗಮದ ವ್ಯವಸ್ಥಾಪಕರು ಮಾಹಿತಿ ನೀಡಿದರು.

ನಿಗಮದ ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-2ಕ್ಕೆ ಭೇಟಿ ನೀಡಿದ ತಂಡವು ಐರಾವತ ಕ್ಲಬ್ ಕ್ಲಾಸ್ 2.0, ಐರಾವತ ಕ್ಲಬ್ ಕ್ಲಾಸ್, ಅಂಬಾರಿ ಡ್ರೀಮ್ ಕ್ಲಾಸ್, ಪಲ್ಲಕ್ಕಿ, ಅಂಬಾರಿ ಉತ್ಸವ, ಫ್ಲೈ ಬಸ್, ನಗರ ಸಾರಿಗೆ, ರಾಜಹಂಸ ಹಾಗೂ ಅಶ್ವಮೇಧ ವಾಹನಗಳನ್ನು ವೀಕ್ಷಿಸಿತು.

ವಿಧಾನಸೌಧದ ಕಚೇರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಗ್ಯಾರಂಟಿ ಯೋಜನೆಗಳ ಆರ್ಥಿಕತೆ, ಸಾಧನೆಗಳ ಕುರಿತು ಚರ್ಚಿಸಿತು. ಶಕ್ತಿ ಯೋಜನೆಯ ಯಶಸ್ಸಿನಿಂದ ಆರ್ಥಿಕತೆಗೆ ಸಿಕ್ಕಿರುವ ಚೈತನ್ಯ ಮತ್ತು ಮಹಿಳಾ ಸಬಲೀಕರಣದ ದೃಷ್ಟಿಯಿಂದ ಆಗಿರುವ ಬದಲಾವಣೆಗಳ ಕುರಿತಂತೆ ಚರ್ಚಿಸಿ ಸಮಗ್ರ ಮಾಹಿತಿ ಪಡೆದುಕೊಂಡರು.

ಬೇರೆಡೆ ಕರೆದೊಯ್ಯಲು ಚಾಲಕನ ಯತ್ನ ಆಟೊದಿಂದ ಜಿಗಿದು ಮಹಿಳೆ ಬಚಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕ್ ಮಾಡಿದ್ದ ಸ್ಥಳದ ಬದಲಿಗೆ ಬೇರೊಂದು ಸ್ಥಳಕ್ಕೆ ಮಹಿಳೆಯೊಬ್ಬರನ್ನು ಆಟೊ ಚಾಲಕ ಕರೆದೊಯ್ಯಲು ಯತ್ನಿಸಿದ್ದು, ಆಕೆ ಆಟೊದಿಂದ ಜಿಗಿದು ಪಾರಾಗಿದ್ದಾರೆ.

ಗುರುವಾರ ರಾತ್ರಿ ಹೆಬ್ಬಾಳದ ವೀರಣ್ಣಪಾಳ್ಯ ದಲ್ಲಿ ಈ ಘಟನೆ ನಡೆದಿದೆ ಎಂದು ಮಹಿಳೆಯ ಪತಿ ಅಜರ್ ಖಾನ್ ಅವರು ‘ಎಕ್ಸ್’ ಖಾತೆಯಲ್ಲಿ ಮಾಹಿತಿ ಹಂಚಿಕೊಂಡು ನಗರ ಪೊಲೀಸರಿಗೆ ಟ್ಯಾಗ್ ಮಾಡಿದ್ದರು. ಅದನ್ನು ಆಧರಿಸಿ ಅಮೃತಹಳ್ಳಿ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಮದ್ಯದ ಅಮಲಿನಲ್ಲಿ ಆಟೊ ಚಾಲಕ ಈ ಕೃತ್ಯ ಎಸಗಿದ್ದಾನೆ ಎಂದು ಮಹಿಳೆಯ ಪತಿ ಆರೋಪಿಸಿದ್ದಾರೆ.

‘ಮಹಿಳೆ ಹೊರಮಾವಿನಿಂದ ಥಣಿಸಂದ್ರಕ್ಕೆ ತೆರಳಲು ‘ನಮ್ಮ ಯಾತ್ರಿ’ ಆ್ಯಪ್‌ನಲ್ಲಿ ಆಟೊ ಬುಕ್ ಮಾಡಿದ್ದರು. ಆಟೊ ಬುಕ್ ಮಾಡಿದ್ದ ಕೆಲವೇ ಕ್ಷಣದಲ್ಲಿ ಚಾಲಕ ಸ್ಥಳಕ್ಕೆ ಬಂದಿದ್ದ. ಮಹಿಳೆಯನ್ನು ಹತ್ತಿಸಿಕೊಂಡು ಆಟೊ ಸ್ವಲ್ಪ ದೂರಕ್ಕೆ ಸಾಗಿತ್ತು. ಮಹಿಳೆ ನೀಡಿದ್ದ ವಿಳಾಸದ ಬದಲಿಗೆ ಬೇರೊಂದು ಸ್ಥಳಕ್ಕೆ ಮಹಿಳೆಯನ್ನು ಕರೆದೊಯ್ಯಲು ಚಾಲಕ ಮುಂದಾದ. ಮಹಿಳೆ ಗಾಬರಿಗೊಂಡರು.



ಕೂಗಾಡಿದರೂ ಆಟೊವನ್ನು ಚಾಲಕ ನಿಲ್ಲಿಸಿರಲಿಲ್ಲ. ಚಾಲಕನ ವರ್ತನೆಯಿಂದ ಭಯಗೊಂಡು ಚಲಿಸುತ್ತಿದ್ದ ಆಟೊದಿಂದ ಜಿಗಿದು ಮಹಿಳೆ ಮನೆಗೆ ತೆರಳಿದ್ದರು’ ಎಂದು ಹೇಳಲಾಗಿದೆ.

‘ಸಹಾಯವಾಣಿ ಇಲ್ಲ’: ‘ನಮ್ಮ ಯಾತ್ರಿ’ಗೆ ಯಾವುದೇ ಸಹಾಯವಾಣಿ ಇಲ್ಲ. ಈ ರೀತಿಯ ತುರ್ತು ಸಂದರ್ಭದಲ್ಲಿ 24 ಗಂಟೆ ಕಳೆದರೂ ಕ್ರಮ ತೆಗೆದುಕೊಂಡಿಲ್ಲ’ ಎಂದು ಹಲವರು ಆರೋಪಿಸಿದ್ದಾರೆ. ‘ಚಾಲಕನ ವಿರುದ್ಧ ಕ್ರಮಕೈಗೊಳ್ಳುವಂತೆ ತಿಳಿಸಿದರೂ ನಮ್ಮ ಯಾತ್ರಿ ಸಂಸ್ಥೆಯೂ ಆರಂಭದಲ್ಲಿ ವಿಳಂಬ ಧೋರಣೆ ಅನುಸರಿಸಿತ್ತು. ಈ ಬಗ್ಗೆ ಒತ್ತಾಯಿಸಿದಾಗ ಕೃತ್ಯದ ಬಗ್ಗೆ ವಿಷಾದ ವ್ಯಕ್ತಪಡಿಸಿ, ಆಟೊ ಚಾಲಕನ ಐಡಿ ಬ್ಲಾಕ್ ಮಾಡಿದೆ’ ಎಂದು ಅಜರ್ ತಿಳಿಸಿದ್ದಾರೆ.

ಆಟೊ ಚಾಲಕ ಸುನಿಲ್ ಎನ್ನಲಾಗುತ್ತಿದ್ದು, ಆತನ ವಿರುದ್ಧ ಕಾನೂನು ಕ್ರಮಕೊಳ್ಳಬೇಕೆಂದು ಒತ್ತಾಯಿಸಿ ಅಮೃತಹಳ್ಳಿ ಪೊಲೀಸರಿಗೆ ಅಜರ್ ದೂರು ನೀಡಿದ್ದಾರೆ.

ಶಿವಮೂರ್ತಿ ಶಿವಾಚಾರ್ಯ ಶ್ರೀಗಳಿಂದ ಆ್ಯಪ್ ಅಭಿವೃದ್ಧಿ

ವಚನ ಸಂಗೀತ ಕೇಳಿ, ನೃತ್ಯ ನೋಡಿ...

• ಎಂ.ಎನ್.ಯೋಗೇಶ್

ಚಿತ್ರದುರ್ಗ: ಸಿರಿಗೆರೆಯ ತರಳಬಾಳು ಬೃಹನ್ಮಠದ ಪೀಠಾಧಿಪತಿ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ಸಿದ್ಧಗೊಂಡಿರುವ ‘ಶಿವಶರಣ ವಚನ ಸಂಪುಟ’ ಮೊಬೈಲ್ ಆ್ಯಪ್ ಹೊಸ ರೂಪ ಪಡೆದಿದ್ದು, ಸಾವಿರಾರು ವಚನಗಳಿಗೆ ನೀಡಲಾದ ಸಂಗೀತ, ಗಾಯನ, ನೃತ್ಯದ ಸ್ಪರ್ಶವು ನೋಡುಗರ ಮನ ತಣಿಸುತ್ತಿದೆ.

ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಸೇರಿ 255 ವಚನಕಾರರ 22 ಸಾವಿರ ವಚನಗಳನ್ನು ಈ ಮೊಬೈಲ್ ಆ್ಯಪ್‌ಗೆ ಅಳವಡಿಸಲಾಗಿದೆ. ಸದ್ಯ ವಿಶ್ವದಾದ್ಯಂತ 41 ಲಕ್ಷಕ್ಕೂ ಅಧಿಕ ವೀಕ್ಷಣೆ ಪಡೆದಿವೆ. ಇಲ್ಲಿಯವರೆಗೂ ಕನ್ನಡ, ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಮರಾಠಿ ಭಾಷೆಗಳಲ್ಲಿ ವಚನ ಅಳವಡಿಸಲಾಗಿತ್ತು, ಈಗ ಉರ್ದು ಭಾಷೆಯಲ್ಲೂ ದೊರೆಯುತ್ತಿವೆ. ಜರ್ಮನ್ ಭಾಷಾಂತರ ಕೆಲಸವೂ ನಡೆಯುತ್ತಿದೆ.

2022ರಲ್ಲಿ ಲೋಕಾರ್ಪಣೆಗೊಂಡ ಮೊಬೈಲ್ ಆ್ಯಪ್ ಹೊಸ ಲಯ, ವಿನ್ಯಾಸದೊಂದಿಗೆ ವಚನಪ್ರೇಮಿಗಳ ಮನ ತಲುಪುತ್ತಿದೆ. ಇತ್ತೀಚೆಗೆ ಸಂಗೀತ, ನೃತ್ಯ ರೂಪವನ್ನೂ ನೀಡಲಾಗಿದ್ದು, ಒಂದೇ ಕ್ಲಿಕ್‌ನಲ್ಲಿ ಕೇಳುಗರು ಇಷ್ಟದ ವಚನಗಳ ಗಾಯನವನ್ನು ಕೇಳಬಹುದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ವಚನಗಳ ನೃತ್ಯವನ್ನೂ ವಿಡಿಯೊ ಮೂಲಕ ವೀಕ್ಷಿಸಬಹುದಾಗಿದೆ.

ಆ್ಯಪ್‌ನ ಮುಖಪುಟ ತೆರೆದುಕೊಳ್ಳುತ್ತಿದ್ದಂತೆ ಶಿವಶರಣರ ಭಾವಚಿತ್ರ ಕಾಣಿಸುತ್ತವೆ. ಇಷ್ಟದ ಶರಣರ ಚಿತ್ರ ಸ್ಪರ್ಶಿಸಿದರೆ ಅವರ ವಚನಗಳು ಮುಂದೆ ಬರುತ್ತವೆ. ಪುಟದ ಕೆಳಗೆ ಭಾಷೆಯ ಕೊಂಡಿಗಳಿದ್ದು ಆಯಾ ಭಾಷೆಯಲ್ಲಿ ಓದಬಹುದಾಗಿದೆ. ಪ್ರತಿ ವಚನದ ಮುಂದೆ ಸಂಗೀತ ಸಂಕೇತವಿದ್ದು ಅದನ್ನು ಸ್ಪರ್ಶಿಸಿ ಗಾಯನ ಕೇಳಬಹುದು, ವಿಡಿಯೊ ಕೊಂಡಿ ತೆರೆದರೆ ಯೂಟ್ಯೂಬ್ ಲಿಂಕ್ ಮೂಲಕ ನೃತ್ಯವನ್ನೂ ವೀಕ್ಷಿಸಬಹುದು.

ಈಗಾಗಲೇ ಹಾಡಿರುವ ಹಲವು ಖ್ಯಾತನಾಮ ಗಾಯಕರ ಗಾಯನವನ್ನೇ ಆ್ಯಪ್‌ಗೆ ಬಳಸಿಕೊಳ್ಳಲಾಗಿದೆ. ಗಾಯಕರ ವಿವರ ನೀಡಲಾಗಿದೆ. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಅವರ ವಚನಗಳ ಸಂಗೀತ ರೂಪ ಆ್ಯಪ್‌ನಲ್ಲಿ ದೊರೆಯುತ್ತಿದೆ. ಇತರ ವಚನಕಾರರ ಗಾಯನ ಸಂಗ್ರಹ ಹಾಗೂ ಅಳವಡಿಕೆ ಕಾರ್ಯ ಪ್ರಗತಿ ಯಲ್ಲಿದೆ. ವಚನಗಳನ್ನು ಓದಿ, ಕೇಳಿ, ನೋಡಿ ಹಲವು ದೇಶಗಳ, ಹಲವು ಧರ್ಮಗಳ ಜನರು ಸಂದೇಶ ಪ್ರಕಟಿಸಿದ್ದಾರೆ. ಸಂದೇಶಗಳನ್ನು ಆ್ಯಪ್‌ನಲ್ಲೇ ನೋಡಬಹುದಾಗಿದೆ.


ಆ್ಯಪ್ ಸೇರಿದ ತಾಳೆಗರಿ: ತರಳಬಾಳು ಬೃಹನ್ಮಠದ ಸಂಗ್ರಹದಲ್ಲಿದ್ದ ತಾಳೆಗರಿ ವಚನಗಳನ್ನು ಆ್ಯಪ್‌ನಲ್ಲಿ ಅಳವಡಿಸ ಲಾಗಿದೆ. ವಚನದ ಜೊತೆಗೆ ತಾಳೆಗರಿಯೂ ತೆರೆದುಕೊಳ್ಳುವಂತೆ ಅದನ್ನು ಸ್ಕ್ಯಾನ್ ಮಾಡಿ ವಿಶೇಷ ರೀತಿಯಲ್ಲಿ ವಿನ್ಯಾಸ ಮಾಡಲಾಗಿದೆ. ಬೃಹನ್ಮಠದ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಸಂಗ್ರಹದ ತಾಳೆಗರಿ, ದೇವಕವಿ ಮರಳುಸಿದ್ದೇಶ್ವರ ಕಾವ್ಯವನ್ನು ಆ್ಯಪ್‌ನಲ್ಲಿ ಸೇರಿಸಲಾಗಿದೆ.

ತಾಂತ್ರಿಕವಾಗಿ ಅಪಾರ ನೈಪುಣ್ಯ ಹೊಂದಿರುವ ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಸ್ವತಃ ಪ್ರೋಗ್ರಾಮಿಂಗ್ ಕೋಡಿಂಗ್ ಅರಿತು ಆ್ಯಪ್ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ತ್ರಿಪದಿ, ಕಗ್ಗ, ಕೀರ್ತನೆ

1994ರಲ್ಲೇ ಪಾಣಿನಿ ಮಹರ್ಷಿಯ ಅಷ್ಟಾಧ್ಯಾಯ ಸೂತ್ರಗಳನ್ನು ‘ಗಣಕಾಷ್ಟಾಧ್ಯಾಯ’ ತಂತ್ರಾಂಶಕ್ಕೆ ಅಳವಡಿಸಿದ್ದೆ. ನಂತರ ‘ಗಣಕ ವಚನ ಸಂಪುಟ’ ಕಂಪ್ಯೂಟರ್ ಆ್ಯಪ್ ರೂಪಿಸಿದ್ದೆ. ಮುಂದುವರಿದು ‘ಶಿವಶರಣರ ವಚನ ಸಂಪುಟ’ ಮೊಬೈಲ್ ಆ್ಯಪ್ ಬಂದಿದೆ ಎಂದು ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ‘ಪ್ರಜಾವಾಣಿ’ಗೆ ತಿಳಿಸಿದರು.

‘ಶಿವಶರಣರ ವಚನ ಸಂಪುಟ’ ಆ್ಯಪ್‌ನಲ್ಲೇ ಸರ್ವಜ್ಞನ ತ್ರಿಪದಿ, ಡಿವಿಜಿ ಅವರ ಮಂಕುತಿಮ್ಮನ ಕಗ್ಗಗಳನ್ನೂ ಅಳವಡಿಸಿರುವುದು ವಿಶೇಷವಾಗಿದೆ. ಈಗಾಗಲೇ ಸರ್ವಜ್ಞನ 1,925 ತ್ರಿಪದಿ, 925 ಕಗ್ಗಗಳನ್ನು ಸೇರಿಸಲಾಗಿದೆ. ಮುಂದೆ ಪುರಂದರದಾಸರ ದೇವರನಾಮ, ಕನಕದಾಸರ ಕೀರ್ತನೆ ಗಳನ್ನೂ ಅಳವಡಿಸ ಲಾಗುವುದು’ ಎಂದು ತಿಳಿಸಿದರು.



‘ಶಿವಶರಣ ವಚನ ಸಂಪುಟ’ ಆ್ಯಪ್‌ನ ಮುಖಪುಟ

ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಹದಗೆಟ್ಟಿದ್ದ ಪಟ್ಟಣದ ಎಂ.ಜಿ.ರಸ್ತೆ ಹಾಗೂ ನ್ಯೂಟೌನ್ ರಸ್ತೆಗಳ ದುರಸ್ತಿ, ಡಾಂಬರಿಕರಣ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಎನ್.ಶ್ರೀನಿವಾಸ್ ಅವರು ಶುಕ್ರವಾರ ಗುದ್ದಲಿಪೂಜೆ ನೆರವೇರಿಸಿದರು.

ಈ ಎರಡೂ ರಸ್ತೆಗಳು ಹಾಳಾಗಿದ್ದು, ನಿವಾಸಿಗಳಿಗೆ ಸಂಚಾರ ದುಸ್ತರವಾಗಿತ್ತು. ರಸ್ತೆ ಅವ್ಯವಸ್ಥೆ ಕುರಿತು ‘ಪ್ರಜಾವಾಣಿ’ಯ ಆಗಸ್ಟ್ 17ರ ಸಂಚಿಕೆಯಲ್ಲಿ ‘ರಸ್ತೆಗಳು ಅಧ್ವಾನ – ನಿವಾಸಿಗಳು ಹೈರಾಣ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಗೊಂಡಿತ್ತು.

ವರದಿಗೆ ಸ್ಪಂದಿಸಿದ ಶಾಸಕರು ರಸ್ತೆಗಳ ದುರಸ್ತಿ ಮತ್ತು ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಿದ್ದಾರೆ.

ಗುದ್ದಲಿಪೂಜೆ ನಂತರ ಮಾತನಾಡಿದ ಶಾಸಕ ಶ್ರೀನಿವಾಸ್, ‘₹ 84.44 ವೆಚ್ಚದಲ್ಲಿ ಚರಂಡಿ ನಿರ್ಮಾಣ ಮತ್ತು ರಸ್ತೆಗಳ ಡಾಂಬರೀಕರಣ ನಡೆಯಲಿದೆ. ಮಂಜೂರಾಗಿರುವ ಅನುದಾನದಲ್ಲಿ ಕಾಮಗಾರಿ ಪೂರೈಸಲು ಕೊರತೆ ಉಂಟಾದರೆ ಹೆಚ್ಚುವರಿ ಮೊತ್ತವನ್ನು ಶಾಸಕರ ಅನುದಾನ ಹಾಗೂ ವೈಯಕ್ತಿಕವಾಗಿ ಭರಿಸುತ್ತೇನೆ’ ಎಂದು ಭರವಸೆ ನೀಡಿದರು.

‘ಎಂ.ಜಿ.ರಸ್ತೆ ಗುಂಡಿಗಳಿಂದ ತುಂಬಿಕೊಂಡಿತ್ತು. ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿರುವು ದರಿಂದ ವಾಹನಸವಾರರು, ಸಾರ್ವಜನಿಕ ನಿಟ್ಟುಸಿರು ಬಿಡುವಂತಾಗಿದೆ. ಯೋಜನಾ ಪ್ರಾಧಿಕಾರದ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಅಧ್ಯಕ್ಷ ವಜ್ರಘಟ್ಟ ನಾಗರಾಜು, ಮುಖಂಡ ಎಂ.ಕೆ. ನಾಗರಾಜು, ನಗರ ಸಭೆ ಅಧ್ಯಕ್ಷೆ ಪೂರ್ಣಿಮಾ ಸುಗ್ಗರಾಜು, ಸ್ಥಾಯಿ ಸಮಿತಿ ಅಧ್ಯಕ್ಷ ಸುನಿಲ್ ಮೂಡ್, ಸದಸ್ಯರಾದ ಲತಾ ಹೇಮಂತಕುಮಾರ್, ಗಂಗಾಧರರಾವ್, ಪ್ರದೀಪ್, ಗಣೇಶ್, ಆನಂದ್ ಹಾಜರಿದ್ದರು.

ಚಿತ್ರಾವಳಿ


ಕೆಎಎಸ್ ಅಧಿಕಾರಿಗಳ ಸಂಘ ಪ್ರಕಟಿಸಿರುವ ಹೊಸ ವರ್ಷದ ಕ್ಯಾಲೆಂಡರ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ಕೆ. ಶಿವಸ್ವಾಮಿ, ಕೆಎಎಸ್ ಅಧಿಕಾರಿಗಳಾದ ಚನ್ನಬಸಪ್ಪ, ವೆಂಕಟೇಶಯ್ಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಜಿ. ಸತ್ಯವತಿ ಇದ್ದರು


ಮೀನುಗಾರಿಕೆ ಇಲಾಖೆ ಪ್ರಕಟಿಸಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮೀನುಗಾರಿಕೆ ಸಚಿವ ಮಂಕಾಳ.ಎಸ್.ವೈದ್ಯ ಅವರು ವಿಧಾನಸೌಧದಲ್ಲಿ ಶುಕ್ರವಾರ ಬಿಡುಗಡೆ ಮಾಡಿದರು. ಮೀನುಗಾರಿಕೆ ಇಲಾಖೆ ನಿರ್ದೇಶಕ ಕೆ.ದಿನೇಶ್ ಕುಮಾರ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು


ನಗರದಲ್ಲಿ ಶುಕ್ರವಾರ ಸೆಂಟರ್ ಫಾರ್ ಸಸ್ಟೇನಬಲ್ ಡೆವಲಪ್‌ಮೆಂಟ್, ಐಎಎಸ್ ಅಧಿಕಾರಿಗಳ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ ನಿವೃತ್ತ ಮುಖ್ಯ ಕಾರ್ಯದರ್ಶಿ ಎ. ರವೀಂದ್ರ (ಎಡದಿಂದ ಮೂರನೆಯವರು) ಅವರ ‘ಸದ್ಧರ್ಮಗೀತ’ ಪುಸ್ತಕವನ್ನು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಬಿಡುಗಡೆ ಮಾಡಿದರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಮತ್ತು ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸಿ. ಸೋಮಶೇಖರ ಉಪಸ್ಥಿತರಿದ್ದರು

ನಗರದಲ್ಲಿ ಇಂದು


ಕೃಷ್ಣಾನಂದ ಕಾಮತ ಮತ್ತು ಜ್ಯೋತ್ಸ್ನಾ ಕಾಮತ ಸಂಸ್ಮರಣೆ: ವಿಶ್ವೇಶ್ವರ ಭಟ್, ಎಸ್. ದಿವಾಕರ್, ನೇಮಿಚಂದ್ರ, ಜಯಂತ ಕಾಯ್ಕಿಣಿ, ನಾಗೇಶ ಹೆಗಡೆ, ಎನ್. ಗಾಯತ್ರಿ, ಹೂಗೊಪ್ಪಲು ಕೃಷ್ಣಮೂರ್ತಿ, ಎಂ.ಭೈರೇಗೌಡ, ಸುಷ್ಮಾ ಆರೂರ್, ಶೇಷಶಾಸ್ತ್ರಿ, ವಿಕಾಸ್ ಕಾಮತ್, ಆಯೋಜನೆ: ಕೃಷ್ಣಾನಂದ ಕಾಮತ ಪ್ರತಿಷ್ಠಾನ, ಸ್ಥಳ: ಸುಚಿತ್ರಾ, ಸಿನಿಮಾ ಮತ್ತು ಸಾಂಸ್ಕೃತಿಕ ಫೌಂಡೇಷನ್ ಭವನ, 9ನೇ ಮುಖ್ಯರಸ್ತೆ, ಬನಶಂಕರಿ, ಬೆಳಿಗ್ಗೆ 9

20ನೇ ವಾರ್ಷಿಕೋತ್ಸವ, ಅನುಬಂಧ 2024–25: ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಮುಖ್ಯ ಅತಿಥಿಗಳು: ನ್ಯಾ.ವಿ.ಗೋಪಾಲಗೌಡ, ವೈಜಯಂತಿ ಕಾಶಿ, ವೂಡೇ ಪಿ. ಕೃಷ್ಣ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 9.30

ಸಂಕೇತಿ ಉತ್ಸವ: ಕರಕುಶಲ ವಸ್ತುಗಳು ಹಾಗೂ ಗೃಹೋಪಯೋಗಿ ವಸ್ತುಗಳ ಪ್ರದರ್ಶನ, ಚಾಲನೆ: ಎಲ್.ಎ. ರವಿಸುಬ್ರಮಣ್ಯ, ಮುಖ್ಯ ಅತಿಥಿ: ಮೇದಿನಿ ಗರುಡಾಚಾರ್ ಆಯೋಜನೆ: ಸಂಕೇತಿ ಮಹಿಳಾ ಸಮಾಜ ಟ್ರಸ್ಟ್, ಸ್ಥಳ: ಶಂಕರನಾಗ್ ಆಟದ ಮೈದಾನ, ಎಸ್.ಬಿ.ಎಂ. ಕಾಲೊನಿ, ಬನಶಂಕರಿ 1ನೇ ಹಂತ, ಬೆಳಿಗ್ಗೆ 9.30

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ: ಉದ್ಯಮಿ ಪ್ರತಿನಿಧಿಗಳ ಸಮಾವೇಶ, ಉದ್ಘಾಟನೆ: ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ಎಚ್.ಡಿ. ಕುಮಾರಸ್ವಾಮಿ, ಆಯೋಜನೆ: ಫಸ್ಟ್ ಸರ್ಕಲ್, ಸ್ಥಳ: ಗೇಟ್ ಸಂಖ್ಯೆ 4, ಗಾಯತ್ರಿ ಗ್ರ್ಯಾಂಡ್ ಮತ್ತು ಗಾಯತ್ರಿ ವೃಕ್ಷ, ಅರಮನೆ ಮೈದಾನ, ಬೆಳಿಗ್ಗೆ 10

‘ನಿರಂತರಂ’ ರಾಷ್ಟ್ರೀಯ ಸಂಗೀತ ಮತ್ತು ನೃತ್ಯೋತ್ಸವ: ಆಯೋಜನೆ: ಸಂಗೀತನ ಸಂಭ್ರಮ ಸಂಸ್ಥೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10 ಮತ್ತು ಸಂಜೆ 6



ವಿಶ್ವಮಾನವ ದಿನಾಚರಣೆ ಹಾಗೂ ಕುವೆಂಪು ಅವರ 120ನೇ ಜನ್ಮ ವರ್ಷಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಹಾಗೂ ಪುಸ್ತಕ ಪ್ರದರ್ಶನ: ‘ನನ್ನ ಪ್ರಕೃತಿ ಮತ್ತು ಪರಿಸರ ಚಿತ್ರಗಳ ಹಿನ್ನೆಲೆಯಲ್ಲಿ ಕುವೆಂಪು ಸಾಹಿತ್ಯಕ ಪರಿಸರ’ ವಿಷಯದ ಬಗ್ಗೆ ಉಪನ್ಯಾಸ: ಪ್ರೊ. ಆನಂದಕುಮಾರ್ ಎಸ್., ಆಯೋಜನೆ ಹಾಗೂ ಸ್ಥಳ: ಸುರಾನ ಕಾಲೇಜು, ಸೌತ್ ಎಂಡ್ ರಸ್ತೆ, ಬೆಳಿಗ್ಗೆ 10.30

ಕ್ರೀಡೆ ಮತ್ತು ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಸಮಾರಂಭ: ಮುಖ್ಯ ಅತಿಥಿಗಳು: ದಿವ್ಯಪ್ರಸಾದ್ ಪಿ., ಎಂ.ಎಸ್. ನಟರಾಜ್, ಅಧ್ಯಕ್ಷತೆ: ಪಿ. ಕಾರ್ತಿಕ್, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11

‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿ ಪ್ರದಾನ: ಎಚ್.ಕೆ. ಪಾಟೀಲ, ಮುಖ್ಯ ಅತಿಥಿ: ಸಂಜೀವ್ ಕಿಶೋರ್ ಗೌತಮ್, ಅಧ್ಯಕ್ಷತೆ: ಬಿ.ಎಲ್.ಶಂಕರ್, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಮೂರ್ತಿ, ಎ. ರಾಮಕೃಷ್ಣಪ್ಪ, ಜಿ.ಎಲ್. ಭಟ್, ಸೂರ್ಯ ಪ್ರಕಾಶ್ ಗೌಡ, ನಿರ್ಮಲ ಕುಮಾರಿ ಸಿ.ಎಸ್., ಆಯೋಜನೆ ಹಾಗೂ ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಬೆಳಿಗ್ಗೆ 11.30

‘ದಿನನಿತ್ಯ ಜೀವನದಲ್ಲಿ ರಸಾಯನ ವಿಜ್ಞಾನದ ಮಹತ್ವ’ ಉಪನ್ಯಾಸ ಕಾರ್ಯಕ್ರಮ: ಉದ್ಘಾಟನೆ: ಶ್ರೀಹರ್ಷ, ಉಪನ್ಯಾಸ: ಆರ್.ಎಸ್.ರವೀಂದ್ರ, ಅಧ್ಯಕ್ಷತೆ: ನಾ.ಶ್ರೀಧರ್, ಮುಖ್ಯ ಅತಿಥಿ: ಅಶ್ವಿನಿಹರ್ಷ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸೇಂಟ್ ಲಾರ್ಡ್ಸ್ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕೆಂಪಾಪುರ ಅಗ್ರಹಾರ, ಮಾಗಡಿ ರಸ್ತೆ, ಮಧ್ಯಾಹ್ನ 2


ಲೀಲಾವತಿ

ಕಲಾವಿದರಾದ ಲೀಲಾವತಿ, ಲತಾ ಮಂಗೇಶ್ಕರ್ ಅವರಿಗೆ ‘ಅನುಬಂಧ’ ಗಾನ ನಮನ: ಮುಖ್ಯ ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿನೋದ್ ರಾಜ್, ಅನೂಪ್ ಅಯ್ಯಂಗಾರ್, ಚನ್ನೇಗೌಡ, ವಿ. ಮನೋಹರ್. ಸುಧಾ ನರಸಿಂಹರಾಜು, ರಘುರಾಮ್, ಬಿ.ಕೆ. ಶಿವರಾಮ್, ಶ್ರೀಕಂಠರಾವ್, ಸಾಂಜೀ ವಿಶ್ವನಾಥ್, ಆಯೋಜನೆ: ವೈಷ್ಣವಿ ಮೆಡಿಕೇರ್ ಟ್ರಸ್ಟ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 5.30

ಮಾದಾರ ಚೆನ್ನಯ್ಯ ಜಯಂತಿ, ಮತಾಂತರ ಮತ್ತು ಒಳಮೀಸಲಾತಿ ಕುರಿತು ರಾಜ್ಯ ಮಟ್ಟದ ವಿಚಾರಸಂಕಿರಣ, ಸಾಧಕರಿಗೆ ಸನ್ಮಾನ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪೂರ, ಸುಧಾಮ ದಾಸ್, ಎಲ್. ಹನುಮಂತಯ್ಯ, ‘ಮುಖ್ಯಮಂತ್ರಿ’ ಚಂದ್ರು, ಎಂ. ಲಕ್ಷ್ಮೀನಾರಾಯಣ, ಡೇವಿಡ್ ಸಿಮೆಯೋನ್, ಎನ್. ಮೂರ್ತಿ, ಎಂ. ಶಂಕರಪ್ಪ, ಅಧ್ಯಕ್ಷತೆ: ಎಚ್.ಎಂ. ಸುಬ್ಬರಾಜ್, ಆಯೋಜನೆ: ಮೂಲ ಮಾದಿಗ ಮೂಮೆಂಟ್, ಸ್ಥಳ: ಬಾಪೂಜಿ ಸಭಾಂಗಣ, ಲಿಡಕರ್ ಭವನ, ವಸಂತನಗರ, ಮಧ್ಯಾಹ್ನ 2.30

‘ಪ್ರಚಂಡ ರಾವಣ’ ನಾಟಕ ಪ್ರದರ್ಶನ: ಉದ್ಘಾಟನೆ: ಎಸ್.ಎಲ್.ಎನ್. ಸ್ವಾಮಿ, ಅಧ್ಯಕ್ಷತೆ: ಕೆ.ವಿ. ನಾಗರಾಜ ಮೂರ್ತಿ, ಸನ್ಮಾನ: ರಂಗಶ್ರೀ ರಂಗಸ್ವಾಮಿ, ಆಯೋಜನೆ: ಪ್ರತಿಭಾ ಕಲಾನಿಕೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ಈರಾಚಾರ್ ಅಕ್ಕಸಾಲಿ ಅವರ ‘ಸತ್ಯ ಸಂಕಲನ’ ಪುಸ್ತಕ ಬಿಡುಗಡೆ ಹಾಗೂ ‘ಹಳೇ ಬೇರು ಹೊಸ ಚಿಗುರು’ ಭಾವಗೀತೆಗಳ ಕಾರ್ಯಕ್ರಮ: ಉದ್ಘಾಟನೆ: ಕೇಶವ ಕುಮಾರ್, ಪುಸ್ತಕ ಬಿಡುಗಡೆ: ಡಾ.ಸಿ.ಆರ್. ಚಂದ್ರಶೇಖರ್, ಅಧ್ಯಕ್ಷತೆ: ಎನ್.ವಿ. ಅಂಬಾಮಣಿ, ಆಯೋಜನೆ: ಯಶೋಧರೆ ಪ್ರಕಾಶನ, ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ: 3.30ರಿಂದ

ರಾಷ್ಟ್ರೋತ್ಥಾನ ಆಸ್ಪತ್ರೆಯ ದ್ವಿತೀಯ ವಾರ್ಷಿಕೋತ್ಸವ: ಮುಖ್ಯ ಅತಿಥಿಗಳು: ಎಸ್. ಸೋಮನಾಥ್, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಎಂ.ಪಿ. ಕುಮಾರ್, ಉಪಸ್ಥಿತಿ: ದಿನೇಶ್ ಹೆಗ್ಡೆ, ಡಾ. ಆನಂದ್ ಶಂಕರ್, ಡಾ.ಶೈಲಾ ಎಚ್.ಎನ್., ಡಾ. ದೀಪ್ತಿ, ಸ್ಥಳ: ರಾಷ್ಟ್ರೋತ್ಥಾನ ಆಸ್ಪತ್ರೆಯ ಆವರಣ, ಆರ್.ಆರ್. ನಗರ, ಸಂಜೆ 4

ರಂಗದೋಕುಳಿ ಉತ್ಸವ: ನಾಟಕ ಪ್ರದರ್ಶನ, ವಿಚಾರ ಸಂಕಿರಣ, ಗಾಯನ ಮತ್ತು ನೃತ್ಯ, ಉದ್ಘಾಟನೆ: ಲಗ್ಗೆರೆ ನಾರಾಯಣಸ್ವಾಮಿ, ಅಧ್ಯಕ್ಷತೆ: ಧನಂಜಯ ಕೆ.ಎಚ್., ನಾಟಕ: ‘ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ’ ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ಕುವೆಂಪು ರಂಗಮಂದಿರ, ಅಶ್ವಿನಿ ಪಬ್ಲಿಕ್ ಶಾಲೆಯ ಸಮುಚ್ಚಯ, ಎಲ್.ಜಿ. ರಾಮಣ್ಣ ಬಡಾವಣೆ, ಲಗ್ಗೆರೆ, ಸಂಜೆ 4



ಹಾಸ್ಯಬ್ರಹ್ಮ ಟ್ರಸ್ಟ್ ದತ್ತಿ ಉಪನ್ಯಾಸ: ‘ಗೊರೂರು ಸಾಹಿತ್ಯದಲ್ಲಿ ಹಾಸ್ಯ ಪ್ರಜ್ಞೆ’ ವಿಷಯ, ಉಪನ್ಯಾಸ: ಎಸ್.ಆರ್. ವಿಜಯಶಂಕರ, ಉಪಸ್ಥಿತಿ: ನೈಷಧಂ ಎಸ್ಸೆ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

ವಾರ್ಷಿಕೋತ್ಸವ: ಸ್ವಾಮಿ ವಿವೇಕಾನಂದ ದಿವಸ, ‘ಸ್ವಾಮಿ ವಿವೇಕಾನಂದರ ‘ಅಭೀಃ ಅಭೀಃ’ ಮಂತ್ರದ ಮಹತ್ವ’ ಉಪನ್ಯಾಸ: ಸಂದೀಪ್ ವಸಿಷ್ಠ, ‘ಸ್ವಾಮಿ ವಿವೇಕಾನಂದರ ಶಕ್ತಿ ಸಂದೇಶ’ ಉಪನ್ಯಾಸ: ಸ್ವಾಮಿ ತ್ಯಾಗೀಶ್ವರಾನಂದಜಿ ಮಹಾರಾಜ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

ಊಂಜಲ್ ಸಂಗೀತೋತ್ಸವ: ಗಾಯನ: ಶೃತಿ ಕಾರಕೋಡ್ಲು, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿ ಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

24ನೇ ವರ್ಷದ ಪ್ರವಚನ ವಾಹಿನಿ: ಭರತನಾಟ್ಯ: ಕೀರ್ತನಾ ಎಸ್. ಕುಮಾರ್, ಸ್ವಾತಿ ಎ., ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ



ಯಾರಿಗಾಗಿ ನಾನು ಬದುಕಬೇಕು?

ಡಾ. ಡಿ. ಎಂ. ಹೆಗಡೆ

'ಈಗ ನಾನು ಯಾರಿಗೂ ಬೇಡದವಳಾಗಿದ್ದೇನೆ. ನನ್ನನ್ನು ಕಂಡರೆ ಯಾರಿಗೂ ಇಷ್ಟವಿಲ್ಲ. ನಾನು ಸಾಯಬೇಕು ಸಾರ್. ನಾನು ಸಾಯಬೇಕು..' ಹೀಗಂತ ಫೋನ್ ಮಾಡಿ, ಅಳುತ್ತ ಹೇಳಿದರು ಮಮತಾ.

ಬಹಳ ವರ್ಷಗಳಿಂದ ಪರಿಚಯವಿದ್ದ ಮಮತಾ ಹೀಗೆ ಅತ್ತಿದ್ದಾಗಲಿ, ಸಾವಿನ ಕುರಿತು ಮಾತನಾಡಿದ್ದಾಗಲಿ ಇದೇ ಮೊದಲು. ಆಕೆಯ ಮಾತಿನಿಂದ ಸ್ವಲ್ಪ ಗಾಬರಿಯಾದರೂ, ತೋರಗೊಡದೆ 'ಹಾಗೆಲ್ಲ ಮಾತನಾಡಬೇಡಿ; ಏನಾಯ್ತೀಗ? ಎಲ್ಲಿದ್ದೀರಾ' ಎಂದು ಕೇಳಿದೆ.

ಆಕೆಯ ಅಳು ಜೋರಾಗುತ್ತಾ ಹೋಯಿತು. ಅಳುತ್ತಾ ಅಳುತ್ತಾ ಮಮತಾ ಹೇಳಿದಿಷ್ಟು. 'ತಪ್ಪು ಮಾಡಿದ್ದೀನಿ ಸಾರ್. ಅಲ್ಲಲ್ಲ, ನಾನು ಮಾಡಿದ್ದೆಲ್ಲವೂ ತಪ್ಪು. ನನಗೆ ಈಗ ಯಾರೂ ಇಲ್ಲ. ನಾನು ಸತ್ತರೆ ಮಾತ್ರ ಎಲ್ಲರಿಗೂ ಸಮಾಧಾನವಾಗುತ್ತದೆ. ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಗುತ್ತವೆ. ನನ್ನ ಗಂಡ ಯಾವಾಗಲೂ ಹಂಗಿಸ್ತಾರೆ. ' ವೇಸ್ಟ್ ಬಾಡಿ' ಅಂತಾರೆ. ಮಕ್ಕಳಿಬ್ಬರು ದೊಡ್ಡವರಾಗಿದ್ದಾರೆ. ಮಗನಿಗೆ ಇನ್ನೂ ಜವಾಬ್ದಾರಿ ಬಂದಿಲ್ಲ. ಚಿಕ್ಕ ಕೆಲಸನೂ ಮಾಡುವುದಿಲ್ಲ. ಮಗಳಿಗೆ ಕೆಲಸ ಸಿಕ್ಕಿದೆ. ಅವಳಿಗೆ ಬೇಕಾಗುವಷ್ಟು ಸಂಪಾದನೆ ಮಾಡುತ್ತಾಳೆ. ಆದರೆ, ನನ್ನ ಮಾತಿಗೆ ಯಾರೂ ಬೆಲೆ ಕೊಡುವುದಿಲ್ಲ. ಅಗತ್ಯ ಮುಗಿದಿದೆ ಅನ್ನುವ ಹಾಗೆ ನೋಡುತ್ತಾರೆ. ಯಾಕೆ ಬದುಕಬೇಕು? ಮತ್ತು ಯಾರಿಗಾಗಿ ಬದುಕಬೇಕು. ಸತ್ತರೆ ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಿಗುತ್ತೆ ಅಲ್ವಾ ಸರ್' ಎಂದು ಪ್ರಶ್ನೆನೂ ಕೇಳಿದರು.

ಮಮತಾ ಮೇಲ್ಮಧ್ಯಮ ವರ್ಗದ ಮರ್ಯಾದಸ್ತ ಮಹಿಳೆ. ಗಂಡ ಆರಂಕಿ ಸಂಬಳ ತರುವ ಎಂಜಿನಿಯರ್. ಹಣದ ವ್ಯಾಮೋಹ ಇಟ್ಟುಕೊಂಡ ಗಂಡ, ಎಂಜಿನಿಯರಿಂಗ್ ಪದವಿ ಪಡೆದುಕೊಂಡು ಆರೇಳು ವರ್ಷವಾದರೂ ಕೆಲಸ ಮಾಡದೆ, ಅಪ್ಪನ ವಶೀಲಿಯಿಂದ ಆರಂಕಿಯ ಸಂಬಳಕ್ಕೆ ಕಾಯುತ್ತಿರುವ ಮಗ. ಇವರ ನಡುವೆ ಇದ್ದಿದ್ದರಲ್ಲಿ ಸಂತೋಷಪಡುವ ಗೃಹಿಣಿ ಮಮತಾ.

ಸಾವಿನ ಆಲೋಚನೆಯಿಂದ ಹೊರತರುವುದು ಹೇಗೆ?

ಒಂದೇ ಸಮ ದುಃಖ ತೋಡಿಕೊಳ್ಳುತ್ತಿದ್ದ ಮಮತಾರ ಪ್ರತಿ ವಾಕ್ಯ ಕೊನೆಯಾಗುತ್ತಿದ್ದದ್ದು 'ಸಾಯಬೇಕು' ಎಂಬ ಮಾತಿನಿಂದ. ಅಲ್ಲಿಂದ ಅವರನ್ನು ಹೊರತರುವುದು ಹೇಗೆ ಎಂದು ಯೋಚಿಸುತ್ತಿರುವಾಗಲೇ 'ನಾನು ಸತ್ತರೆ ನನ್ನ ಹೆಸರಿನಲ್ಲಿರುವ ಆಸ್ತಿ ಯಾರಿಗೆ ಹೋಗುತ್ತದೆ ಹೇಳಿ ಸಾರ್' ಎಂಬ ಪ್ರಶ್ನೆ ತೂರಿಬಿಟ್ಟರು. 'ಸಾಮಾನ್ಯ ಬಿಳಿ ಕಾಗದದಲ್ಲಿ ಆಸ್ತಿ ಯಾರಿಗೆ ಸೇರಬೇಕು ಎಂದು ಬರೆದಿಟ್ಟರೆ ಸಾಕಾಗುತ್ತೆ ಅಲ್ವಾ ಸಾರ್' ಎಂದೂ ಕೇಳಿದರು.

ಈಗ ಇವರನ್ನು ಮಾತಿಗೆಳೆಯಬೇಕು. ಇಲ್ಲವಾದರೆ ಸಾಯುವ ಆಲೋಚನೆ ಕಾರ್ಯರೂಪಕ್ಕೆ ಬರಬಹುದು ಎನಿಸಿತು. ದೀರ್ಘವಾಗಿ ಉಸಿರಾಡಿ. ಸ್ವಲ್ಪ ನೀರು ಕುಡಿಯಿರಿ ಎಂದು ತಾಕೀತು ಮಾಡಿದೆ. 'ನಿಮ್ಮ ಹೆಸರಿನಲ್ಲಿರುವ ಆಸ್ತಿ ಯಾರಿಗೆ ಸೇರಬೇಕು ಅಂತ ನಿಮ್ಮ ಆಸೆ' ಅಂತನೂ ಕೇಳಿದೆ.

'ನನ್ನ ಗಂಡನಿಗೆ ಸಿಗಬಾರದು ಸಾರ್' ಅಂದರು. ಹಾಗಾದರೆ ಅನಾಥಾಶ್ರಮಕ್ಕೋ, ಮಠಕ್ಕೋ ಬರೆದುಕೊಡ್ತೀರಾ ಅಂತನೂ ಕೇಳಿದೆ. 'ಇಬ್ಬರು ಮಕ್ಕಳಿದ್ದಾರಲ್ಲ. ನನ್ನ ಆಸ್ತಿಗೆ ಅವರೇ ವಾರಸುದಾರರು. ಅವರ ಹೆಸರಿಗೆ ಬರೀತಿನಿ' ಅಂದರು.

ಸಾಯಬೇಕು ಎಂದು ನಿರ್ಧರಿಸಿದ ವ್ಯಕ್ತಿಯೊಂದಿಗೆ ಕೆಲವು ನಿಮಿಷಗಳವರೆಗೆ ಬೇರೆ ವಿಷಯದತ್ತ ಅದರಲ್ಲೂ ವ್ಯವಹಾರಿಕವಾಗಿ ಮಾತಿಗೆಳೆಯುವುದರಿಂದ ಸಾಯುವ ನಿರ್ಧಾರ ಬದಲಾಗಬಹುದು.

ನಿಮಗೆ ತವರು ಮನೆಯಿಂದ ಆಸ್ತಿ ಬಂದಿದೆಯೇ? ಎನ್ನುವ ಪ್ರಶ್ನೆಯಿಟ್ಟೆ. 'ನನಗೆ ಆಸ್ತಿ ಇದೆ ಅಂತಲೇ ನನ್ನನ್ನು ಮದುವೆ ಮಾಡಿಕೊಂಡಿರೋದು' ಅಂದರು. ಈಗ ಇದ್ದಕ್ಕಿದ್ದ ಹಾಗೆ ಸಾಯುವ ಯೋಚನೆ ಯಾಕೆ? ಎಂದೆ. 'ಇದ್ದಕ್ಕಿದ್ದ ಹಾಗೆ ಅಲ್ಲ. ಇವರ ಜತೆ ಏಗುವಷ್ಟು ಶಕ್ತಿ ಕಳೆದುಕೊಂಡಿದ್ದೀನಿ. ಮಕ್ಕಳು ಮಾತು ಕೇಳದಿರುವುದಕ್ಕೆ ನಾನೇ ಕಾರಣವಂತೆ. ಮಗ ಹಾಳಾಗುವುದಕ್ಕೆ ನಾನೇ ಕಾರಣವಂತೆ' ಹೀಗೆ ಹೇಳುತ್ತಾ ಹೋದರು. ಅವರ ಮಾತು ಜಾಸ್ತಿಯಾಗುತ್ತಲೇ ಇತ್ತು. ಆಕೆಯ ತಾಯಿ-ತಂದೆಯರ ಬಗ್ಗೆ ಕೇಳಿದೆ. ಆಕೆಯ ಸಂಬಂಧಿಕರ ಬಗ್ಗೆ ಕೇಳಿದೆ. ಹೀಗೆಯೇ ಕೆಲವು ನಿಮಿಷಗಳ ತನಕ ಮಾತಾಡಿದೆ. ಅಷ್ಟಾಗುವಷ್ಟರಲ್ಲಿ ಆತ್ಮಹತ್ಯೆಯ ಆಲೋಚನೆ ದೂರ ಸರಿದು, ಬದುಕಿನ ಬಗ್ಗೆ ವ್ಯಾಮೋಹ ಆವರಿಸಿದ್ದು ಮಮತಾರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು.

ಆಸ್ತಿಯನ್ನು ಯಾರ ಹೆಸರಿಗೆ ಬರೆದಿಡಬೇಕು? ಎಂದು ಮತ್ತೆ ಕೇಳಿದರು. ಮಕ್ಕಳ ಹೆಸರಿನಲ್ಲಿ ಉಯಿಲು ಬರೆಸಿಡಿ ಅಂದೆ. ಬರೆಸಲಿಕ್ಕೆ ಸಹಾಯ ಮಾಡಿ ಅಂದರು. ಎರಡು ದಿನ ಬಿಟ್ಟು ಕಚೇರಿಗೆ ಬನ್ನಿ. ವ್ಯವಸ್ಥೆ ಮಾಡುತ್ತೇನೆ ಎಂದೆ. ಅಷ್ಟರಲ್ಲಿ ಅವರ ಮಗಳ ಮಾತು ಕೇಳಿತು. ಸಾಯಲು ನಿರ್ಧರಿಸುವ ತೀವ್ರ ಗಳಿಗೆಯಿಂದ ಮಮತಾ ಹೊರಬಂದಿದ್ದು, ತುಸು ಸಮಾಧಾನ ತಂತು. ಎರಡು ದಿನಗಳ ನಂತರ ಬಂದು, ಅರ್ಧ ಗಂಟೆ ಮಾತನಾಡಿ ಹೋದರು. ಆಸ್ತಿಯನ್ನು ಉಯಿಲು ಮಾಡಿಸುವ ಬಗ್ಗೆ ಅವರಾಗಲಿ, ನಾನಾಗಲಿ ಮಾತನಾಡಲಿಲ್ಲ.


ಲೇಖಕರು ಆಪ್ತಸಮಾಲೋಚಕರು

❖

ನಲ್ವತ್ತರ ನಂತರ ನಾಕ

- ಇದು ಋತುಚಕ್ರ ಬಂಧನದ ಸಮಯ. ನಿಮ್ಮ ಹಾರ್ಮೋನುಗಳ ಏರುಪೇರನ್ನೂ ಗಮನಿಸಿ.
- ಯೋಗ, ಪ್ರಾಣಾಯಾಮಗಳು ದಿನಚರಿಯ ಭಾಗವಾಗಿರಲಿ.
- ಸಾಕಷ್ಟು ನೀರು ಕುಡಿಯಿರಿ.
- ನಕಾರಾತ್ಮಕ ಚಿಂತನೆಗಳು ಬಂದಾಗ ಯಾರೊಟ್ಟಿಗಾದರೂ ಮಾತಾಡಿ.
- ಹರೆಯದ ಮಕ್ಕಳು ತಮ್ಮ ದಾರಿಯನ್ನು ಹುಡುಕುವಾಗ, ನೀವು ಬೇಡದವರು ಎಂದು ಚಿಂತಿಸದಿರಿ.
- ಈ ಸಮಯ ನಿಮಗಾಗಿ, ನಿಮ್ಮ ಬದುಕಿಗಾಗಿ ಎಂದುಕೊಂಡು ಹೊಸ ಹವ್ಯಾಸಗಳನ್ನು ಬೆಳೆಸಿಕೊಳ್ಳಿ.
- ಬೇಡದವರೆಂದುಕೊಂಡಷ್ಟೂ ಕಿರಿಕಿರಿಯಾಗಿ, ರೇಗಾಡಲು ಆರಂಭಿಸುವಿರಿ. ಮತ್ತೆ ಬೇಡವಾಗುವಿರಿ. ಈ ವಿಷಚಕ್ರದ ಕೊಂಡಿ ತುಂಡರಿಸಲು ಜೀವನಪ್ರೀತಿ ಬತ್ತದಂತೆ ನೋಡಿಕೊಳ್ಳಿ.
- ಸ್ನೇಹಿತರನ್ನು ಭೇಟಿಯಾಗಿ, ಪ್ರವಾಸ ಹೋಗಿ, ಓದು, ಬರಹ, ಸಂಗೀತ, ನೃತ್ಯ ಇಂಥ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳಿ.
- ನಲ್ವತ್ತರ ನಂತರ ಮಹಿಳೆಯರಿಗೆ ಮತ್ತೊಂದು ಜೀವನ ಸಿಕ್ಕಂತೆ. ಅದನ್ನು ಅಳುತ್ತ ತಿರಸ್ಕರಿಸುವ ಬದಲು, ನಿಮ್ಮ ಬದುಕನ್ನು ನೀವು ಆಳುವುದನ್ನು ಕಲಿಯಿರಿ.

ಸ್ಟೈಲಿಶ್ ಕೋ–ಆರ್ಡ್ ಸೆಟ್ಸ್



ಫ್ಯಾಷನ್

ರೂಪಾ ಕೆ.ಎಂ.

ಟ್ರೆಂಡಿಯಾಗಿಯೂ ಕಾಣಬೇಕು. ಆದರೆ, ಎಲ್ಲ ಸಂದರ್ಭಗಳಲ್ಲಿಯೂ ಉಪಯುಕ್ತವೂ ಎನಿಸಬೇಕು ಅನ್ನುವ ದಿರಿಸಿದ್ದರೆ ಅದು ಕೋ–ಆರ್ಡಿನೇಟೆಡ್ ಸೆಟ್ಸ್. ಒಂದೇ ಬಗೆ ಹಾಗೂ ಬಣ್ಣದ ಟಾಪ್ ಆ್ಯಂಡ್ ಬಾಟಮ್ ಧರಿಸುವುದೇ ಇದರ ವಿಶೇಷ. ಸದ್ಯಕ್ಕೆ ಟಾಪ್ ಆ್ಯಂಡ್ ಟ್ರೌಷರ್ ಇರುವ ಕೋ–ಆರ್ಡ್ ಸೆಟ್‌ಗಳು ಜನಪ್ರಿಯಗೊಂಡಿವೆ.

ಚಳಿಗಾಲಕ್ಕೆ ಹಲವು ಬಗೆಯ ಕೋ–ಆರ್ಡ್ ಸೆಟ್‌ಗಳು ಪರಿಪೂರ್ಣ ದಿರಿಸು ಎನಿಸಿವೆ. ಉಣ್ಣೆ ಬಟ್ಟೆ ಮೇಲೆ ಫ್ಲೋರಲ್ ಪ್ರಿಂಟ್ ಇರುವ ಕೋ–ಆರ್ಡ್ ಸೆಟ್‌ಗಳು ವೈಬ್ರೆಂಟ್ ಆಗಿಯೂ ಕಾಣಿಸುತ್ತವೆ. ಇದನ್ನು ಧರಿಸಿದಾಗ ಹೆಚ್ಚು ಆಭರಣಗಳು ಬೇಕಂತಿಲ್ಲ.

ಇದರ ಜತೆಗೆ ಚಳಿಗಾಲದ ಮೋಜಿನಕೂಟಗಳಿಗೆ ಸೂಕ್ತವೆನಿಸುವುದು ತೆಳು ಎಂಬ್ರಾಯಡರಿಗಳಿರುವ ವೆಲ್ವೆಟ್ ಮಾದರಿಯ ಕೆಂಪು, ಹಸಿರಿನಂಥ ಗಾಢ ಬಣ್ಣದ ಕೋ–ಆರ್ಡ್ ಸೆಟ್. ಇದರ ಜತೆಗೆ ದೊಡ್ಡ ಗಾತ್ರದ ಚಿನ್ನದ ಇಯರಿಂಗ್ ಜತೆ ಧರಿಸಿದರೆ, ಆಕರ್ಷಕವಾಗಿ ಕಾಣುತ್ತದೆ. ತರಂಗಗಳಂತೆ ಕಾಣುವ ರಿಬ್ಡ್ ವೂಲನ್ ಸೆಟ್‌ಗಳು ಹೆಚ್ಚು ಆರಾಮದಾಯಕ ಎನಿಸುತ್ತವೆ. ಇದನ್ನು ಧರಿಸಿ ಗುಂಡಗಿರುವವರು ತೆಳ್ಳಗೆ ಕಾಣಿಸಬಹುದು. ಆಫೀಸಿಗೂ ಸರಿ, ವರ್ಕ್‌ಫ್ರಂ ಹೋಂ ಆದರೂ ಸರಿ ಇದು ಹೆಚ್ಚು ಸೂಕ್ತದಾಯಕ ದಿರಿಸು. ಇದರ ಮೇಲೆ ಲೆದರ್ ಜಾಕೆಟ್ ಹಾಕಿಕೊಂಡು ಹೊರಗೂ ಸುತ್ತಾಡಿ ಬರಬಹುದು.

ಹೊಸತೇನಲ್ಲ

1960ರಿಂದಲೂ ಕೋ–ಆರ್ಡ್ ಸೆಟ್ ಚಾಲ್ತಿಯಲ್ಲಿದೆ. ಎಲ್ಲ ಕಾಲಕ್ಕೂ ಒದಗುವುದರಿಂದ ಈ ದಿರಿಸು ಬಹಳ ಪ್ರಸಿದ್ಧಿ ಪಡೆದಿದೆ. ಕ್ಯಾಷುಯಲ್, ಸಂಜೆಯ ಪಾರ್ಟಿಗಳಿಗೂ ಈ ದಿರಿಸು ಹೇಳಿ ಮಾಡಿಸಿದ್ದು. ಎಂಥ ದೇಹದ ಆಕಾರಕ್ಕೆ ಯಾವ ಬಗೆಯ ಕೋ- ಆರ್ಡ್ ಸೆಟ್‌ಗಳು ಸೂಕ್ತ ಅನ್ನುವುದನ್ನು ನಿರ್ಧರಿಸಿ, ಖರೀದಿಸಿದರೆ ಇನ್ನೂ ಟ್ರೆಂಡಿಯಾಗಿ ಕಾಣಿಸಿಕೊಳ್ಳಬಹುದು.

ಹವರ್‌ಗ್ಲಾಸ್ ಕಾಯದವರಲ್ಲಿ ನಡು ಸಪೂರವಾಗಿದ್ದು, ಎದೆ ಹಾಗೂ ಸೊಂಟ ಅಗಲವಾಗಿರುತ್ತದೆ. ಇಂಥವರು ತೆಳ್ಳಗೆ ಕಾಣಿಸಲು ಎಲ್ಲ ಬಗೆಯ ಕೋ–ಆರ್ಡ್ ಸೆಟ್‌ಗಳು ಹೊಂದುತ್ತವೆ.

ಹೈವೆಸ್ಟೆಡ್ ಸ್ಕರ್ಟ್ ಅಥವಾ ಪ್ಯಾಂಟ್ ಜತೆಗೆ ಕ್ರಾಪ್ ಟಾಪ್ ಧರಿಸಿದರೆ ಉತ್ತಮ ಲುಕ್ ನೀಡಬಲ್ಲದು.

ಎತ್ತರ ಕಾಯದವರಿಗೆ ಪ್ರಿಂಟ್ ಹಾಗೂ ಪ್ಯಾಟರ್ನ್‌ಗಳಿರುವ ಕೋ–ಆರ್ಡ್ ಸೆಟ್‌ಗಳು ಇನ್ನಷ್ಟು ಎತ್ತರ ಕಾಣುವಂತೆ ಮಾಡುತ್ತದೆ. ಎತ್ತರದ ನಿಲುವಿಗೆ ಒಂದು ಘನತೆಯನ್ನು ಒದಗಿಸುತ್ತದೆ.

ಕುಳ್ಳನೆಯ ಕಾಯದವರು ಸಾಧ್ಯವಾದಷ್ಟು ಅತಿ ಉದ್ದವಲ್ಲದ ಟಾಪ್ ಮತ್ತು ಬಾಟಮ್ ಅನ್ನು ಆರಿಸಿಕೊಂಡರೆ ಉದ್ದನೆಯ ನಿಲುವು ಇರುವಂತೆ ಕಾಣಿಸಿಕೊಳ್ಳಬಹುದು. ❖



ಮಗಳಿಗೆ ವಿಪರೀತ ಡಯೆಟ್ ಹುಚ್ಚು, ಏನು ಮಾಡಲಿ?

ಅಂತರಂಗ



ಅಕ್ಷರ ದಾಮ್ಲೆ

- **ನನ್ನ ಮಗಳಿಗೆ ವಿಪರೀತ ಡಯೆಟ್ ಹುಚ್ಚು. ಹದಿನಾಲ್ಕು ವರ್ಷ ಅವಳಿಗೆ. ಏನನ್ನೂ ತಿಂದರೂ ತೂಕ ಹೆಚ್ಚಬಹುದು ಎಂಬ ಆತಂಕ. ಹಾಗಾಗಿ ಏನು ಮಾಡಿಕೊಟ್ಟರು ತಿನ್ನಲು ಇಚ್ಛಿಸುವುದಿಲ್ಲ. ಇವಳ ಈ ಗೀಳಿಗೆ ಪರಿಹಾರವೇನು ಸರ್?**

ಸಾಧಾರಣವಾಗಿ ಹದಿಹರೆಯದ ಮಕ್ಕಳಲ್ಲಿ ಕಂಡುಬರುವ ಸಮಸ್ಯೆ ಇದು. ಇದನ್ನು ನಾವು ಅನೋರೆಕ್ಸಿಯಾ ನರ್ವೋಸಾ (Anorexia Nervosa) ಎಂದು ಕರೆಯುತ್ತೇವೆ. ಈ ರೀತಿಯ ಪರಿಸ್ಥಿತಿ ಕಾಣಿಸಿಕೊಳ್ಳುವುದಕ್ಕೆ ಬೇರೆ ಬೇರೆಯ ಕಾರಣಗಳಿರಬಹುದು. ಹದಿಹರೆಯದ ವಯಸ್ಸು ಎಂಬುವುದು ಎಲ್ಲರಿಗೂ ತಿಳಿದಿರುವಂತೆಯೇ ದೈಹಿಕ ಮತ್ತು ಮಾನಸಿಕ ಬದಲಾವಣೆಯ ಸಮಯ. ದೇಹದಲ್ಲಾಗುವ ಬದಲಾವಣೆಗಳನ್ನು ಕೆಲವು ಬಾರಿ ಮಕ್ಕಳಿಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ತನಗಳ ಬೆಳವಣಿಗೆ ಅವರಿಗೆ ಅಸಹ್ಯದ ಭಾವನೆಯನ್ನೂ ಉಂಟುಮಾಡಬಹುದು. ಅದರ ಜತೆಗೆ, ಇದೇ ಸಮಯದಲ್ಲಿ ಮಕ್ಕಳು ತಮ್ಮ ಐಡೆಂಟಿಟಿಯನ್ನು ಅರ್ಥೈಸಿಕೊಳ್ಳುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ಅವರು ಯಾರನ್ನು ತಮ್ಮ ಆದರ್ಶ ವ್ಯಕ್ತಿಗಳನ್ನಾಗಿ ಪರಿಗಣಿಸಿದ್ದಾರೆ ಎಂಬುವುದೂ ಬಹಳ ಮುಖ್ಯವಾಗುತ್ತದೆ. ಅಂದರೆ, ಅವರು ತೀರಾ ತೆಳ್ಳಗಿದ್ದರಷ್ಟೇ ಚಂದ, ಇಲ್ಲವಾದರೆ ಕುರೂಪ ಎಂಬ ಪರಿಕಲ್ಪನೆ ಆಕೆಯ ಮನಸ್ಸಿನಲ್ಲಿ ಮೂಡಿರಬಹುದು. ಅಥವಾ ಆಕೆಯನ್ನು ಈ ಮೊದಲು ಯಾರಾದರೂ ಆಕೆಯ ದೈಹಿಕ ಅಂಗಸೌಷ್ಠವದ ಕುರಿತು ನಾಚಿಕೆಪಡುವಂತೆ ಮಾಡಿದ್ದರೆ, ಆ ಕಾರಣದಿಂದಲೂ ಆಕೆ ಈ ನಿರ್ಧಾರವನ್ನು ತೆಗೆದುಕೊಂಡಿರಬಹುದು. ಈ ನಡತೆಯ ಹಿಂದೆ ಕಾರಣಗಳು ಅನೇಕ ಇರಬಹುದು.

ಹೇಗೆ ಇದರಿಂದ ಹೊರಗೆ ಬರುವುದು?

1. ಮೊದಲಿಗೆ ಸಮತೋಲಿತ ಆಹಾರದ ಬಗ್ಗೆ ಮಕ್ಕಳಿಗೆ ತಿಳಿಸಿ ಹೇಳಿ. ದೇಹಕ್ಕೆ ಎಲ್ಲಾ ಬಗೆಯ ಪೋಷಕಾಂಶಗಳೂ ಬೇಕು ಎಂಬುವುದನ್ನು ಮನವರಿಕೆ ಮಾಡಿ.

2. ಈ ವಯಸ್ಸಿನಲ್ಲಿ ಚೆನ್ನಾಗಿ ತಿನ್ನದಿದ್ದರೆ, ದೈಹಿಕ ಬೆಳವಣಿಗೆ ಕುಂಠಿತವಾಗಿ ಅದು ಅವರ ಕುಬ್ಜತೆಗೂ ಕಾರಣವಾಗಬಹುದು ಎಂಬುದನ್ನು ತಿಳಿಸಿ.

3. ಬೇಕಾದರೆ, ಬಿ. ಎಮ್. ಐ (ಬಾಡಿ ಮಾಸ್ ಇಂಡೆಕ್ಸ್) ನ ಬಗ್ಗೆಯೂ ಅರಿವನ್ನು ಮೂಡಿಸಬಹುದು. ತನ್ಮೂಲಕ, ಹೇಗೆ ಸ್ಥೂಲಕಾಯವು ಒಂದು ಸಮಸ್ಯೆಯಾಗಿ ಪರಿಣಮಿಸುತ್ತದೋ, ಅದೇ ರೀತಿ, ಅತಿಯಾದ ತೆಳ್ಳಗಿರುವುದರಿಂದಲೂ ಸಮಸ್ಯೆ ಇದೆ ಎನ್ನುವುದನ್ನು ಅರ್ಥೈಸಿ. (ಉದಾಹರಣೆಗೆ, ಸರಿಯಾಗಿ ತಿನ್ನದಿದ್ದರೆ ಮಾಂಸಖಂಡಗಳ ಬೆಳವಣಿಗೆ ಆಗುವುದಿಲ್ಲ. ಹಾಗಾದಾಗ, ಎಲುಬುಗಳಿಗೆ ನೇರವಾಗಿ ಏಟು ಬೀಳುವ ಸಾಧ್ಯತೆಗಳಿವೆ).

ಮಾತ್ರವಲ್ಲ, ಒಂದು ವೇಳೆ ಆಕೆಯ ದೇಹದ ತೂಕ ಹೆಚ್ಚಾದರೆ, ಅದನ್ನು ಆರೋಗ್ಯಕರ ರೀತಿಯಲ್ಲಿ ಕಡಿಮೆ ಮಾಡಿಸುವುದಕ್ಕೆ ಉಪಾಯಗಳಿವೆ. ಅದಕ್ಕೆಂದೇ ನ್ಯೂಟ್ರಿಷಿಯನಿಸ್ಟ್ ಇದ್ದಾರೆ ಎಂಬುವ ಧೈರ್ಯ ತುಂಬಿ. ಈ ರೀತಿ ಮಕ್ಕಳಿಗೆ ಅರ್ಥ ಮಾಡಿಸುವ ಮೂಲಕ ಅವರನ್ನು ಈ ಸಮಸ್ಯೆಯಿಂದ ಹೊರಗೆ ತರುವುದಕ್ಕೆ ಸಾಧ್ಯವಿದೆ. ಒಂದು ವೇಳೆ ನಿಮ್ಮಿಂದ ಸಾಧ್ಯವಾಗದಿದ್ದರೆ, ಯಾವುದಾದರೂ ತಜ್ಞರ ಬಳಿ ಕರೆದುಕೊಂಡು ಹೋಗಿ.

ಬಾಣಂತಿಯರಿಗೆ ಪಥ್ಯಾಹಾರ

ರಸಾಸ್ವಾದ

ಮಗು ಹುಟ್ಟಿದ ಬಳಿಕ ಬಾಣಂತಿಯರ ದೇಹದಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತವೆ. ದೇಹವು ಪುನಃ ಮೊದಲಿನಂತೆ ಆಗಲು ಪಥ್ಯಾಹಾರ ಕಡ್ಡಾಯ. ಮಗುವಿಗೆ ಹಾಲುಣಿಸುವಾಗ ಬಾಣಂತಿಯರಿಗೆ ಪೋಷಕಾಂಶಗಳ ಕೊರತೆ ಉಂಟಾಗುತ್ತದೆ. ದೇಹವನ್ನು ಸಮತೋಲನವಾಗಿ ಕಾಪಾಡಲು ಮಾಡಿದ ಸಾಂಪ್ರದಾಯಿಕ ಅಡುಗೆಗಳು ಇಲ್ಲಿವೆ. ಇಲ್ಲಿರುವ ಅಡುಗೆಗಳನ್ನು ಬಾಣಂತಿಯರು ಮಾತ್ರವಲ್ಲದೇ ಮನೆಮಂದಿಯಲ್ಲ ಸವಿಯಬಹುದು. ಇವುಗಳ ರೆಸಿಪಿ ನೀಡಿದ್ದಾರೆ ವೇದಾವತಿ ಎಚ್.ಎಸ್.

ಬೆಳ್ಳುಳ್ಳಿ ಚಟ್ನಿ

ಬೇಕಾಗುವ ಸಾಮಗ್ರಿಗಳು:ಎಳ್ಳು 1/2 ಕಪ್, ತುಪ್ಪ 4 ಟೀ ಚಮಚ, ಬೆಳ್ಳುಳ್ಳಿ 25 ರಿಂದ 30 ಎಸಳುಗಳು, ಒಣಮೆಣಸಿನಕಾಯಿ 8 ಅಥವಾ ಕಾಳುಮೆಣಸನ್ನು ಹಾಕುತ್ತಿದ್ದರೆ 2 ಟೇಬಲ್ ಚಮಚ, ಒಣಕೊಬ್ಬರಿ 1/2 ಕಪ್, ಕಲ್ಲುಪ್ಪು ರುಚಿಗೆ ತಕ್ಕಷ್ಟು, ಬೆಲ್ಲ 1 ಟೇಬಲ್ ಚಮಚ, ಕಾದಾರಿದ ನೀರು 1 ಕಪ್.

ತಯಾರಿಸುವ ವಿಧಾನ: ಬಾಣಲೆಗೆ ಎಳ್ಳನ್ನು ಹಾಕಿ ಸಿಡಿಯುವರೆಗೆ ಹುರಿದು ತಟ್ಟೆಯಲ್ಲಿ ತೆಗೆದಿಡಿ. ಬಳಿಕ ಬಾಣಲೆಗೆ 2 ಟೀ ಚಮಚ ತುಪ್ಪವನ್ನು ಹಾಕಿ ಬೆಳ್ಳುಳ್ಳಿಯನ್ನು ಸೇರಿಸಿ ಬಣ್ಣ ಬದಲಾಗುವರೆಗೆ ಹುರಿಯಿರಿ. ನಂತರ ಬೆಳ್ಳುಳ್ಳಿ ಜೊತೆಗೆ ಒಣಮೆಣಸಿಕಾಯಿಯನ್ನು ಸೇರಿಸಿ ಗರಿ ಗರಿಯಾಗುವರೆಗೆ ಹುರಿದು ಒಲೆಯನ್ನು ಆರಿಸಿ. ಒಣಮೆಣಸಿನಕಾಯಿ ಬದಲು ಕಾಳುಮೆಣಸನ್ನು ಹಾಕುತ್ತಿದ್ದರೆ ಅದು ಸಿಡಿಯುವರೆಗೆ ಹುರಿಯಿರಿ. ಯಾವುದಾದರೂ ಒಂದನ್ನು ಉಪಯೋಗಿಸಿ. ಹುರಿದ ಪದಾರ್ಥಗಳ ಜತೆಗೆ ಒಣಕೊಬ್ಬರಿ, ಉಪ್ಪು, ಹುರಿದ ಎಳ್ಳನ್ನು ಸೇರಿಸಿ ಮಿಶ್ರಣ ಮಾಡಿ. ಮಿಕ್ಸಿ ಜಾರಿಗೆ ಹುರಿದ ಪದಾರ್ಥ, ಬೆಲ್ಲ ಮತ್ತು ನೀರನ್ನು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ಕೈಬಾಣಲೆಗೆ 2 ಟೀ ಚಮಚ ತುಪ್ಪ ಹಾಕಿ ಬಿಸಿ ಮಾಡಿಕೊಂಡು ಐದಾರು ಬೆಳ್ಳುಳ್ಳಿಯನ್ನು ಚಿಕ್ಕದಾಗಿ ಕತ್ತರಿಸಿ ತುಪ್ಪದಲ್ಲಿ ಹುರಿಯಿರಿ. ಈ ಒಗ್ಗರಣೆಯನ್ನು ತಯಾರಿಸಿಕೊಂಡ ಚಟ್ನಿಗೆ ಸೇರಿಸಿ ಮಿಶ್ರಣ ಮಾಡಿ. ಬಳಿಕ ಅನ್ನದೊಂದಿಗೆ, ಚಪಾತಿ ಅಥವಾ ನಿಮಗೆ ಇಷ್ಟವಾದ ಪದಾರ್ಥದೊಂದಿಗೆ ಸವಿಯಿರಿ. ಈ ಚಟ್ನಿಯನ್ನು ಬಾಣಂತಿಯರು 20 ದಿನಗಳ ಬಳಿಕ ಉಪಯೋಗಿಸಬೇಕು. ಈ ಚಟ್ನಿಯನ್ನು ಒಮ್ಮೆ ತಯಾರಿಸಿದರೆ ಎರಡರಿಂದ ಮೂರು ದಿನಗಳವರೆಗೆ ಉಪಯೋಗಿಸಬಹುದು.





ಕಹಿ ಜೀರಿಗೆ (ಕಾಳಜೀರಿಗೆ) ಕಷಾಯ ಮತ್ತು ಉಂಡೆ

ಕಹಿ ಜೀರಿಗೆ ಕಷಾಯ ಮತ್ತು ಉಂಡೆಯನ್ನು ಬಾಣಂತಿಯರಿಗೆ ಮಗು ಹುಟ್ಟಿದ ದಿನದಿಂದ ಪ್ರಾರಂಭಿಸಿ 3 ಅಥವಾ 5 ದಿನಗಳವರೆಗೆ ಕೊಡುತ್ತಾರೆ. ಇದನ್ನು ಉಪಯೋಗಿಸುವುದರಿಂದ ಬಾಣಂತಿ ನಂಜು ನಿವಾರಣೆಯಾಗುತ್ತದೆ. ಇದರ ಕಷಾಯ ಅಥವಾ ಉಂಡೆ ಯಾವುದಾದರೂ ಒಂದನ್ನು ತೆಗೆದುಕೊಳ್ಳಬೇಕು. ಕಷಾಯ ಕುಡಿಯಲು ಕಹಿ ಅನ್ನಿಸಿದರೆ ಮಾತ್ರೆಯಂತೆ ಚಿಕ್ಕ ಉಂಡೆಗಳನ್ನು ತಯಾರಿಸಿ ಸವಿಯಬಹುದು. ಇದನ್ನು ಸೇವಿಸುವ ಕ್ರಮ ಹೇಗೆಂದರೆ ಮುಂಜಾನೆ ಖಾಲಿ ಹೊಟ್ಟೆಗೆ ತೆಗೆದುಕೊಳ್ಳಬೇಕು. ಕಹಿ ಜೀರಿಗೆ ತಿಂದ ನಂತರ ಒಂದು ಗಂಟೆ ಯಾವ ಆಹಾರವನ್ನು ತೆಗೆದುಕೊಳ್ಳಬಾರದು. ಶಸ್ತ್ರಚಿಕಿತ್ಸೆ ಮೂಲಕ ಹೆರಿಗೆಯಾದವರು ವೈದ್ಯರ ಸಲಹೆ ಮೇರೆಗೆ ಉಪಯೋಗಿಸಿ.

ಬೇಕಾಗುವ ಸಾಮಗ್ರಿಗಳು: 100 ಗ್ರಾಂ ಕಹಿ ಜೀರಿಗೆ, ಸ್ವಲ್ಪ ಬೆಲ್ಲ.

ತಯಾರಿಸುವ ವಿಧಾನ: ಕಹಿ ಜೀರಿಗೆಯನ್ನು ಬಿಸಿಲಿನಲ್ಲಿ ಒಣಗಿಸಿ ಮಿಕ್ಸಿಯಲ್ಲಿ ನುಣ್ಣಗೆ ಪುಡಿ ಮಾಡಿಕೊಳ್ಳಿ.

ಉಂಡೆ ತಯಾರಿಸುವ ವಿಧಾನ: 1 ಟೇಬಲ್ ಚಮಚ ಕಹಿ ಜೀರಿಗೆ ಪುಡಿಯನ್ನು ಬಟ್ಟಲಿಗೆ ಹಾಕಿ. ಜೊತೆಗೆ 1 ಟೀ ಚಮಚ ಬೆಲ್ಲದ ಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣದಿಂದ 5 ಚಿಕ್ಕ ಚಿಕ್ಕ ಉಂಡೆಗಳನ್ನು ತಯಾರಿಸಿಟ್ಟುಕೊಳ್ಳಿ. ಖಾಲಿ ಹೊಟ್ಟೆಗೆ ದಿನಕ್ಕೆ 1 ಉಂಡೆಯನ್ನು ಮಾತ್ರೆಯಂತೆ ನುಂಗಿ ಸ್ವಲ್ಪ ನೀರು ಕುಡಿಯಿರಿ.

ಕಷಾಯ ತಯಾರಿಸುವ ವಿಧಾನ: ಬಟ್ಟಲಿಗೆ 200 ಎಂಎಲ್ (1ಕಪ್) ನೀರು ಹಾಕಿ. ಜೊತೆಗೆ 1 ಟೇಬಲ್ ಚಮಚ ಕಹಿ ಜೀರಿಗೆ ಮತ್ತು ಬೆಲ್ಲವನ್ನು ಸೇರಿಸಿ 100 ಎಂಎಲ್ (1/2 ಕಪ್) ಬರುವರೆಗೆ ಕುದಿಸಿ. ಖಾಲಿ ಹೊಟ್ಟೆಗೆ ಬಿಸಿ ಇರುವಾಗಲೇ ಕುಡಿಯಿರಿ. ಉಳಿದ ಕಹಿ ಜೀರಿಗೆ ಪುಡಿಯನ್ನು ನಂತರ ದಿನಗಳಲ್ಲಿ ಬಾಣಂತಿ ಕಷಾಯಕ್ಕೆ ಸೇರಿಸಿ ಕುಡಿಯುತ್ತಾರೆ.

ಬಾಳೆಹೂವಿನ ಗೊಜ್ಜು



ಬೇಕಾಗುವ ಸಾಮಗ್ರಿಗಳು: ಬಾಳೆ ಹೂವು ಮಧ್ಯಮ ಗಾತ್ರದ್ದು 1, ಒಣ ಕೊಬ್ಬರಿತುರಿ 1 ಕಪ್, ಎಳ್ಳು 5 ಟೀ ಚಮಚ, ಧನಿಯಾ 3 ಟೀ ಚಮಚ, ಜೀರಿಗೆ 2 ಟೀ ಚಮಚ, ಮಂತ್ಯೆ 1 ಟೀ ಚಮಚ, ಸಾಸಿವೆ 1 ಟೀ ಚಮಚ, ಕಾಳುಮೆಣಸು 1/2 ಟೀ ಚಮಚ, ಒಣಮೆಣಸಿನ ಕಾಯಿ 8 ರಿಂದ 10, ತುಪ್ಪ ಸ್ವಲ್ಪ, ಹುಣಸೆಹಣ್ಣು ನಿಂಬೆ ಹಣ್ಣಿನ ಗಾತ್ರದಷ್ಟು, ಉಪ್ಪು ರುಚಿಗೆ ತಕ್ಕಷ್ಟು,
ಬೆಲ್ಲ 2 ಟೀ ಚಮಚ, ಬೆಳ್ಳುಳ್ಳಿ 10 ಎಸಳು.

ತಯಾರಿಸುವ ವಿಧಾನ: ಮೊದಲು ಬಾಳೆ ಹೂವಿನ ಹೊರಗಿನ ಪದರುಗಳನ್ನು ತೆಗೆದು ಒಳ ಭಾಗದ ಚಿಕ್ಕ ಬಿಳಿಯ ಹೂವು ಮಾತ್ರ ಉಪಯೋಗಿಸಿ. ಅದರಲ್ಲಿ ಜಾಸ್ತಿ ಅಂಟಿನ ಅಂಶ ಇರುವುದಿಲ್ಲ. ಬಳಿಕ ಚಿಕ್ಕದಾಗಿ ಹೆಚ್ಚಿಕೊಳ್ಳಿ. ಬಾಣಲೆಗೆ 2 ಟೀ ಚಮಚ ತುಪ್ಪ ಹಾಕಿ ಹೆಚ್ಚಿಕೊಂಡ ಬಾಳೆಹೂವನ್ನು ಬಣ್ಣ ಬದಲಾಗುವರೆಗೆ ಹುರಿಯಿರಿ. ಇನ್ನೊಂದು ಬಾಣಲೆಯಲ್ಲಿ 1 ಟೀ ಚಮಚ ತುಪ್ಪವನ್ನು ಹಾಕಿ ಸಾಸಿವೆ, ಜೀರಿಗೆ, ಮೆಂತ್ಯೆ, ಧನಿಯಾ, ಎಳ್ಳು, ಕಾಳುಮೆಣಸು, ಒಣ ಮೆಣಸಿನಕಾಯಿ ಕೆಂಬಣ್ಣ ಬರುವರೆಗೆ ಹುರಿದುಕೊಳ್ಳಿ. ಮಿಕ್ಸಿ ಜಾರಿಗೆ ಹುರಿದ ಪದಾರ್ಥ, ಒಣಕೊಬ್ಬರಿ ತುರಿ ಮತ್ತು ಹುರಿದ ಬಾಳೆ ಹೂವು ಮತ್ತು ಒಂದು ಕಪ್ ನೀರನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬಾಣಲೆಗೆ 2 ಟೀ ಚಮಚ ತುಪ್ಪ ಹಾಕಿ ಬಿಸಿ ಮಾಡಿಕೊಂಡು ಬೆಳ್ಳುಳ್ಳಿಯನ್ನು ಹಾಕಿ ಕೆಂಬಣ್ಣ ಬರುವರೆಗೆ ಹುರಿಯಿರಿ. ಬಳಿಕ ರುಬ್ಬಿಕೊಂಡ ಮಿಶ್ರಣ, ಎಷ್ಟು ತೆಳ್ಳಗೆ ಬೇಕು ಅಷ್ಟು ನೀರು, ಬೆಲ್ಲವನ್ನು ಸೇರಿಸಿ ಚೆನ್ನಾಗಿ ಕುದಿಸಿ ಒಲೆಯಿಂದ ಇಳಿಸಿ. ಗೊಜ್ಜನ್ನು ಚೆನ್ನಾಗಿ ಕುದಿಸಿಟ್ಟರೆ ಒಂದು ವಾರ ಉಪಯೋಗಿಸಬಹುದು. ಈ ಬಾಳೆಹೂವಿನ ಗೊಜ್ಜನ್ನು ಬಾಣಂತಿಯರು 20 ದಿನಗಳ ನಂತರ ಉಪಯೋಗಿಸಬಹುದು. ಆರೋಗ್ಯಕರವಾದ ಮತ್ತು ರುಚಿಕರವಾದ ಗೊಜ್ಜು ಅನ್ನ, ಚಪಾತಿ, ರಾಗಿ ಮುದ್ದೆ ಜೊತೆಗೆ ಸವಿಯಲು ರುಚಿಯಾಗಿರುತ್ತದೆ.

ಹೇರಳೆಕಾಯಿ ಒಣ ಉಪ್ಪಿನಕಾಯಿ

ಜ್ವರ, ಅಜೀರ್ಣ, ಹೊಟ್ಟೆನೋವು, ಕೆಮ್ಮು, ಶೀತ, ಗಂಟಲು ನೋವು ಮುಂತಾದ ರೋಗಗಳಿಗೆ ಮನೆಮದ್ದಾಗಿ ತುಂಬಾ ಉಪಯೋಗವಾಗುತ್ತದೆ. ಬಾಣಂತಿಯರಿಗೆ ಹತ್ತು ದಿನದ ನಂತರ ಇದನ್ನು ಕೊಡುತ್ತಾರೆ.

ಬೇಕಾಗುವ ಸಾಮಗ್ರಿಗಳು:ಹೇರಳೆಕಾಯಿ 4, ಕಲ್ಲುಪ್ಪು 1/2 ಕಪ್, ಕಾಳುಮೆಣಸು 1/2 ಕಪ್,

ತಯಾರಿಸುವ ವಿಧಾನ: ಹೇರಳೆಕಾಯಿಯ ಒಳಗಿರುವ ಬೀಜಗಳನ್ನು ತೆಗೆದು ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಬಾಣಲೆಯಲ್ಲಿ ಕಲ್ಲುಪ್ಪು ಹಾಕಿ 2 ನಿಮಿಷ ಹುರಿಯಿರಿ. ಬಳಿಕ ಕಾಳುಮೆಣಸು ಹಾಕಿ 3 ರಿಂದ 4 ನಿಮಿಷ ಹುರಿಯಿರಿ. ಆರಿದ ನಂತರ ಮಿಕ್ಸಿಯಲ್ಲಿ ಹಾಕಿ ನುಣ್ಣಗೆ ಪುಡಿ ಮಾಡಿಕೊಳ್ಳಿ. ಈ ಪುಡಿಯನ್ನು ಹೆಚ್ಚಿಕೊಂಡ ಹೇರಳೆಕಾಯಿ ಹೋಳುಗಳಿಗೆ ಹಾಕಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಐದು ದಿನ ಬಿಸಿಲಿನಲ್ಲಿ ಒಣಗಿಸಿ. ಬಳಿಕ ಒಂದು ಬಾಟಲಿನಲ್ಲಿ ಹಾಕಿ ಮುಚ್ಚಿಡಿ. ಬೇಕಾದಾಗ ಉಪಯೋಗಿಸಿ. ಈ ಉಪ್ಪಿನ ಕಾಯಿಯನ್ನು ವರ್ಷಗಳ ಕಾಲ ಉಪಯೋಗಿಸಬಹುದು. ಬಾಣಂತಿಯರು ಇದನ್ನು ಊಟಕ್ಕೆ ಹಾಕಿಕೊಂಡು ತಿನ್ನಬಹುದು.



ಪರಭಾರೆಗೊಂಡ ಸಾಗು ಬಾಣೆ ಜಮೀನು: ಠೇವಣಿ ಮೊತ್ತವನ್ನು ಬಡ್ಡಿಸಹಿತ ಅರ್ಜಿದಾರರಿಗೆ ಹಿಂದಿರುಗಿಸಲು ಆದೇಶ

ಮರಗಳ ಮೇಲೆ ಸರ್ಕಾರಕ್ಕೆ ಹಕ್ಕಿಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಭಾರೆಗೊಂಡ ಸಾಗು ಬಾಣೆ ಜಮೀನು ಅಥವಾ ಅಂತಹ ಜಮೀನಿನ ವ್ಯಾಪ್ತಿಯೊಳಗಿರುವ ಮರಗಳ ಮೇಲೆ ಸರ್ಕಾರಕ್ಕೆ ಯಾವುದೇ ಹಕ್ಕು ಇರುವುದಿಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.


ಮಡಿಕೇರಿ ತಾಲ್ಲೂಕಿನ ದಿವಂಗತ ಎನ್.ಮಹಾಬಲೇಶ್ವರ ಭಟ್ ಅವರ ಕಾನೂನುಬದ್ಧ ವಾರಸುದಾರರಾದ ಗಾಯತ್ರಿ ಕೋಂ ಎನ್.ಎಂ.ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯೊಂದನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಸಾಗು ಬಾಣೆ ಜಮೀನು ಒಮ್ಮೆ ಪರಭಾರೆಗೊಂಡರೆ, ಆ ಜಮೀನಿನ ಮೇಲಾಗಲಿ ಅಥವಾ ಅದರಲ್ಲಿನ ಮರದ ಮೇಲಾಗಲಿ ಸರ್ಕಾರ ತನ್ನ ಯಾವುದೇ ಹಕ್ಕನ್ನು ಪ್ರತಿಪಾದಿಸಲಾಗದು' ಎಂದು ತಿಳಿಸಿದೆ.

'ಪ್ರಕರಣದಲ್ಲಿ ಸಾಗುಬಾಣೆ ಜಮೀನಿನಲ್ಲಿ ಮರಗಳನ್ನು ಕತ್ತರಿಸುವ ಮುನ್ನ ಅರ್ಜಿದಾರರಿಂದ ಠೇವಣಿ ಇರಿಸಿಕೊಂಡಿದ್ದ ₹4.33 ಲಕ್ಷ ಮೊತ್ತವನ್ನು ಅವರಿಗೆ ಹಿಂದಿರುಗಿಸಬೇಕು. ಠೇವಣಿ ಇರಿಸಿದ ದಿನದಿಂದ ಅನ್ವಯವಾಗುವಂತೆ ವಾರ್ಷಿಕ ಶೇ 6ರ ಬಡ್ಡಿ ದರದಲ್ಲಿ ಪಾವತಿಸಬೇಕು' ಎಂದು ಪೀಠವು, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. 'ಮರಗಳನ್ನು ಕತ್ತರಿಸಲು ಅರ್ಜಿದಾರರು ಅನುಮತಿಕೋರಿದಾಗಲೇ ಭೂಮಿಯ ದಾಖಲೆಗಳನ್ನು ಪರಿಶೀಲನೆ ಮಾಡಬೇಕಾದದ್ದು ಅರಣ್ಯಾಧಿಕಾರಿಗಳ ಕರ್ತವ್ಯವಾಗಿತ್ತು. ಈ ಪ್ರಕರಣದಲ್ಲಿ ಅರ್ಜಿದಾರರು ತಪ್ಪಾಗಿ ತಮ್ಮದು ಸಾಗು ಬಾಣೆ ಜಮೀನು ಎಂದು ತೋರಿಸಿದ್ದರು. ಇದರ ಅನುಕೂಲವನ್ನು ನೀವು ಪಡೆಯಬಾರದು' ಎಂದು ನ್ಯಾಯಪೀಠ ಸರ್ಕಾರಕ್ಕೆ ಕಿವಿ ಹಿಂಡಿದೆ.

ಪ್ರಕರಣವೇನು?

ಬಿಳಿಗೇರಿ ಗ್ರಾಮದ ಸರ್ವೆ ನಂಬರ್ 23ರಲ್ಲಿನ 25 ಎಕರೆ ಮತ್ತು ಸರ್ವೆ ನಂಬರ್ 29/7ರಲ್ಲಿನ 13.23 ಎಕರೆ ಜಮೀನನ್ನು ಎನ್.ಮಹಾಬಲೇಶ್ವರ ಭಟ್ ಖರೀದಿಸಿದ್ದರು. 1983ರಲ್ಲಿ ಈ ಜಮೀನಿನಲ್ಲಿರುವ 349 ಮರಗಳನ್ನು ಕತ್ತರಿಸಲು ಅನುಮತಿ ಕೋರಿ ಕೊಡಗು ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಅವರು ಅರ್ಜಿ ಸಲ್ಲಿಸಿದ್ದರು. ಇದಕ್ಕೆ 1983ರ ಫೆಬ್ರುವರಿ 1ರಂದು ಅನುಮತಿ ದೊರೆತಿತ್ತು.

ಅರ್ಜಿದಾರರು ಅರಣ್ಯಾಧಿಕಾರಿಗಳ ಷರತ್ತಿನಂತೆ ಮರಗಳನ್ನು ಕತ್ತರಿಸಿ, ತೆರವು ಕಾರ್ಯದ ಮೌಲ್ಯ ₹4,33,082 ಮೊತ್ತವನ್ನು ಠೇವಣಿ ಇರಿಸಿದ್ದರು. ಮರಗಳನ್ನು ಕತ್ತರಿಸಿ ತೆರವುಗೊಳಿಸಿದ ನಂತರ ಮಹಾಬಲೇಶ್ವರ ಭಟ್ ಅವರಿಗೆ, 'ಈ ಜಮೀನು ಪರಭಾರೆಗೊಂಡ ಸಾಗುಬಾಣೆ ಜಮೀನಾಗಿದ್ದು, ಇದನ್ನು ಕಂದಾಯ ಇಲಾಖೆ ವ್ಯಾಪ್ತಿಗೆ ಒಳಪಡಿಸಲಾಗಿದೆ' ಎಂಬ ವಿಷಯ ಅರಿವಿಗೆ ಬಂದಿತ್ತು. ಹೀಗಾಗಿ, 'ಈ ಜಮೀನು ನನಗೆ ಸೇರಿರುವ ಕಾರಣ ಮರಗಳನ್ನು ಕತ್ತರಿಸಲು ಹಣ ಠೇವಣಿ ಇರಿಸಬೇಕೆಂಬ ಷರತ್ತನ್ನು ವಿಧಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಅವಕಾಶವಿಲ್ಲ. ಆದ್ದರಿಂದ, ಠೇವಣಿ ಹಣವನ್ನು ಹಿಂದಿರುಗಿಸಬೇಕು' ಎಂದು ಅರ್ಜಿದಾರರು ಕೋರಿದ್ದರು. ಆದರೆ, ಮೊತ್ತವನ್ನು ಹಿಂದಿರುಗಿಸಲು ಮಡಿಕೇರಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಿರಾಕರಿಸಿ ದ್ದರು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.



'ಪೋಷಕರಿಗಷ್ಟೇ ಅಧಿಕಾರ'

ಬೆಂಗಳೂರು: 'ಪೋಷಕರ ನಿರ್ವಹಣೆ, ಕಲ್ಯಾಣ ಹಾಗೂ ಹಿರಿಯ ನಾಗರಿಕರ ಕಾಯ್ದೆ–2007ರ ಕಲಂ 16ರಡಿ ಆಸ್ತಿ ವರ್ಗಾವಣೆ ಹಕ್ಕು ರದ್ದುಪಡಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸುವ ಅಧಿಕಾರ ಪೋಷಕರಿಗೆ ಮಾತ್ರ ಇದೆಯೇ ಹೊರತು ಮಕ್ಕಳಿಗಲ್ಲ' ಎಂದು ಸ್ಪಷ್ಟಪಡಿಸಿರುವ ಹೈಕೋರ್ಟ್, ಇದೇ ಮೊದಲ ಬಾರಿಗೆ ಈ ದಿಸೆಯಲ್ಲಿ ಮಹತ್ವದ ತೀರ್ಪು ನೀಡಿದೆ.

ಈ ಸಂಬಂಧ ನಗರದ ಪಿ.ಕೃಷ್ಣ ಮತ್ತು ಅವರ ಮಕ್ಕಳು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ಅರ್ಜಿದಾರರು ಬೇಕಿದ್ದರೆ ತಮ್ಮ ಸ್ಥಿರಾಸ್ತಿ ವ್ಯಾಜ್ಯಕ್ಕೆ ಸಿವಿಲ್ ಕೋರ್ಟ್‌ನಲ್ಲಿ ಪರಿಹಾರ ಕಂಡುಕೊಳ್ಳಬಹುದು' ಎಂದು ನಿರ್ದೇಶಿಸಿದೆ.

'ಹಿರಿಯ ನಾಗರಿಕರ ಕಾಯ್ದೆಯ ಕಲಂ 23ರ ಪ್ರಕಾರ; ಹಿರಿಯ ನಾಗರಿಕರು ಅಥವಾ ಪೋಷಕರು ತಮ್ಮ ಆಸ್ತಿಯನ್ನು ವರ್ಗಾವಣೆ ಮಾಡಿದ್ದರೆ, ಮಕ್ಕಳು ತಮಗೆ ಅಗತ್ಯ ಆರೈಕೆ ಮತ್ತು ಮೂಲಸೌಕರ್ಯ ಒದಗಿಸಬೇಕೆಂಬ ಷರತ್ತುಗಳನ್ನು ವಿಧಿಸಬಹುದು. ಒಂದು ವೇಳೆ ಅವರು ಆ ಷರತ್ತುಗಳನ್ನು ಪೂರೈಸದೆ ಹೋದಲ್ಲಿ ಉಪ ವಿಭಾಗಾಧಿಕಾರಿ ಮುಂದೆ ಗಿಫ್ಟ್ ಡೀಡ್ (ಉಡುಗೊರೆ ಪತ್ರ) ರದ್ದು ಕೋರಿ ಅರ್ಜಿ ಸಲ್ಲಿಸಬಹುದು. ಇದರನ್ವಯ ಉಪವಿಭಾಗಾಧಿಕಾರಿ ಅಥವಾ ಜಿಲ್ಲಾಧಿಕಾರಿ ಕಲಂ 16ರಡಿ ಅಂತಹ ಅರ್ಜಿಗಳನ್ನು ಪರಿಗಣಿಸಿ ಸೂಕ್ತ ಆದೇಶ ಹೊರಡಿಸಬಹುದು' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಕೃಷ್ಣ ಅವರು 2019ರ ಫೆಬ್ರುವರಿ 27ರಂದು ಆಡುಗೋಡಿಯಲ್ಲಿರುವ ತಮ್ಮ ಸ್ಥಿರಾಸ್ತಿಯಲ್ಲಿ 1,500 ಚದರ ಅಡಿ ಜಾಗವನ್ನು ಹಿರಿಯ ಪುತ್ರ ಅಯ್ಯಪ್ಪ ಹೆಸರಿಗೆ ಗಿಫ್ಟ್ ಡೀಡ್ ಮಾಡಿದ್ದರು. ಕೆಲವು ವರ್ಷಗಳ ಬಳಿಕ, 'ನನ್ನ ಹಿರಿಯ ಪುತ್ರ ನನಗೆ ಯಾವುದೇ ಸೌಕರ್ಯ ಒದಗಿಸುತ್ತಿಲ್ಲ. ನನ್ನಿಂದ ಅಕ್ರಮವಾಗಿ ಗಿಫ್ಟ್ ಡೀಡ್ ಮಾಡಿಸಿಕೊಳ್ಳಲಾಗಿದೆ. ಹಾಗಾಗಿ, ಗಿಫ್ಟ್ ಡೀಡ್ ರದ್ದು ಮಾಡಬೇಕು' ಎಂದು ಉಪ ವಿಭಾಗಾಧಿಕಾರಿಗೆ ಮನವಿ ಸಲ್ಲಿಸಿದ್ದರು. ಇದನ್ನು ಮಾನ್ಯ ಮಾಡಿದ್ದ ಉಪ ವಿಭಾಗಾಧಿಕಾರಿ 2023ರ ಫೆಬ್ರುವರಿ 27ರಂದು ಗಿಫ್ಟ್ ಡೀಡ್ ರದ್ದು ಮಾಡಿದ್ದರು.

ಇದನ್ನು ಪ್ರಶ್ನಿಸಿ ಅಯ್ಯಪ್ಪ, ಜಿಲ್ಲಾಧಿಕಾರಿಗೆ ಮೇಲ್ಮನವಿ ಸಲ್ಲಿಸಿದ್ದರು. ಏತನ್ಮಧ್ಯೆ, 2023ರ ಜುಲೈ 14ರಂದು ಕೃಷ್ಣ ಆಸ್ತಿಯನ್ನು ತಮ್ಮ ಎರಡನೇ ಪುತ್ರ ಕೆ.ಲೋಕೇಶ್ ಹೆಸರಿಗೆ ಗಿಫ್ಟ್ ಡೀಡ್ ಮಾಡಿಕೊಟ್ಟಿದ್ದರು. ಮೊದಲನೇ ಪುತ್ರ ಸಲ್ಲಿಸಿದ್ದ ಮೇಲ್ಮನವಿ ಬಾಕಿ ಇದ್ದಾಗಲೇ ಕೃಷ್ಣ ಸಾವನ್ನಪ್ಪಿದ್ದರು. ಕೃಷ್ಣ ಅವರ ವಾರಸುದಾರಿಕೆ ಜಾಗದಲ್ಲಿ ಲೋಕೇಶ್ ಮತ್ತು ಅವರ ಸಹೋದರಿ ಆಸ್ತಿಗೆ ಉತ್ತರಾಧಿಕಾರಿಗಳಾದರು. ಏತನ್ಮಧ್ಯೆ, ಜಿಲ್ಲಾಧಿಕಾರಿ 2023ರ ಆಗಸ್ಟ್ 14ರಂದು ಅಯ್ಯಪ್ಪ ಸಲ್ಲಿಸಿದ್ದ ಮೇಲ್ಮನವಿಯನ್ನು ಮಾನ್ಯ ಮಾಡಿದ್ದರು. ಈ ಆದೇಶವನ್ನು ಲೋಕೇಶ್ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ವಿಚಾರಣೆ ನಡೆಸಿದ್ದ ಏಕಸದಸ್ಯ ಪೀಠವು ಜಿಲ್ಲಾಧಿಕಾರಿ ಆದೇಶವನ್ನು ರದ್ದುಪಡಿಸಿ, 'ಹೊಸದಾಗಿ ಪರಿಶೀಲನೆ ನಡೆಸಿ ತೀರ್ಮಾನ ಕೈಗೊಳ್ಳಿ' ಎಂದು ಜಿಲ್ಲಾಧಿಕಾರಿಗೆ ಸೂಚಿಸಿತ್ತು.



ಸಿ.ಎ ಪರೀಕ್ಷೆಯಲ್ಲಿ ವಿಜಯಪುರದ ದೃಷ್ಟಿ ಜೈನ್‌ಗೆ 11ನೇ ರ‍್ಯಾಂಕ್



ದೃಷ್ಟಿ ಜೈನ್

ವಿಜಯಪುರ: ನವೆಂಬರ್‌ನಲ್ಲಿ ನಡೆದ ಸಿಎ (ಚಾರ್ಟರ್ಡ್ ಅಕೌಂಟೆಂಟ್) ಅಂತಿಮ ಪರೀಕ್ಷೆಯಲ್ಲಿ ವಿಜಯಪುರದ ದೃಷ್ಟಿ ಜೈನ್ ಅವರು ಪ್ರಥಮ ಪ್ರಯತ್ನದಲ್ಲೇ 474 ಅಂಕ ಗಳಿಸಿ ರಾಷ್ಟ್ರಮಟ್ಟದಲ್ಲಿ 11ನೇ ರ‍್ಯಾಂಕ್ ಗಳಿಸಿದ್ದಾರೆ.

'ರಾಷ್ಟ್ರಮಟ್ಟದ ರ‍್ಯಾಂಕ್ ಬರುತ್ತದೆ ಎಂಬ ಕಲ್ಪನೆ ಇರಲಿಲ್ಲ. ಆದರೆ, ಕಠಿಣ ಶ್ರಮ ಹಾಕಿದ್ದೆ. ಇದೀಗ ಯಶಸ್ಸು ಲಭಿಸಿದೆ. ದೊಡ್ಡ ಕಂಪನಿಯಲ್ಲಿ ಉದ್ಯೋಗ ಮಾಡುವ ಗುರಿ ಇದೆ' ಎಂದು ದೃಷ್ಟಿ 'ಪ್ರಜಾವಾಣಿ'ಗೆ ತಿಳಿಸಿದರು. ವಿಜಯಪುರದ 'ಭಾರತ್ ಎಲೆಕ್ಟ್ರಾನಿಕ್ಸ್‌ಕಂಪನಿ'ಯ ಮಾಲೀಕ ವಿಶಾಲ್ ಜೈನ್ ಅವರ ಪುತ್ರಿ ದೃಷ್ಟಿ ನಗರದ ಬಿ.ಎಂ.ಪಾಟೀಲ್ ಪ್ರೌಢಶಾಲೆ, ಪುಣೆಯ ಬಿಎಂಸಿಸಿ ಕಾಲೇಜಿನಲ್ಲಿ ಬಿ.ಕಾಂ ಓದಿದ್ದಾರೆ. ಪುಣೆಯ ಪಿಡಬ್ಲ್ಯುಸಿ ಸಂಸ್ಥೆಯಲ್ಲಿ ಸಿಎ ಇಂಟರ್ನ್‌ಶಿಪ್ ಮುಗಿಸಿದ್ದಾರೆ.

ಯೋಜನಾ ಎಂಜಿನಿಯರ್ ಆತ್ಮಹತ್ಯೆ

ಗದಗ: ನಿರ್ಮಿತಿ ಕೇಂದ್ರದಲ್ಲಿ ಗುತ್ತಿಗೆ ಆಧಾರದಲ್ಲಿ ಯೋಜನಾ ಎಂಜಿನಿಯರ್ ಆಗಿದ್ದ ಶಂಕರಗೌಡ ಪಾಟೀಲ ಎಂಬುವರು ನಗರದ ಲಾಡ್ಜ್‌ನಲ್ಲಿ ಶುಕ್ರವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬಸ್ ನಿಲ್ದಾಣ ಸಮೀಪದ ಲಾಡ್ಜ್‌ನಲ್ಲಿ ಕೊಠಡಿ ಬಾಡಿಗೆ ಪಡೆದ ಶಂಕರಗೌಡ ಪಾಟೀಲ ಅವರು ಹಲವು ಗಂಟೆಗಳಾದರೂ ಹೊರಬರಲಿಲ್ಲ. ಸಂಶಯದಿಂದ ಲಾಡ್ಜ್ ಸಿಬ್ಬಂದಿ ಪರಿಶೀಲಿಸಿದಾಗ, ವಿಷಯ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ರಾಜ್ಯ ಉಗ್ರಾಣ ನಿಗಮದ ಮಾಜಿ ಅಧ್ಯಕ್ಷ ಎಚ್.ಟಿ. ಬಳಿಗಾರ



ಶಿಕಾರಿಪುರ (ಶಿವಮೊಗ್ಗ): ನಿವೃತ್ತ ಕೆಎಎಸ್ ಅಧಿಕಾರಿ, ರಾಜ್ಯ ಉಗ್ರಾಣ ನಿಗಮದ ಮಾಜಿ ಅಧ್ಯಕ್ಷ ಶಿಕಾರಿಪುರದ ಎಚ್.ಟಿ. ಬಳಿಗಾರ (62) ಗುರುವಾರ ಹೃದಯಾಘಾತ ದಿಂದ ಬೆಂಗಳೂರಿನಲ್ಲಿ ನಿಧನರಾದರು.

ಶಿವಮೊಗ್ಗ ಜಿಲ್ಲಾ ವಾಲ್ಮೀಕಿ ಸಂಘದ ಅಧ್ಯಕ್ಷರೂ ಆಗಿದ್ದ ಬಳಿಗಾರ, ಜಿಲ್ಲೆಯಲ್ಲಿ ವಾಲ್ಮೀಕಿ ನಾಯಕ ಸಮುದಾಯದ ಸಂಘಟನೆಯಲ್ಲೂ ತೊಡಗಿದ್ದರು. ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಬಳಿಗಾರ ನಂತರ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸ್ಪರ್ಧಿಸಿ ಎರಡು ಬಾರಿ ಸೋತಿದ್ದರು. ಈಚೆಗೆ ಬಿಜೆಪಿಯಲ್ಲಿ ಸಕ್ರಿಯರಾಗಿದ್ದರು.

ಇವರಿಗೆ ಇಬ್ಬರು ಪುತ್ರಿಯರು ಇದ್ದಾರೆ. ಶಿಕಾರಿಪುರ ತಾಲ್ಲೂಕಿನ ಮತ್ತಿಕೋಟೆಯಲ್ಲಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.

ಮಾಜಿ ಶಾಸಕಿ ಜಯವಾಣಿ



ಮದ್ದೂರು (ಮಂಡ್ಯ ಜಿಲ್ಲೆ): ಇಲ್ಲಿನ ಮಾಜಿ ಶಾಸಕಿ ಜಯವಾಣಿ ಮಂಚೇಗೌಡ (91) ವಯೋಸಹಜ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.

ಪತಿ, ಮಾಜಿ ಶಾಸಕ ಎಂ. ಮಂಚೇಗೌಡರ ಅಕಾಲಿಕ ನಿಧನದಿಂದ ತೆರವಾದ ಸ್ಥಾನಕ್ಕೆ 1984ರಲ್ಲಿ ನಡೆದಿದ್ದ ಉಪ ಚುನಾವಣೆಯಲ್ಲಿ ಅವರು ಆಯ್ಕೆಯಾಗಿದ್ದರು. ಎಂ.ಎಚ್. ಚನ್ನೇಗೌಡ ವಿದ್ಯಾಸಂಸ್ಥೆಯ ಅಧ್ಯಕ್ಷರಾಗಿದ್ದರು.

ಅವರಿಗೆ ಪುತ್ರರಾದ, ಮಾಜಿ ಶಾಸಕ ಡಾ.ಎಂ. ಮಹೇಶ್ ಚಂದ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ.ಸ್ವರೂಪ್ ಚಂದ್, ಪ್ರಫುಲ್ ಚಂದ್ ಹಾಗೂ ಮೂವರು ಪುತ್ರಿಯರಿದ್ದಾರೆ. ಅಂತ್ಯಕ್ರಿಯೆಯು ಪಟ್ಟಣದಲ್ಲಿ ಜನವರಿ 4ರಂದು 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾವು ಲೋಕೋದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ ನಮ್ಮ ಏಳಿಗೆಗಾಗಿ, ನಮ್ಮ ಬಾಳು ಸಫಲಗೊಳ್ಳುವುದಕ್ಕಾಗಿ, ನಮ್ಮ ಜೀವಸಂಸ್ಕಾರಕ್ಕಾಗಿ. -ಡಿ.ವಿ.ಜಿ.

ಧ್ವನಿವರ್ಧಕದಲ್ಲಿ ಮಾಹಿತಿ: ಅಂಗವಿಕಲರ ಒಳಗೊಳ್ಳುವಿಕೆಯತ್ತ ಮಹತ್ವದ ಹೆಜ್ಜೆ

ರಾಜ್ಯದಾದ್ಯಂತ ಇರುವ ಎಲ್ಲ ಪ್ರಮುಖ ಬಸ್ ನಿಲ್ದಾಣಗಳಲ್ಲಿ ಬಸ್ ಸಂಚಾರ ವಿವರಗಳ ಮಾಹಿತಿಯನ್ನು ಧ್ವನಿವರ್ಧಕದ ಮೂಲಕ ನೀಡುವ ವ್ಯವಸ್ಥೆಯನ್ನು ಎರಡು ವರ್ಷಗಳೊಳಗೆ ಅಳವಡಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಕರ್ನಾಟಕ ಹೈಕೋರ್ಟ್ ನಿರ್ದೇಶನ ನೀಡಿದೆ. ದೃಷ್ಟಿದೋಷ ಹೊಂದಿರುವವರು ಸಾರ್ವಜನಿಕ ಸಾರಿಗೆಯನ್ನು ಬಳಸುವಾಗ ಎದುರಿಸಬೇಕಾಗುವ ಸವಾಲುಗಳನ್ನು ಉಲ್ಲೇಖಿಸಿ ಬೆಂಗಳೂರು ನಿವಾಸಿಯೊಬ್ಬರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಈ ಮಹತ್ವದ ತೀರ್ಪು ನೀಡಿದೆ. ಬೆಂಗಳೂರು ಮಹಾನಗರ ಸಾರಿಗೆ ನಿಗಮವು (ಬಿಎಂಟಿಸಿ) ಕೆಲವು ಬಸ್ ನಿಲ್ದಾಣಗಳಲ್ಲಿ ಈ ವ್ಯವಸ್ಥೆಯನ್ನು ಅಳವಡಿಸಿತ್ತು. ಆದರೆ, ಅದನ್ನು ಕೈಬಿಡಲು ನಿರ್ಧರಿಸಿದ್ದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಕೆ ಆಗಿತ್ತು. ಬಸ್‌ಗಳನ್ನು ಗುರುತಿಸುವುದು, ಅವು ಸಂಚರಿಸುವ ಮಾರ್ಗಗಳನ್ನು ತಿಳಿದುಕೊಳ್ಳುವುದು, ಎಲ್ಲೆಲ್ಲಿ ನಿಲುಗಡೆ ಇದೆ ಎಂಬುದನ್ನು ತಿಳಿದುಕೊಳ್ಳುವುದು ದೃಷ್ಟಿದೋಷ ಹೊಂದಿರುವವರಿಗೆ ಬಹುದೊಡ್ಡ ಸವಾಲಿನ ಕೆಲಸ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಹೆಚ್ಚು ಸಮಾನತೆಯ, ಎಲ್ಲರನ್ನೂ ಒಳಗೊಳ್ಳುವ ಮತ್ತು ಎಲ್ಲರಿಗೂ ಸಾರ್ವಜನಿಕ ಸಾರಿಗೆ ಸೌಲಭ್ಯದ ದೊರಕುವಿಕೆಯನ್ನು ಸುಲಭಗೊಳಿಸುವ ದಿಸೆಯಲ್ಲಿ ಹೈಕೋರ್ಟ್ ಈಗ ನೀಡಿರುವ ತೀರ್ಪು ಮಹತ್ವದ್ದಾಗಿದೆ. ಅಂಗವಿಕಲರು ಸ್ವತಂತ್ರವಾಗಿ ಮತ್ತು ಸುರಕ್ಷಿತವಾಗಿ ಪ್ರಯಾಣಿಸಲು ಇದು ನೆರವಾಗಲಿದೆ.



ಸಮಾಜವನ್ನು ಎಲ್ಲರಿಗೂ ಅನುಕೂಲಕರ ಆಗಿಸುವುದಕ್ಕೆ ಸರ್ಕಾರವು ಸಾಂಕೇತಿಕ ಕ್ರಮಗಳನ್ನು ಮೀರಿ ಸಾಗಬೇಕಿದೆ

ಈ ತೀರ್ಪು ಹಲವರಿಗೆ ನಿರಾಳ ಉಂಟುಮಾಡುತ್ತದೆ. ಜೊತೆಗೆ, ಮಹತ್ವದ ಹಲವು ವಿಚಾರಗಳು ನಿರ್ಲಕ್ಷಿತವಾಗಿಯೇ ಉಳಿದಿವೆ ಎಂಬುದರತ್ತಲೂ ಬೆಳಕು ಚೆಲ್ಲಿದೆ. ಬೆಂಗಳೂರು ಮತ್ತು ಇತರೆಡೆಗಳಲ್ಲಿ ಎಲ್ಲರಿಗೂ ಅನುಕೂಲ ಕಲ್ಪಿಸುವಂತಹ ಮೂಲ ಸೌಕರ್ಯಗಳ ಕೊರತೆ ಇದೆ ಎಂಬುದರತ್ತಲೂ ಬೊಟ್ಟು ಮಾಡಿದೆ. ಮಾಹಿತಿ ತಂತ್ರಜ್ಞಾನ ನಗರಿ ಎಂಬ ಹಿರಿಮೆ ಹೊಂದಿರುವ ಬೆಂಗಳೂರಿನ ಸಾರ್ವಜನಿಕ ಸ್ಥಳಗಳು ಮತ್ತು ಸೇವೆಗಳು ಅಂಗವಿಕಲರಿಗೆ ಎಟಕುವಂತೆ ಇಲ್ಲ ಎಂಬ ಅಂಶವೂ ಈಗ ಬಯಲಾಗಿದೆ. ಪ್ರಮುಖ ಸ್ಥಳಗಳಲ್ಲಿ ಸ್ಪರ್ಶದ ಮೂಲಕ ವ್ಯತ್ಯಾಸ ಗುರುತಿಸಬಹುದಾದ ನೆಲಹಾಸು, ಇಳಿಜಾರು ದಾರಿ, ಧ್ವನಿವರ್ಧಕದ ಮೂಲಕ ಸಂದೇಶದಂತಹ ಅಗತ್ಯ ಸೇವೆಗಳು ಲಭ್ಯ ಇಲ್ಲ. ಈ ಕೊರತೆಯು ದೃಷ್ಟಿದೋಷ ಹೊಂದಿರುವವರು ಮತ್ತು ಕಾಲಿಲ್ಲದವರಿಗೆ ಭಾರಿ ಸಂಕಷ್ಟ ತಂದೊಡ್ಡುತ್ತದೆ.

ಸಾರ್ವಜನಿಕ ಸಂಚಾರ ವ್ಯವಸ್ಥೆಯಲ್ಲಿ ಅಂಗವಿಕಲರಿಗೆ ಅನುಕೂಲಕರ ಮೂಲಸೌಕರ್ಯಗಳ ಕೊರತೆಯು ಬಹಳ ಹಿಂದಿನಿಂದಲೂ ಬಹುದೊಡ್ಡ ಕಳವಳದ ವಿಚಾರವಾಗಿಯೇ ಮುಂದುವರಿದಿದೆ. ಅಂಗವಿಕಲರಿಗೆ ಅನುಕೂಲಕರ ಮೂಲಸೌಕರ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರವನ್ನು ಉತ್ತರದಾಯಿಯನ್ನಾಗಿ ಮಾಡುವಲ್ಲಿ ನ್ಯಾಯಾಲಯದ ಮಧ್ಯಪ್ರವೇಶ ಮಹತ್ವದ ಮೈಲಿಗಲ್ಲಾಗಿದೆ. ಈಗಿನ ತೀರ್ಪನ್ನು ಮೂಲಸೌಕರ್ಯವು ಅಂಗವಿಕಲರಿಗೂ ಅನುಕೂಲಕರವಾಗಿ ಇರುವಂತೆ ನೋಡಿಕೊಳ್ಳುವ ವಿಸ್ತೃತ ಪ್ರಯತ್ನದ ಒಂದು ಭಾಗ ಎಂದು ಪರಿಗಣಿಸಬೇಕು. ಈಗ ಇರುವ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮರುವಿನ್ಯಾಸ ಮಾಡಬೇಕಾದ ಅಗತ್ಯ ಇದೆ. ಹಾಗೆಯೇ ಮುಂದಿನ ದಿನಗಳಲ್ಲಿ ಯೋಜನೆ ರೂಪಿಸುವಾಗ, ಮೂಲಸೌಕರ್ಯಗಳು ಎಲ್ಲರಿಗೂ ಅನುಕೂಲಕರ ಆಗಿರುವಂತೆ ನೋಡಿಕೊಳ್ಳಬೇಕು. ನ್ಯಾಯಾಲಯವು ನೀಡಿರುವ ಎರಡು ವರ್ಷಗಳ ಗಡುವಿನಲ್ಲಿ ಈ ಎಲ್ಲ ಅಗತ್ಯಗಳನ್ನು ಪೂರೈಸಬಹುದಾಗಿದೆ. ಆದರೆ, ಅದಕ್ಕಾಗಿ ಗುರಿಕೇಂದ್ರಿತ ಅನುಷ್ಠಾನ, ಸಂಪನ್ಮೂಲ ಹಂಚಿಕೆ ಮತ್ತು ಅಂಗವಿಕಲರ ಸಂಘಟನೆಗಳ ಜೊತೆಗೆ ಸಮನ್ವಯ ಸಾಧಿಸಬೇಕಾಗಿದೆ. ಅನುಷ್ಠಾನಗೊಳಿಸುತ್ತಿರುವ ವ್ಯವಸ್ಥೆಯು ಅಂಗವಿಕಲರ ಅಗತ್ಯಗಳಿಗೆ ಪೂರಕವಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಲು ಅವರ ಜೊತೆಗೆ ಚರ್ಚೆ ನಡೆಸಬೇಕು. ಮೂಲಸೌಕರ್ಯ ಅಭಿವೃದ್ಧಿ ಎಂದರೆ ಧ್ವನಿವರ್ಧಕ ವ್ಯವಸ್ಥೆ ಅಳವಡಿಕೆಯಂತಹ ಕಾರ್ಯಗಳಿಗೆ ಸೀಮಿತ ಅಲ್ಲ. ನಗರ ಯೋಜನೆ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಎಲ್ಲ ಆಯಾಮಗಳೂ ಅಂಗವಿಕಲರಿಗೆ ಅನುಕೂಲಕರ ಆಗಿರುವಂತೆ ವ್ಯವಸ್ಥೆಯನ್ನೇ ಬದಲಿಸುವುದು ಇಲ್ಲಿ ಮುಖ್ಯವಾಗಿದೆ. ಸಮಾಜವನ್ನು ಎಲ್ಲರಿಗೂ ಅನುಕೂಲಕರ ಆಗಿಸುವುದಕ್ಕೆ ಸರ್ಕಾರವು ಸಾಂಕೇತಿಕ ಕ್ರಮಗಳನ್ನು ಮೀರಿ ಸಾಗಬೇಕಿದೆ. ಸುಸ್ಥಿರವಾದ ಮತ್ತು ದೀರ್ಘಾವಧಿ ಪರಿಹಾರಗಳನ್ನು ಒದಗಿಸಲು ಹೂಡಿಕೆ ಮಾಡಬೇಕಿದೆ. ಅಡೆತಡೆಗಳನ್ನು ನಿವಾರಿಸಿ, ಎಲ್ಲರ ಒಳಗೊಳ್ಳುವಿಕೆ ಮತ್ತು ಸಮಾನತೆಗೆ ಉತ್ತೇಜನ ನೀಡಬೇಕಿದೆ.

ದಿನದ ಟ್ವೀಟ್

ಹೀಗೂ ಆಗಬಹುದು!



ಬಸ್ ಪ್ರಯಾಣ ದರ ಏರಿಕೆಯಾಗಿದೆ. ಇದರಿಂದ, ಕೆಲವು ಪುರುಷರು ಬಸ್‌ನಲ್ಲಿ ಪ್ರಯಾಣಿಸುವುದನ್ನು ಕಡಿಮೆ ಮಾಡಬಹುದು ಮತ್ತು ಅವರಿಂದ ತೆರವಾಗುವ ಜಾಗವನ್ನು, ಉಚಿತವಾಗಿ ಪ್ರಯಾಣಿಸುವ ಇನ್ನಷ್ಟು ಹೆಚ್ಚು ಮಹಿಳೆಯರು ಬಳಸಿಕೊಳ್ಳುವಂತಹ ವಿಪರ್ಯಾಸದ ಸ್ಥಿತಿ ಸೃಷ್ಟಿಯಾಗಬಹುದು. ಸಾರಿಗೆ ನಿಗಮಗಳ ಸ್ಥಿತಿ ಶೋಚನೀಯ ಆಗಬಹುದು.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ತೊಡೆ ತಟ್ಟಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಸರ್ಕಾರ, ಬೆಲೆ ಏರಿಕೆ ಮಾಡುವುದರಲ್ಲಿ ನಿರತವಾಗಿದೆ. ವಿದ್ಯುತ್ ಬೆಲೆ, ಪೆಟ್ರೋಲ್, ಡೀಸೆಲ್ ಬೆಲೆ, ಹಾಲಿನ ಬೆಲೆ ಆಯ್ತು. ಈಗ ಬಸ್ ಟಿಕೆಟ್ ದರ ಏರಿಕೆ. ಮತ್ತೊಮ್ಮೆ ನಂದಿನಿ ಹಾಲಿನ ದರ ಏರಿಕೆಗೆ ಪ್ರಸ್ತಾವ ಇದೆ ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿದರೆ ಬೆಲೆ ಏರಿಕೆ, ಬಡವರ ವಿರೋಧಿ; ರಾಜ್ಯ ಸರ್ಕಾರ ಬೆಲೆ ಏರಿಕೆ ಮಾಡಿದರೆ ಸರ್ಕಾರ ನಡೆಸಲು ವರಮಾನ ಬೇಕೆಂದು ಕಾರಣ ಕೊಡುತ್ತಾರೆ. ಯಾವ ಸೀಮೆ ಹೋಲಿಕೆ ಇದು?...

ವರುಣ್ ರಾವ್, ಎಂಜಿನಿಯರ್

25 ವರ್ಷಗಳ ಹಿಂದೆ

ಮಂಗಳವಾರ, 4-1-2000

- **ಏಕರೂಪ ತೆರಿಗೆ: ಮೊದಲ ಪೆಟ್ಟು ರೇಷ್ಮೆ ರೀಲರುಗಳಿಗೆ**

ಬೆಂಗಳೂರು, ಜ. 3– ಮಾರಾಟ ತೆರಿಗೆಯನ್ನು ಏಕರೂಪಗೊಳಿಸುವ ಸರ್ಕಾರದ ನಿರ್ಧಾರದ ಮೊದಲ ಪ್ರಹಾರ ರೇಷ್ಮೆ ರೀಲರುಗಳ ಮೇಲೆ ಬಿದ್ದಿದೆ. ಬೆಂಗಳೂರು ರೇಷ್ಮೆ ವಿನಿಮಯ ಕೇಂದ್ರದಲ್ಲಿ ಇಂದು ರೇಷ್ಮೆ ರೀಲರುಗಳು ತಮ್ಮ ರೀಲ್‌ಗಳಿಗೆ ಸೂಕ್ತ ಖರೀದಿದಾರರು ಮತ್ತು ಬೆಲೆ ಸಿಗದೆ ಕಂಗಾಲಾಗಿ ಧರಣಿ ನಡೆಸಿದರು.

ಸಂಜೆ ಮೂರು ಗಂಟೆಗೆಲ್ಲಾ ವಹಿವಾಟು ಮುಗಿಸುವ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಇಂದು ಸಂಜೆ ಏಳು ಗಂಟೆಯವರೆಗೂ ಮಾರಾಟಕ್ಕಾಗಿ ಬೆಳೆಗಾರರು ಪರದಾಡಿದರು

- **ಏರಿದ ವಾಹನ ಕಳವು; ಪತ್ತೆ ಇಳಿಮುಖ**

ಬೆಂಗಳೂರು, ಜ. 3– ಬೆಂಗಳೂರು ನಗರದಲ್ಲಿ ದಿನೇ ದಿನೇ ವಾಹನ ಕಳವು ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದರೂ ಅವುಗಳನ್ನು ಪತ್ತೆ ಹಚ್ಚುವ ಕೆಲಸ ಮಾತ್ರ ಇಳಿಮುಖವಾಗುತ್ತಿದೆ. ನಗರದ ಅಪರಾಧ ದಾಖಲೆಗಳ ಪ್ರಕಾರವೇ ಹೇಳುವುದಾದರೆ, ನಗರದಲ್ಲಿ ಪ್ರತಿನಿತ್ಯ ಅಂದಾಜು ಆರು ವಾಹನಗಳು ಕಳವಾಗುತ್ತಿವೆ.

1999ರ ಜನವರಿ 1ರಿಂದ ಡಿಸೆಂಬರ್ 15ರವರೆಗೆ ನಗರದಲ್ಲಿ ದ್ವಿಚಕ್ರ ವಾಹನ, ಆಟೊರಿಕ್ಷಾ, ನಾಲ್ಕು ಚಕ್ರದ ವಾಹನ ಹಾಗೂ ಭಾರಿ ವಾಹನಗಳು ಸೇರಿದಂತೆ ಒಟ್ಟು 2,458 ವಾಹನಗಳು ಕಳವಾಗಿವೆ. ಆದರೆ, ಇದೇ ಅವಧಿಯಲ್ಲಿ ಪತ್ತೆಯಾದ ಪ್ರಕರಣಗಳ ಸಂಖ್ಯೆ ಮಾತ್ರ ಕೇವಲ 544. 1998ರಲ್ಲಿ 2,462 ವಾಹನ ಕಳವು ಪ್ರಕರಣಗಳು ಸಂಭವಿಸಿದ್ದು, ಅದರಲ್ಲಿ 760 ಪ್ರಕರಣಗಳು ಪತ್ತೆಯಾಗಿದ್ದವು.

50 ವರ್ಷಗಳ ಹಿಂದೆ

ಶನಿವಾರ, 4-1-1975

- **ಗಾಯಗೊಂಡಿದ್ದ ರೈಲ್ವೆ ಸಚಿವ ಮಿಶ್ರಾ ಸಾವು**

ಪಟನಾ, ಜ. 3– ಸಮಷ್ಟಿಪುರ ರೈಲು ನಿಲ್ದಾಣದಲ್ಲಿ ಬಾಂಬ್ ಸ್ಫೋಟದಿಂದ ಗಾಯಗೊಂಡಿದ್ದ ರೈಲ್ವೆ ಸಚಿವ ಎಲ್.ಎನ್. ಮಿಶ್ರಾ ಅವರು ಇಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ದಾನಪುರ ರೈಲ್ವೆ ಆಸ್ಪತ್ರೆಯಲ್ಲಿ ಮರಣ ಹೊಂದಿದರು.

ಇದಕ್ಕೆ ಮುನ್ನ ಅವರಿಗೆ ಹಲವಾರು ಗಂಟೆಗಳ ಕಾಲ ತುರ್ತು ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ನಿನ್ನೆ ಬಾಂಬ್ ಸ್ಫೋಟದಲ್ಲಿ ಗಾಯಗೊಂಡ ಕೂಡಲೇ ಅವರನ್ನು ವಿಶೇಷ ರೈಲಿನಲ್ಲಿ ದಾನಪುರ ರೈಲ್ವೆ ಆಸ್ಪತ್ರೆಗೆ ಮಧ್ಯ ರಾತ್ರಿಯ ವೇಳೆಗೆ ಸಾಗಿಸಲಾಯಿತು.

ಎಚ್ಚರಿಕೆ: 'ಸಾರ್ವಜನಿಕ ಸೇವೆಗಾಗಿ ನಾನು ಸತ್ತರೇನಂತೆ' ಎಂದು ಹೇಳಿ, ಪ್ರಾಣಾಪಾಯದ ಎಚ್ಚರಿಕೆಯನ್ನು ರೈಲ್ವೆ ಸಚಿವ ಲಲಿತ್ ನಾರಾಯಣ್ ಮಿಶ್ರಾ ನಿನ್ನೆ ಅಲಕ್ಷಿಸಿದ್ದರು.

ಸಮಷ್ಟಿಪುರಕ್ಕೆ ಹೋಗುವ ಮಾರ್ಗದಲ್ಲಿ ದರ್ಭಾಂಗ ವಿಮಾನ ನಿಲ್ದಾಣದಲ್ಲಿ ಇಳಿದಾಗ, ಪ್ರಾಣಾಪಾಯದ ಶಂಕೆ ಇರುವುದರಿಂದ ಸಮಷ್ಟಿಪುರಕ್ಕೆ ಹೋಗಬಾರದೆಂದು ಅವರ ಆಪ್ತರು ಕೇಳಿಕೊಂಡಿದ್ದರು.

- **ಕೊಲೆಯಾದ ಪ್ರಥಮ ಕೇಂದ್ರ ಸಚಿವ**

ನವದೆಹಲಿ, ಜ. 3– ಹತ್ಯೆಗೆ ತುತ್ತಾದ ಪ್ರಥಮ ಕೇಂದ್ರ ಸಚಿವ ಲಲಿತ್ ನಾರಾಯಣ್ ಮಿಶ್ರಾ ಅವರ ಸಾವಿಗೆ ದಿಗ್ಭ್ರಮೆಗೊಂಡ ರಾಷ್ಟ್ರ ಇಂದು ಶೋಕಿಸಿತು.

ರಾಷ್ಟ್ರಪತಿ ಫಕ್ರುದ್ದೀನ್ ಅಲಿ, ವಿವಿಧ ರಾಜಕೀಯ ಪಕ್ಷಗಳ ನಾಯಕರು ದಿಗ್ಭ್ರಮೆ ವ್ಯಕ್ತಪಡಿಸಿ, ಹಿಂಸಾಕೃತ್ಯವನ್ನು ಖಂಡಿಸಿದ್ದಾರೆ.

ಸತ್ಯದ ಮಿಂಚು ದರ್ಶನ ಮಾಡಿಸಿದ ಹೆಚ್ಚಿನ ಪುಸ್ತಕಗಳು ಕೆಲವು ನಿಜ ಕತೆಗಳನ್ನು ಹೇಳಿವೆ

ಪುಸ್ತಕಗಳು ಉದ್ದೀಪಿಸಿದ ಆಶಾಭಾವ



ವಿಶ್ಲೇಷಣೆ

ಯೋಗೇಂದ್ರ ಯಾದವ್

ನಮ್ಮ ಕಾಲದಲ್ಲಿ ಸತ್ಯವು ನಿರಾಶ್ರಿತ. ಭೂಮಿಯ ಮೇಲಿರುವ ತನ್ನ ಮನೆಯಿಂದ ಹೊರದಬ್ಬಲ್ಪಟ್ಟು, ದೇಶಭ್ರಷ್ಟವಾಗಿ, ಆಶ್ರಯಕ್ಕಾಗಿ ಅಲೆದಾಡುತ್ತಿದೆ. ನಮ್ಮ ಹಳ್ಳಿಯ ದೂರದ ಈ ನೆಂಟನಿಂದ ತೀರಾ ಮುಜುಗರಕ್ಕೆ ಒಳಗಾಗಿರುವ ನಾವು, ಡ್ರಾಯಿಂಗ್ ರೂಂನ ಸಂಭಾಷಣೆಗಳಿಂದಲೂ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಂದಲೂ ವಿನಯಪೂರ್ವಕವಾಗಿ ದೂರಕ್ಕೆ ತಳ್ಳಿದ್ದೇವೆ. ಬೀದಿಯಲ್ಲಿರುವ ಭಿಕ್ಷುಕನಂತೆ ಇದು ಅಗೋಚರ.

2024ರಲ್ಲಿ, ಸತ್ಯವು ಕೆಲವು ಪುಸ್ತಕಗಳಲ್ಲಿ ತಾತ್ಕಾಲಿಕ ಆಶ್ರಯ ಪಡೆದುಕೊಂಡಿತ್ತು. ಇವು ಸಿದ್ಧಾಂತಗಳ ಹಲವು ಪದರಗಳಲ್ಲಿ ಸುತ್ತುವರಿದಿರುವ, ಸತ್ಯವನ್ನು ಗುರುತಿಸಲಾಗದ ಶೈಕ್ಷಣಿಕ ಗ್ರಂಥಗಳಲ್ಲ. ಈ ವರ್ಷ ಸತ್ಯದ ಮಿಂಚು ದರ್ಶನ ಮಾಡಿಸಿದ ಹೆಚ್ಚಿನ ಪುಸ್ತಕಗಳು ಕೆಲವು ನಿಜ ಕತೆಗಳನ್ನು ಹೇಳಿವೆ. ಈ ಕತೆಗಳಿಂದ ಪಾಠಗಳನ್ನು ಕಲಿಯಲು ಈ ಪುಸ್ತಕಗಳು ನಮಗೆ ನೆರವಾಗುತ್ತವೆ. ಭಾರತದ ಕುರಿತು ಭಾರತದಲ್ಲಿ 2024ರಲ್ಲಿ ಪ್ರಕಟವಾದ ಕೆಲವು ಪುಸ್ತಕಗಳ ಕಡೆಗೆ ಗಮನಹರಿಸೋಣ.

ವರ್ಷದ ಅತ್ಯಂತ ನೇರ ಮತ್ತು ಸ್ಪಷ್ಟ ಕಥನವನ್ನು ಕಟ್ಟಿ ಕೊಟ್ಟಿದ್ದು ರಾಜ್‌ದೀಪ್ ಸರ್ದೇಸಾಯಿ ಅವರ '2024: ದಿ ಎಲೆಕ್ಷನ್ ದಟ್ ಸರ್‌ಪ್ರೈಸ್ಡ್ ಇಂಡಿಯಾ' (ಹಾರ್ಪರ್ ಕಾಲಿನ್ಸ್). ವಾಸ್ತವದ ಜೊತೆ ಸಂಬಂಧ ಉಳಿಸಿಕೊಂಡಿರುವ ಹಿರಿಯ ಸಂಪಾದಕ ಮತ್ತು ಸುದ್ದಿವಾಹಿನಿ ತಾರೆಯಾಗಿರುವ ಇವರು ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳಲು ಎಂದೂ ಹಿಂಜರಿದವರಲ್ಲ. ಈ ಬಾರಿಯ ಅಸಾಧಾರಣ ಚುನಾವಣೆಯನ್ನು ನೀವು ನಿಕಟವಾಗಿ ಗಮನಿಸದೇ ಇದ್ದರೆ, ಈ ಪುಸ್ತಕ ಓದುವ ಮೂಲಕ ಎಲ್ಲವನ್ನೂ ಮರುಸೃಷ್ಟಿಸಿಕೊಳ್ಳಬಹುದು. ಚುನಾವಣೆ ಮೇಲೆ ನಿಗಾ ಇರಿಸಿದ್ದರೂ 'ಮೀಡಿಯಾ ಟೇಕ್‌ಓವರ್' ಎಂಬ ಅಧ್ಯಾಯವನ್ನಂತೂ ಓದಲೇಬೇಕು. ಇದನ್ನೇ ಒಂದು ಪೂರ್ಣ ಕೃತಿ ಎಂದೂ ಪರಿಗಣಿಸಬಹುದು.

ರಾಹುಲ್ ಭಾಟಿಯಾ ಅವರ 'ದಿ ಐಡೆಂಟಿಟಿ ಪ್ರಾಜೆಕ್ಟ್: ದಿ ಅನ್‌ಮೇಕಿಂಗ್ ಆಫ್ ಎ ಡೆಮಾಕ್ರಸಿ' (ಕಾಂಟೆಕ್ಸ್ಟ್/ವೆಸ್ಟ್‌ಲ್ಯಾಂಡ್) ಭಾರತದ ಪ್ರಜಾಪ್ರಭುತ್ವವನ್ನು ಹಿಂದಿನ ಒಂದು ದಶಕದಲ್ಲಿ ಹೇಗೆ ಕೆಡವಲಾಯಿತು ಎಂಬ ಕಥನವನ್ನು ಹೇಳುತ್ತದೆ. ಈಶಾನ್ಯ ದೆಹಲಿಯಲ್ಲಿ 2020ರಲ್ಲಿ ನಡೆದ ಗಲಭೆಯ ಸಂತ್ರಸ್ತ ಮತ್ತು ಸಾಕ್ಷಿಯಾದ ನಿಸಾರ್‌ನ ವಿಚಾರಣೆಗಳು ಹಾಗೂ ಸಂಕಟಗಳನ್ನು ಇಲ್ಲಿ ಬಿಡಿಸಿಡಲಾಗಿದೆ. ಮನಸೂರೆಗೊಳ್ಳುವ ಈ ಪುಸ್ತಕವು ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ), ಸಿಎಎ ವಿರೋಧಿ ಪ್ರತಿಭಟನೆಗಳು ಮತ್ತು ದೆಹಲಿ ಗಲಭೆಯ ಕತೆ ಹೇಳುತ್ತದೆ. ಜೊತೆಗೆ ಆರ್‌ಎಸ್‌ಎಸ್‌ನ ಉತ್ಕರ್ಷದತ್ತಲೂ ಬೆಳಕು ಚೆಲ್ಲುತ್ತದೆ. ಭಾಟಿಯಾ ಅವರ ಕತೆ ಕೊನೆಯಾಗುವಲ್ಲಿಂದ ನೇಹಾ ದೀಕ್ಷಿತ್ ಅವರ 'ದಿ ಮೆನಿ ಲೈವ್ಸ್ ಆಫ್ ಸೈದಾ ಎಕ್ಸ್: ದಿ ಸ್ಟೋರಿ ಆಫ್ ಅನ್‌ನೋನ್ ಇಂಡಿಯನ್' (ಜಗರ್‌ನಾಟ್) ಆರಂಭವಾಗುತ್ತದೆ. ಎರಡು ಕರಾಳ ಪ್ರಕರಣಗಳ ನಡುವಣ ಮೂರು ದಶಕಗಳ ಭಾರತದ ಕತೆಯನ್ನು ಈ ಪುಸ್ತಕ ಹೇಳುತ್ತದೆ. ಬಾಬರಿ ಮಸೀದಿ ಧ್ವಂಸ ಮತ್ತು ದೆಹಲಿಯಲ್ಲಿ 2020ರಲ್ಲಿ ನಡೆದ ಗಲಭೆ ಆ ಎರಡು ಪ್ರಕರಣಗಳು. ಸೈದಾ ಎಂಬ ಮಹಿಳೆಯ ದೃಷ್ಟಿಕೋನದಿಂದ ಎಲ್ಲ ಬೆಳವಣಿಗೆಗಳನ್ನೂ ನೋಡಲಾಗಿದೆ. ಕಾರ್ಮಿಕ ವರ್ಗದ ಈ ಮಹಿಳೆ ಎರಡೂ ಕರಾಳ ಘಟನೆಗಳ ಸಂತ್ರಸ್ತೆ. ಅಸಾಧಾರಣ ಸಹಾನುಭೂತಿ ಮತ್ತು ಬೆರಗುಗೊಳಿಸುವ ವಿವರಗಳಿರುವ ಈ ಬರಹವು ನಮ್ಮ ಕಾಲದ ತಲಸ್ಪರ್ಶಿ ಅಧ್ಯಯನವಾಗಿದೆ.

ಹಿಲಾಲ್ ಅಹ್ಮದ್ ಅವರ 'ಬ್ರೀಫ್ ಹಿಸ್ಟರಿ ಆಫ್ ದಿ ಪ್ರೆಸೆಂಟ್: ಮುಸ್ಲಿಮ್ಸ್ ಇನ್ ನ್ಯೂ ಇಂಡಿಯಾ' (ಪೆಂಗ್ವಿನ್/ವಿಕಿಂಗ್) ಕೃತಿಯು ಈ ಹಿಂದಿನ ಎರಡು ಕೃತಿಗಳಷ್ಟು ವಿಶದವಲ್ಲ. ಆದರೆ, 'ನವ ಭಾರತ'ದಲ್ಲಿ ಮುಸ್ಲಿಮರ ರಾಜಕೀಯ ಇಕ್ಕಟ್ಟು ಮತ್ತು ಭವಿಷ್ಯದ ಸಾಧ್ಯಾಸಾಧ್ಯತೆಗಳ ಕುರಿತು ಹೆಚ್ಚು ಸ್ಪಷ್ಟವಾದ ಚಿತ್ರಣವನ್ನು ನಿರ್ಭಾವುಕ ಗದ್ಯದಲ್ಲಿ ಬಿಡಿಸಿಡುತ್ತದೆ.

'ಥ್ಯಾಂಕ್ ಯೂ, ಗಾಂಧಿ' (ಪೆಂಗ್ವಿನ್/ವಿಕಿಂಗ್) ಒಂದಕ್ಕಿಂತ ಹೆಚ್ಚು ಕಾರಣಗಳಿಗಾಗಿ ವಿಶಿಷ್ಟವಾದ ಪುಸ್ತಕ. ಲೇಖಕ ಕೃಷ್ಣ ಕುಮಾರ್ ಸಾಮಾನ್ಯವಾಗಿ ಸಮಕಾಲೀನ ರಾಜಕಾರಣದ ಕುರಿತು ಟೀಕೆ–ಟಿಪ್ಪಣಿಗಳನ್ನು ಮಾಡುವುದಿಲ್ಲ. ಆದರೆ, ಈ ಪುಸ್ತಕವನ್ನು ವರ್ಗೀಕರಿಸುವುದು ಕಷ್ಟಸಾಧ್ಯ. ಮೃತಪಟ್ಟ ಗೆಳೆಯನೊಬ್ಬನ ಅಪೂರ್ಣ ಹಸ್ತಪ್ರತಿಯ ಕಾಲ್ಪನಿಕ ಕತೆಯಲ್ಲಿ ಭಾರತವು ತನ್ನ ಮೂಲಭೂತ ಚಿಂತನೆಗಳಿಂದ ಎಷ್ಟು ದೂರ ಸಾಗಿದೆ ಎಂಬುದರ ಕುರಿತ ವಿಶ್ಲೇಷಣೆ ಇದೆ. ಆಶಾವಾದಕ್ಕೂ ಕಾರಣಗಳಿವೆ ಎಂಬುದೂ ಕೃತಿಯಲ್ಲಿ ಇದೆ. ಗಾಂಧಿ ಇಲ್ಲಿ ಮಸೂರ, ಮಧ್ಯಸ್ಥ ಮತ್ತು ಪ್ರಧಾನ ರೂಪಕ.

ಇತರ ಹಲವು ಪುಸ್ತಕಗಳು ವಿವಿಧ ರೀತಿಯಲ್ಲಿ ಆಶಾಭಾವ ಮೂಡಿಸಿವೆ. ಪ್ರಸಿದ್ಧ ಸಮಾಜಶಾಸ್ತ್ರಜ್ಞ ಮತ್ತು ತುರ್ತು ಪರಿಸ್ಥಿತಿ ವಿರೋಧಿ ಕಾರ್ಯಕರ್ತ ಆನಂದ್ ಕುಮಾರ್ ಅವರು ಭಾರತದ ಪಯಣದಲ್ಲಿನ ಕತ್ತಲ ಅವಧಿ ಮತ್ತು ಅದರಿಂದ ಹೇಗೆ ಹೊರಬರಲಾಯಿತು ಎಂಬುದರ ಸಾರವನ್ನು ಕಟ್ಟಿಕೊಟ್ಟಿದ್ದಾರೆ. ತುರ್ತುಪರಿಸ್ಥಿತಿಯ ಪ್ರಸಿದ್ಧ ಇತಿಹಾಸಗಳಲ್ಲಿ ಈತನಕ ಎಲ್ಲಿಯೂ ಬಳಕೆಯಾಗದ ಹಿಂದಿ ಮೂಲಗಳಿಂದ ಮಾಹಿತಿ ಪಡೆದು 'ಎಮರ್ಜೆನ್ಸಿ ರಾಜ್ ಕಿ ಅಂತರಕತಾ' (ಸೇತು ಪ್ರಕಾಶನ) ಕೃತಿಯನ್ನು ರೂಪಿಸಲಾಗಿದೆ. ವಿನೋಬಾ ಭಾವೆ ಅವರು ತುರ್ತುಪರಿಸ್ಥಿತಿಯನ್ನು ಬೆಂಬಲಿಸಿದ್ದರು ಮತ್ತು ಜಯಪ್ರಕಾಶ ನಾರಾಯಣ ಅವರು ಆರ್‌ಎಸ್‌ಎಸ್ ಮತ್ತು ಜನಸಂಘವನ್ನು ಒಪ್ಪಿಕೊಂಡಿದ್ದರು ಎಂಬ ಜನಪ್ರಿಯ ಕಥನವನ್ನು ಇಲ್ಲಿ ಪ್ರಶ್ನಿಸಲಾಗಿದೆ ಎಂಬುದು ಬಹಳ ಮುಖ್ಯವಾಗಿದೆ.

'ಜೆಂಟಲ್ ರೆಸಿಸ್ಟೆನ್ಸ್: ದಿ ಆಟೊಬಯಾಗ್ರಫಿ ಆಫ್ ಚಂಡಿ ಪ್ರಸಾದ್ ಭಟ್' (ಪರ್ಮನೆಂಟ್ ಬ್ಲ್ಯಾಕ್) ಹಿಂದಿಯಿಂದ ಅತ್ಯುನ್ನತ ಗುಣಮಟ್ಟದಲ್ಲಿ ಅನುವಾದಗೊಂಡಿರುವ ಕೃತಿ. ಸರ್ವೋದಯ ಕಾರ್ಯಕರ್ತ, ಪರಿಸರ ಹೋರಾಟಗಾರ ಮತ್ತು ಚಿಪ್ಕೊ ಚಳವಳಿಯ ಸ್ಥಾಪಕನ ಬದುಕಿನ ಚಿತ್ರಣದ ಮೂಲಕ, ಹಿಂದೆ ಇದ್ದ 'ಆಂದೋಲನಜೀವಿ'ಗಳ ಸರಳ ಮತ್ತು ಕಠಿಣ ಬದುಕಿನ ಕುರಿತ ಒಳನೋಟಗಳನ್ನು ನೀಡಲಾಗಿದೆ.



ಯುವ ರಾಜಕೀಯ ಚಿಂತಕಿ ವನ್ಯಾ ವೈದೇಹಿ ಭಾರ್ಗವ್ ಅವರು ತಮ್ಮ ಶೈಕ್ಷಣಿಕ ಸಂಶೋಧನೆಯನ್ನು 'ಇನ್ ಬೀಯಿಂಗ್ ಹಿಂದೂ, ಬೀಯಿಂಗ್ ಇಂಡಿಯನ್: ಲಾಲಾ ಲಜಪತ್ ರಾಯ್ಸ್ ಐಡಿಯಾಸ್ ಆಫ್ ನೇಷನ್‌ಹುಡ್' (ಪೆಂಗ್ವಿನ್/ವಿಕಿಂಗ್) ಎಂಬ ಸರಳ ಪುಸ್ತಕವಾಗಿ ಪರಿವರ್ತಿಸಿದ್ದಾರೆ. ಇಂದಿನ ಹಿಂದೂ ರಾಷ್ಟ್ರೀಯವಾದದ ಪೂರ್ವಜ ಎಂದು ವ್ಯಾಪಕವಾಗಿ ನಂಬಲಾಗಿರುವ ನಾಯಕ ಲಜಪತ್ ರಾಯ್ ಅವರನ್ನು ಭಿನ್ನವಾಗಿ ನೋಡುವ ಪ್ರಯತ್ನ ಇಲ್ಲಿದೆ. ಕಷ್ಟಕರವಾದ ಪ್ರಶ್ನೆಯೊಂದನ್ನು ಕೇಳಿಕೊಳ್ಳುವಂತೆಯೂ ಈ ಕೃತಿಯು ನಮ್ಮನ್ನು ಪ್ರೇರೇಪಿಸುತ್ತದೆ: 'ನಾವು ಅನುಸರಿಸುತ್ತಿರುವ ಜಾತ್ಯತೀತ ರಾಜಕಾರಣವು ಹಿಂದೂ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಗಾಂಧೀಜಿಯಂಥವರ ಪರಂಪರೆ ಎಂದು ಹೇಳಲಾಗುತ್ತಿದೆ. ಆದರೆ, ಹಿಂದೂ ಸಮುದಾಯದ ವಕ್ತಾರರೇ ಆಗಿದ್ದ ಲಜಪತ್ ರಾಯ್ ಅವರು ಮುಸ್ಲಿಂ ವಿರೋಧಿ ಕೋಮುವಾದಕ್ಕೆ ಅವಕಾಶವನ್ನೇ ಕೊಟ್ಟಿರಲಿಲ್ಲ. ಹೀಗಾಗಿ, ಜಾತ್ಯತೀತ ಪರಂಪರೆಯು ಲಜಪತ್ ರಾಯ್ ಅವರದ್ದೂ ಅಲ್ಲವೇ?'

ನಿರ್ಮಲ್ ವರ್ಮಾ ಅವರ ಆಯ್ದ ಪ್ರಬಂಧಗಳ ನಾಲ್ಕು ಸಂಕಲನಗಳು ಮರುಮುದ್ರಣಗೊಂಡಿವೆ. ಶತಾಬ್ದಿ ಕೆ ಢಲ್ತೆ ವರ್ಷೊಂ ಮೆ ಮತ್ತು ದೂಸ್ರಾ ಶಬ್ದೋಂ ಮೆ ಹಾಗೂ ಸಂದರ್ಶನಗಳಾದ ಸಂಸಾರ್ ಮೆ ನಿರ್ಮಲ್ ವರ್ಮಾ: ಪೂರ್ವಾರ್ಧ್ ಮತ್ತು ಉತ್ತರಾರ್ಧ್ (ಸಂಪಾದನೆ: ಗಗನ್ ಗಿಲ್ ಮತ್ತು ಪ್ರಕಟಣೆ: ರಾಜ್‌ಕಮಲ್ ಪ್ರಕಾಶನ) ಕುರಿತು ನಾವೆಲ್ಲರೂ ಸಾಮೂಹಿಕವಾಗಿ ಚಿಂತನೆ ನಡೆಸಬೇಕಾಗಿದೆ. ವರ್ಮಾ ಅವರ ಸೃಜನಶೀಲ ಸಾಹಿತ್ಯಕ್ಕೆ ಅರ್ಹ ಮನ್ನಣೆ ಸಿಕ್ಕಿದೆ. ಆದರೆ ಇತಿಹಾಸ, ಸ್ಮರಣೆ, ಸಂಸ್ಕೃತಿ, ಕಲೆ ಮತ್ತು ರಾಷ್ಟ್ರೀಯತೆ ಕುರಿತು ಅವರು ವ್ಯಾಪಕವಾಗಿ ಬರೆದಿರುವ ಪ್ರಬಂಧಗಳನ್ನು 'ಬಲಪಂಥೀಯ' ಎಂಬ ಹಣೆಪಟ್ಟಿ ಕಟ್ಟಿ ನಿರ್ಲಕ್ಷಿಸಲಾಗಿದೆ. ಅವರ ಪ್ರಬಂಧಗಳನ್ನು ಹೆಚ್ಚು ಎಚ್ಚರದಿಂದ ಓದಿದರೆ, ಅದರಲ್ಲೂ ವಿಶೇಷವಾಗಿ 1970ರ ದಶಕ ಮತ್ತು 1980ನೇ ದಶಕದ ಆರಂಭಿಕ ವರ್ಷಗಳ ಬರಹಗಳು, ಆಧುನಿಕ ಮತ್ತು ಜಾತ್ಯತೀತ ಮಾತ್ರವಲ್ಲ ಹಿಂದುತ್ವ ರಾಜಕಾರಣವನ್ನೂ ಭಾರತೀಯ ದೃಷ್ಟಿಕೋನದಿಂದ ಪ್ರಶ್ನಿಸಲು ಹೊಸದೊಂದು ಮಾರ್ಗ ತೆರೆದುಕೊಳ್ಳುತ್ತದೆ.

ಮುಗಿಸುವ ಮುನ್ನ: ಇದು ಮೇಲೆ ಹೇಳಿರುವ ಪುಸ್ತಕಗಳ ಯಾದಿಗೆ ಹೊಂದುವುದಿಲ್ಲ. ಆದರೆ, ಸೋಪನ್ ಜೋಶಿ ಅವರ 'ಮ್ಯಾಂಗಿಫೆರಾ ಇಂಡಿಕಾ: ಎ ಬಯೊಗ್ರಫಿ ಆಫ್ ದಿ ಮ್ಯಾಂಗೊ' ಪುಸ್ತಕವನ್ನು ಉಲ್ಲೇಖಿಸದೆ ಪುಸ್ತಕಗಳ ಪಟ್ಟಿಯನ್ನು ಪೂರ್ಣಗೊಳಿಸಲಾಗದು. ಮಾವಿನ ಹಣ್ಣುಗಳ ಬಗ್ಗೆ ನನಗೆ ಇರುವ ಗೀಳು ಕಂಡು ಹೆಂಡತಿ ಮತ್ತು ಮಕ್ಕಳು ನನಗೆ ಉಡುಗೊರೆಯಾಗಿ ಕೊಟ್ಟ ಪುಸ್ತಕ ಇದು. ಹಲವಾರು ಪುಟ್ಟ ಕತೆಗಳಿರುವ, ಸಂಶೋಧನೆ ಮತ್ತು ವಿವೇಕಪೂರ್ಣವಾದ, ರಸವತ್ತಾದ ಕೃತಿ ಇದು. ನಮ್ಮ ಕಾಲದ ಯಾವುದೇ ಕಹಿ ನೆನಪುಗಳನ್ನು ಅಳಿಸಿ ಹಾಕುವಂತಹ ಸವಿ ಈ ಪುಸ್ತಕದಲ್ಲಿ ಇದೆ.

ಚುರುಮುರಿ



ಬೀಟಾ ಜನರೇಶನ್

• ತುರುವೇಕೆರೆ ಪ್ರಸಾದ್

'ಲೇಯ್! ಇನ್ 14 ವರ್ಷ ಬೀಟಾ ಜನರೇಶನ್ ಶುರುಹಚ್ಕಂಡೈತಂತೆ ಕಣ್ರಲಾ' ಎಂದ ಗುದ್ಲಿಂಗ. 'ಏನು ಇದ್ರ ವಿಶೇಷ' ಕೇಳಿದ ಮಾಲಿಂಗ.

'ಈಗ ಉಟ್ಟೋ ಮಕ್ಳು ಮರಿ ಎಲ್ಲಾ ಬಾಳಾ ಬುದ್ದಿವಂತ್ರು ಇರ್ತಾರಂತೆ ಕಣ್ರಲಾ. ಎಲ್ಲಕ್ಕೂ ಹೊಸ ಹೊಸ ತಂತ್ರಜ್ಞಾನ, ಯಂತ್ರ ಬತ್ತವಂತೆ'.

'ಇನ್ನೂ ಯಾವುದ್ಲಾ ಬಾಕಿ ಐತೆ! ಎಐಯಿಂದ ಉಪೇಂದ್ರಂದು ಯುಐ ತಂಕ ಎಲ್ಲಾ ಬಂದಾಗದಲ್ಲ'.

'ಅಂಗಲ್ಲ, ಅದ್ನೂ ಮೀರ್ಸಿದ್ದು. ಈಗ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಬಂದೈತಲ್ವಾ? ಅದ್ನೂ ಎರವಲು, ಸಾಲ ಕೇಳೋದು. ಬುದ್ದಿ ಇಲ್ದೆ ಇರೋರ ಎಐನೇ ಕದಿಯೋದು, ಈ ತರ'.

'ಅಮ್ಯಾಕೆ ಬೇರೆಯೋರ ಮನಸ್ನಾಗೆ ಏನೈತೆ ಅಂತ ತಿಳ್ಕೊಳೋ ಯಂತ್ರ ಕಂಡುಹಿಡ್ದು ಗಂಡ-ಹೆಂಡ್ತಿ, ರಾಜಕೀಯದೋರು ಕಾಲ್ ಕೆರ್ಕಂಡು ಜಗಳ ಶುರು ಹಚ್ಕಳಾದು'.

'ಈಗ ನಾವು ಯೋಳಿದ್ದನ್ನ ಯಂತ್ರಗಳು ಮಾಡ್ತವೆ. ಮುಂದೆ ಯಂತ್ರಗಳು ಯೋಳಿದ್ದನ್ನ ಮನುಷ್ರು ಮಾಡ್ಬೇಕಾಯ್ತದೋ ಎಂಗೋ?'

'ಬೀಟಾನೇ ಇಂಗೆ ಅಂದ್ರೆ ಗಾಮಾ ಜೆನರೇಶನ್ ಎಂಗಿರ್ತದೋ? ಆ ಕಾಲದ ಉಡುಗ್ರು ಸಂಸಾರದಾಗೆ ಎಂಗ್ ಏಗ್ತಾವೋ?'

'ಮದ್ವೆಗೂ ಇದಕ್ಕೂ ಏನ್ಲಾ ಸಂಬಂಧ?'

'ನೋಡ್ಲಾ, ನಮ್ಮಲ್ಲಿ ಹೆಂಡತಿ ಆಗೋಳ್ಗೆ ವಯಸ್ಸು ಕಮ್ಮಿ ಇರ್ತದೆ. ಇನ್ನು ಆಮೇಲೆ ಅವಳ ವಯಸ್ಸು ಎಲ್ಲೋ ಒಂದ್ಕಡೆ ನಿಂತೋಯ್ತದೆ. ಅಂಗಾಗಿ ವುಡುಗ್ರು ಗಾಮಾಕ್ ಓದ್ರೂ ಹುಡುಗೀರು ಅಲ್ಫಾ, ಡೆಲ್ಟಾದಾಗೇ ಇರ್ತಾರೆ. ಹೊಂದಾಣಿಕೆ ಇಲ್ದೆ ಗಾಮಾ ಓಗಿ ಗುಮ್ಮ ಜನರೇಶನ್ ಆಯ್ತದೆ'.

'ಇದೆಲ್ಲಾ ಆಗದಲ್ಲ, ಓಗದಲ್ಲ, ನಮ್ ಪ್ರಭುತ್ವಗಳು ಮನಸ್ಸು ಮಾಡ್ದೆ ಎಂಗ್ಲಾ ಆಯ್ತದೆ?'

'ಅವರ್ಯಾಕ್ಲಾ ತಡೀತಾರೆ?'

'ಅಯ್ಯೋ, ಸೋತೋರೆಲ್ಲಾ ವೋಟು ಯಂತ್ರನೇ ಬ್ಯಾಡ, ವಾಪಸ್ ಬ್ಯಾಲೆಟ್ ಪೇಪರ್ನಾಗೇ ಎಲೆಕ್ಷನ್ ಮಾಡಿ ಅಂತ ಎಕ್ಸ್ ಜನರೇಶನ್ನಲ್ಲೇ ಚಕ್ಕಳಮಕ್ಕಳ ಆಕ್ಕಂಡು ಕುಂತವ್ರೆ. ಇನ್ನು ಬೀಟಾ, ಗಾಮಾ ಎಲ್ಲಾ ಎಂಗ್ ಬತ್ತವೆ?' ಎಂದ ಪರ್ಮೇಶಿ. ಹೌದಲ್ವಾ ಎಂದು ಎಲ್ಲರೂ ತಲೆಯಾಡಿಸಿ ಹಳ್ಕಿರಿದರು.

ಸಂಗತ

'ಶಾಸನ' ಮೀರಿಸಿದ ಶ್ವಾನ ಪ್ರೀತಿ

ನಾಯಿ ಸಾಕುವುದು ಈಗ, ಭಾವ ಬೆಸುಗೆಯ ಭಾಗವೇ ಆಗಿದೆ

• ರಾಘವೇಂದ್ರ ಕೆ. ತೊಗರ್ಸಿ

ನಿಯತ್ತಿಗೆ ಅನ್ವರ್ಥವಾಗಿ ನಾಯಿಯನ್ನು ಉಲ್ಲೇಖಿಸುವುದು ಸಾಮಾನ್ಯ. ಮನುಷ್ಯನಿಗೆ ಅತ್ಯಂತ ನಂಬುಗೆಯ ಪ್ರಾಣಿ ನಾಯಿ ಎನ್ನುವುದನ್ನೇ ಇಲ್ಲಿನ 'ನಿಯತ್ತು' ಧ್ವನಿಸುತ್ತದೆ. ಮನುಷ್ಯ ತನ್ನ ಹೊಲ–ಮನೆ ರಕ್ಷಣೆ, ಬೇಟೆಯ ಸಹಾಯಕ್ಕೆ ನಾಯಿಯನ್ನು ಸಾಕುತ್ತಿದ್ದುದು ಇತಿಹಾಸ. ಆದರೆ ಈಗ ಅನುಕೂಲಕ್ಕಿಂತ ಖುಷಿ ಮತ್ತು ನೆಮ್ಮದಿಗಾಗಿ ಸಾಕುತ್ತಿದ್ದಾನೆ. ಆಧುನಿಕ ಜೀವನಶೈಲಿಯಲ್ಲಿ 'ಪೆಟ್' ಪೋಷಣೆ ಹವ್ಯಾಸವೂ ಹೌದು. ಒತ್ತಡದ ಜೀವನದಲ್ಲಿ ಆತ್ಮತೃಪ್ತಿಗೂ ಅದು ಕಾರಣವಾಗಿದೆ. ಮನುಷ್ಯ ತನ್ನ ಸಾಂಗತ್ಯಕ್ಕಾಗಿ ಸಹಜೀವಿಯಂತೆ, ಕುಟುಂಬ ಸದಸ್ಯನ ಸ್ಥಾನವನ್ನು ಕೊಟ್ಟಿದ್ದಾನೆ. ಭಾವ ಬೆಸುಗೆಯ ಬದುಕಿನ ಭಾಗ ಎನ್ನುವಂತೆ ನಾಯಿ ಸಾಕುವುದು ಬದಲಾದ ಜೀವನಕ್ರಮದ ಒಂದು ಭಾಗವೇ ಆಗಿದೆ.

ತಮ್ಮ ಖುಷಿಗಾಗಿ ಸಾಕುಪ್ರಾಣಿ ನಾಯಿಗೆ ಒಡವೆ–ವಸ್ತ್ರದ ಅಲಂಕಾರವನ್ನು ಮಾಡಿ, ಫೋಟೊ ತೆಗೆದು ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸುವವರಿದ್ದಾರೆ. ಪ್ರೀತಿಯ ನಾಯಿಯ ಜನ್ಮದಿನವನ್ನು ಆಚರಿಸಿ ಸಂಭ್ರಮಿಸುವವರೂ ಇದ್ದಾರೆ. ಬಹುತೇಕ ಶ್ವಾನ ಪ್ರಿಯರಿಗೆ ಅವರ ಮನೆಯ ಮುದ್ದಿನ ಸದಸ್ಯನಿಗೆ 'ನಾಯಿ' ಎಂದರೆ ಕೋಪ ಬರುತ್ತದೆ. ಅದಕ್ಕೆಂದೇ ಒಲುಮೆಯ ಹೆಸರು ಇರುವಾಗ ನಾಯಿ ಎಂದು ಸಂಬೋಧಿಸುವುದು ಅದಕ್ಕೆ ಮಾಡುವ ಅವಮಾನ ಎಂದು ಅವರು ಗ್ರಹಿಸುತ್ತಾರೆ. ಬೆಕ್ಕು, ಪಕ್ಷಿ, ಮೀನು, ಮೊಲಗಳನ್ನು ಸಾಕಿದರೂ ನಾಯಿಗೆ ಇರುವ ಕಿಮ್ಮತ್ತು ಬೇರೆ ಪ್ರಾಣಿಗಳಿಗೆ ಇಲ್ಲ. ಕೆಲವೊಮ್ಮೆ ಆ ಮನೆಯ ಮನುಷ್ಯನೊಬ್ಬನಿಗೂ ಇಲ್ಲದೇ ಇರಬಹುದು.

ಬೆಂಗಳೂರು ಉತ್ತರ ತಾಲ್ಲೂಕಿನ ಹೆಗ್ಗಡದೇವನಪುರ ಎಂಬಲ್ಲಿ ಸಾಕುನಾಯಿಯ ಅಗಲಿಕೆಯ ನೋವು ಸಹಿಸಲು ಆಗದೆ, ಅದರ ಮಾಲೀಕರಾಗಿದ್ದ ರಾಜಶೇಖರ್ ಎನ್ನುವ ಯುವಕ ಆತ್ಮಹತ್ಯೆ ಮಾಡಿಕೊಂಡಿರುವುದು ಈಗ ಸುದ್ದಿಯಾಗಿದೆ. ಅವರು ಜರ್ಮನ್ ಷೆಪರ್ಡ್ ತಳಿಯ ನಾಯಿಯನ್ನು ಒಂಬತ್ತು ವರ್ಷಗಳಿಂದ ಸಾಕಿದ್ದರು. ಅದಕ್ಕೆ 'ಬೌನ್ಸಿ' ಎಂಬ ಆಕರ್ಷಣೀಯ ಹೆಸರನ್ನು ಇಟ್ಟಿದ್ದರು. ಬೌನ್ಸಿ ಅನಾರೋಗ್ಯಕ್ಕೆ ತುತ್ತಾಗಿ ಅಸುನೀಗಿದೆ. ಅದರ ಅಂತ್ಯಸಂಸ್ಕಾರವನ್ನೂ ತಮ್ಮಿಷ್ಟದಂತೆ ಮುಗಿಸಿ ಬಂದ ರಾಜಶೇಖರ್ ಅವರಿಗೆ ಬೌನ್ಸಿ ಇಲ್ಲದೆ ತಾವು ಇರುವುದು ಬಲುಭಾರ ಎನಿಸಿದೆ. ಹಾಗಾಗಿ, ಅದೇ ನಾಯಿಯ ಚೈನನ್ನು ತಮ್ಮ ಕೊರಳಿಗೆ ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಪ್ರಾಣಿ–ಮನುಷ್ಯನ ನಡುವಿನ ಸಂಬಂಧದ ಪರಾಕಾಷ್ಠೆಯನ್ನು ತಿಳಿಸುವ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಗುತ್ತಿ ಮತ್ತು ನಾಯಿಯ ಅಭೇದ ಸಂಬಂಧ ಇರಬಹುದು. ಸಿದ್ದಲಿಂಗಯ್ಯ ಅವರು 'ಕತ್ತೆ ಧರ್ಮ' ಎಂಬ ಕಥನ ಕವನದಲ್ಲಿ ಹೇಳುವ ಮಧುಗಿರಿ ಪಟ್ಟಣದ ಸಿದ್ಧಯ್ಯನೆಂಬ ಅಗಸನ ಬದುಕನ್ನು ಒಂದುಕಡೆ ನೆನಪಿಸುತ್ತದೆ. ಮತ್ತೊಂದು ಕಡೆ, ಚಾರಿತ್ರಿಕ ಮಹತ್ವದ 'ಆತಕೂರು' ಶಾಸನವನ್ನೂ ಕಣ್ಣೆದುರಿಗೆ ತರುತ್ತದೆ. 'ಕಾಳಿ' ಎಂಬ ಬೇಟೆನಾಯಿಗೊಂದು ಸಮಾಧಿ, ಅದರ ಸಂರಕ್ಷಣೆಗೆ ಜಮೀನನ್ನು ಮೀಸಲು ಇಟ್ಟ ವಿವರವನ್ನು ಆ ಶಾಸನ ಹೇಳುತ್ತದೆ. ನಾಯಿಯ ಸ್ಮಾರಕಕ್ಕಾಗಿ ಪ್ರಕಟಿಸಿದ ವಿಶಿಷ್ಟ ಶಿಲಾಶಾಸನ ಅದು.

ಶಾಸನ ಪರಂಪರೆಯಲ್ಲೇ ಅನನ್ಯ ಎನ್ನಿಸುವ ಆತಕೂರು ಶಾಸನವು ಕನ್ನಡ ನಾಡಿನ ರಾಜಕೀಯ ಚರಿತ್ರೆಗೂ ಮಹತ್ವದ ನಿದರ್ಶನ. ರಾಷ್ಟ್ರಕೂಟರು ಮತ್ತು ಚೋಳರ ನಡುವೆ ವೈರತ್ವ ಇತ್ತು. ಅದು ರಾಷ್ಟ್ರಕೂಟರ 3ನೇ ಕೃಷ್ಣ ಮತ್ತು ಚೋಳರ 3ನೇ ರಾಜಾದಿತ್ಯನ ನಡುವೆ ತಕ್ಕೋಲಂ ಎಂಬಲ್ಲಿ ಯುದ್ಧಕ್ಕೆ ಕಾರಣವಾಗುತ್ತದೆ. ರಾಷ್ಟ್ರಕೂಟರಿಗೆ ಗಂಗರು ಬೆಂಬಲವನ್ನು ನೀಡುತ್ತಾರೆ. ಆ ಯುದ್ಧದಲ್ಲಿ ರಾಷ್ಟ್ರಕೂಟರು ಗೆಲ್ಲುತ್ತಾರೆ. ಆ ಹೋರಾಟವನ್ನು ಕಂಡಿದ್ದ ಗಂಗರ ರಾಜ ಬೂತುಗ ತನ್ನ ಸೇನೆಯಲ್ಲಿ ಪರಾಕ್ರಮವನ್ನು ಮೆರೆದ ವೀರಯೋಧ ಮಣಲೇರನನ್ನು ಪುರಸ್ಕರಿಸುತ್ತಾನೆ. ಆಗ ಬಹುಮಾನವಾಗಿ ಏನು ಬೇಕು ಎಂದು ಆತನನ್ನು ಕೇಳುತ್ತಾನೆ. ಅದಕ್ಕೆ ಆತ ತಮ್ಮ ಯುದ್ಧದಲ್ಲಿ ದುಡಿದ ಬೇಟೆನಾಯಿ 'ಕಾಳಿ' ಬೇಕು ಎಂದು ಕೇಳಿ ಪಡೆಯುತ್ತಾನೆ.



ಕಾಳಿಯನ್ನು ಅಕ್ಕರೆಯಿಂದ ಸಾಕುತ್ತಿದ್ದ ಮಣಲೇರ ಒಮ್ಮೆ ಬೇಟೆಗೆ ಹೋದಾಗ, ಕಾಡುಹಂದಿಯೊಂದಿಗಿನ ಸೆಣಸಾಟದಲ್ಲಿ ಅದು ವೀರಮರಣ ಹೊಂದುತ್ತದೆ. ಆ ಕಾಳಿಯ ನೆನಪಿಗಾಗಿ ಶಾಸನವನ್ನು ಹೊರಡಿಸಿದ್ದು, ಆ ಶಾಸನಕ್ಕೆ ಹಾನಿ ಮಾಡಿದರೆ ನಾಯಿಯನ್ನು ಕೊಂದ ಪಾಪ ಬರುತ್ತದೆ ಎಂಬ ಶಾಪಾಶಯವನ್ನೂ ಅದರ ಮೇಲೆ ಕೆತ್ತಲಾಗಿದೆ. ಹಂದಿ ಮತ್ತು ನಾಯಿಯ ಚಿತ್ರ ಇರುವ ವಿಶಿಷ್ಟ ಶಾಸನವನ್ನು ಕ್ರಿ.ಶ. 950ರಲ್ಲಿ ಹೊರಡಿಸಲಾಗಿತ್ತು. ಅದನ್ನು ಈಗಿನ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಆತಕೂರು ಎಂಬ ಗ್ರಾಮದ ಚಲ್ಲೇಶ್ವರ ದೇವಾಲಯದ ಬಳಿ ಪ್ರತಿಷ್ಠಾಪಿಸಲಾಗಿತ್ತು. ಈಗ, ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಅದನ್ನು ಸಂರಕ್ಷಿಸಿ ಇಡಲಾಗಿದೆ.

ಕಾವ್ಯದೊಳಗಿನ ಕತ್ತೆ, ಶಾಸನದ ನಾಯಿ ನಮ್ಮ ಎದುರಿನ ಪ್ರತಿಮೆಯಂತೆ ಕಾಣುತ್ತಿವೆ. ಪ್ರಾಣಿಗಳು ಕೆಲವರ ಭಾವನಾತ್ಮಕ ಬಾಳಿನ ಭಾಗ ಎನ್ನುವ ವಾಸ್ತವ ಸತ್ಯವನ್ನು ಈ ಹೊತ್ತಿನ ಆತ್ಮಹತ್ಯೆ ನೆನಪಿಸುವಂತಿದೆ. ತನ್ನ ಪ್ರೀತಿಪಾತ್ರ ಜೀವವನ್ನು ಕಳೆದುಕೊಂಡಾಗ ಆತ್ಮಹತ್ಯೆ ಮಾಡಿಕೊಳ್ಳುವ ಮಟ್ಟಿಗೆ ಮನುಷ್ಯ ಭಾವುಕನಾಗುತ್ತಾನೆ ಎನ್ನುವುದಕ್ಕೂ ಈ ಪ್ರಕರಣ ನಿದರ್ಶನವಾಗಿದೆ. ಸಾಕುನಾಯಿಯ ವಿಷಯದಲ್ಲಿ ವಿಕೋಪದ ಜಗಳ, ಹೊಡೆದಾಟಗಳು ಆಗಾಗ ನಡೆಯುತ್ತವೆ. ಅಂದರೆ ನಾಯಿಯ ಮಾಲೀಕನ ಮನಸ್ಸಿನ ತಲ್ಲಣ ಯಾವ ಮಟ್ಟದಲ್ಲಿರುತ್ತದೆ ಎನ್ನುವುದನ್ನು ಈ ಘಟನೆ ತಿಳಿಸುವಂತಿದೆ. ಅಲ್ಲಿ ಮಣಲೇರನು ಕಾಳಿಗೆ ತನ್ನ ಆಸ್ತಿಯ ಒಂದು ಪಾಲನ್ನು ಮುಡಿಪಾಗಿ ಇಟ್ಟರೆ, ಇಲ್ಲಿ ರಾಜಶೇಖರ್ ಅವರು ಬೌನ್ಸಿಯ ನೆನಪಿನಲ್ಲಿ ಅನುಗಮನ ಹೊಂದಿ ತಾವೇ ಮುಡಿಪಾಗಿದ್ದಾರೆ.

ವಾಚಕರ ವಾಣಿ

'ನಂದಿನಿ' ಅನುಕರಣೀಯ ಮಾದರಿ

ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಇತ್ತೀಚೆಗೆ ಬಿಡುಗಡೆ ಮಾಡಿರುವ ನಂದಿನಿ ಬ್ರ್ಯಾಂಡ್‌ನ ದೋಸೆ ಹಾಗೂ ಇಡ್ಲಿ ಹಿಟ್ಟು ಗುಣಮಟ್ಟದಿಂದ ಕೂಡಿದ್ದು, ಕೈಗೆಟಕುವ ಬೆಲೆಯನ್ನು ಹೊಂದಿರುವುದು ಶ್ಲಾಘನೀಯ. ಸಹಕಾರಿ ವಲಯದ ಸಂಸ್ಥೆಗಳು, ಅರೆಸರ್ಕಾರಿ ಮತ್ತು ಸರ್ಕಾರಿ ಸಂಸ್ಥೆಗಳು ಇದೇ ರೀತಿ ಜನಸಾಮಾನ್ಯರಿಗೆ ಗುಣಮಟ್ಟದ ಉತ್ಪನ್ನಗಳನ್ನು ಕೈಗೆಟಕುವ ದರದಲ್ಲಿ ಒದಗಿಸುವ ಪ್ರಯತ್ನ ಮಾಡಲಿ. ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು (ಹಾಪ್‌ಕಾಮ್ಸ್) ರೈತರಿಂದ ಖರೀದಿಸಿದ ಹಣ್ಣು– ತರಕಾರಿಗಳನ್ನು ಜನಸಾಮಾನ್ಯರಿಗೆ ಒದಗಿಸುವ ದಿಸೆಯಲ್ಲಿ ಇನ್ನೂ ಹೆಚ್ಚು ದಕ್ಷವಾಗಿ ಮತ್ತು ಉತ್ತಮ ರೀತಿಯಲ್ಲಿ ಸೇವೆ ಒದಗಿಸಬಹುದು. ಇದರಿಂದ ಗ್ರಾಹಕರು ಮತ್ತು ರೈತರು ಇಬ್ಬರಿಗೂ ಪ್ರಯೋಜನವಾಗುತ್ತದೆ. ಇದೇ ರೀತಿ ಎಳನೀರು, ಹುಣಸೆಹಣ್ಣಿನಂತಹ ಉತ್ಪನ್ನಗಳನ್ನೂ ಒದಗಿಸುವ ಬಗ್ಗೆ ಚಿಂತನೆ ನಡೆಯಲಿ.

ಜಿ.ಪಿ.ದಯಾನಂದ, ಬೆಂಗಳೂರು

ಸಾರಿಗೆ ಸೇವೆ: ಗುಣಮಟ್ಟ ಸುಧಾರಿಸುವ ಮನಸ್ಸಿಲ್ಲವೇ?

ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಶೇಕಡ 15ರಷ್ಟು ಹೆಚ್ಚಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಿದೆ. ಈ ನಿರ್ಧಾರವು ಜನಸಾಮಾನ್ಯರನ್ನು ಕಂಗಾಲಾಗಿಸಿದೆ. ಪ್ರಯಾಣ ದರವನ್ನು ಈ ಪ್ರಮಾಣದಲ್ಲಿ ಏರಿಸುವಾಗ ಕನಿಷ್ಠಪಕ್ಷ ಸೇವಾ ಮಟ್ಟ ಸುಧಾರಿಸುವ ಕ್ರಮಗಳನ್ನಾದರೂ ಪ್ರಕಟಿಸಬೇಕಾಗಿತ್ತು. ಗ್ರಾಮೀಣ ಭಾಗಗಳಲ್ಲಿ ಅದೇ ಕೊಳಕು ಗುಜರಿ ಬಸ್ಸುಗಳು ಓಡಾಡುತ್ತವೆ. ಕೆಲವು ನೌಕರರಲ್ಲಿ ಸೌಜನ್ಯದ ಕೊರತೆ ಎದ್ದುಕಾಣುತ್ತದೆ. ಅಧಿಕಾರಿಗಳಲ್ಲಿ ನಿರ್ಲಕ್ಷ್ಯ ಭಾವ, ತನಗೆ ಸಂಬಂಧವೇ ಇಲ್ಲದಂತಿರುವ ಸರ್ಕಾರ- ಇಂತಹ ಸ್ಥಿತಿಯಿಂದ ಪಾಡು ಪಡುತ್ತಿರುವವರು ಬಡವರು, ಮಧ್ಯಮವರ್ಗದ ಜನ ಮತ್ತು ವಿದ್ಯಾರ್ಥಿಗಳು.

ಬಸ್ಸುಗಳು ನಿಗದಿತ ವೇಳೆಗೆ ಅನುಗುಣವಾಗಿ ಸಂಚರಿಸುವಂತಾಗಬೇಕು. ಪ್ರಯಾಣಿಕರಿಗೆ ನೆಮ್ಮದಿಯ ಪ್ರಯಾಣ ಸಾಧ್ಯವಾಗಬೇಕು. ಜೊತೆಗೆ ಜನಸಾಮಾನ್ಯರ ಕಿಸೆಗೆ ಭಾರವಾಗಬಾರದು. ಸಾರಿಗೆ ನಿಗಮಗಳು ನಷ್ಟದಲ್ಲಿದ್ದರೆ ಅದಕ್ಕೆ ವಿಶೇಷ ಅನುದಾನ ನೀಡಲಿ. ಸರ್ಕಾರ ತನ್ನ ಆಶ್ವಾಸನೆಗಳ ಈಡೇರಿಕೆಗಾಗಿ ನೀಡಿರುವ ಉಚಿತ ಸೇವೆಗೆ ಭರಿಸಬೇಕಾದ ಹಣವನ್ನು ಪ್ರತಿ ತಿಂಗಳು ತಪ್ಪದೇ ಸಾರಿಗೆ ನಿಗಮಗಳಿಗೆ ಕೊಡಲಿ. ಟಿಕೆಟ್ ಕೊಂಡು ಪ್ರಯಾಣಿಸುವವರಿಗಾಗಿ ಪ್ರತ್ಯೇಕ ಬಸ್‌ಗಳನ್ನು ಬಿಡಲಿ. ಸಾರಿಗೆ ವ್ಯವಸ್ಥೆಯು ಬರೀ ಲಾಭ ಮಾಡುವ ಉದ್ದೇಶ ಹೊಂದಿರದೆ, ಪ್ರಯಾಣಿಕಸ್ನೇಹಿ ವ್ಯವಸ್ಥೆಯಾಗಲಿ.

ಉದಯ ಮ. ಯಂಡಿಗೇರಿ, ಧಾರವಾಡ

ಮೇಲಂಗಿ ನಿಯಮ: ಕೇರಳ ದೇಗುಲದ ದಿಟ್ಟ ನಡೆ

ಕೆಲವು ದೇವಾಲಯಗಳಲ್ಲಿ ಗಂಡಸರು ಮೇಲಂಗಿಯನ್ನು ತೆಗೆದು ದೇವರ ದರ್ಶನ ಮಾಡುವುದು ವಾಡಿಕೆ. ಇದನ್ನು ಪಾಲಿಸುವಂತೆ ಒತ್ತಡ ಹೇರಲು ಆಡಳಿತ ಮಂಡಳಿಯವರು ಸಿಬ್ಬಂದಿಯನ್ನೂ ನೇಮಕ ಮಾಡಿರುತ್ತಾರೆ ಹಾಗೂ ಧ್ವನಿವರ್ಧಕದಲ್ಲೂ ಆಗಾಗ್ಗೆ ಈ ಬಗ್ಗೆ ಘೋಷಣೆ ಮಾಡಲಾಗುತ್ತದೆ. ಆದರೆ ಇಂತಹ ನಿಯಮವನ್ನು ಕೈಬಿಡಲು ಕೇರಳದ ದೇವಾಲಯವೊಂದರ ಆಡಳಿತ ಮಂಡಳಿಯು ಯೋಜನೆ ರೂಪಿಸಿದೆ ಎಂದು ಅಲ್ಲಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತಿಳಿಸಿರುವುದು (ಪ್ರ.ವಾ., ಜ. 2) ಆಶಾದಾಯಕ ಬೆಳವಣಿಗೆಯಾಗಿದೆ. ನಾರಾಯಣ ಗುರುಗಳು ಸ್ಥಾಪಿಸಿರುವ ಶಿವಗಿರಿ ಮಠದ ಸ್ವಾಮಿ ಸಚ್ಚಿದಾನಂದ ಅವರು ಈ ಅನಿಷ್ಟ ಪದ್ಧತಿಯನ್ನು ಕೈಬಿಡುವಂತೆ ಕರೆ ನೀಡಿರುವುದರಿಂದ, ಈ ಸಾಮಾಜಿಕ ಪಿಡುಗನ್ನು ವಿರೋಧಿಸುತ್ತಿರುವ ಬೆಂಬಲಿಗರಿಗೆ ಆನೆಬಲ ಬಂದಂತಾಗಿದೆ.

ದೇವಾಲಯಗಳಲ್ಲಿ ಮೇಲಂಗಿಯನ್ನು ಕಳಚುವ ಪದ್ಧತಿಯಿಂದ ಅನೇಕರಿಗೆ ಅನೇಕ ರೀತಿಯಲ್ಲಿ ಕಿರಿಕಿರಿ ಆಗುತ್ತದೆ. ಕೃಶಕಾಯ ಹೊಂದಿರುವವರು, ಚರ್ಮದ ತೊಂದರೆಗಳಿಂದ ಬಳಲುತ್ತಿರುವವರಿಗೆ ಈ ಪರಿಪಾಟವು ಮಾನಸಿಕ ಯಾತನೆಯಾಗಿ ಪರಿಣಮಿಸುತ್ತದೆ. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಎಲ್ಲ ಜಾತಿಯ ಸ್ವಾಮೀಜಿಗಳಿದ್ದು, ಈ ಪಿಡುಗನ್ನು ಕೊನೆಗಾಣಿಸಲು ಅವರು ಮನಸ್ಸು ಮಾಡಬೇಕಿದೆ. ನಮ್ಮ ಮುಖ್ಯಮಂತ್ರಿ ಹಾಗೂ ಮುಜರಾಯಿ ಸಚಿವರು ಸಹ ಕೇರಳ ದೇಗುಲದ ದಿಟ್ಟ ನಡೆಯನ್ನು ಅನುಸರಿಸಬೇಕಾಗಿದೆ.

ಚಿ.ಉಮಾ ಶಂಕರ್, ಬೆಂಗಳೂರು

ಆತ್ಮಹತ್ಯೆ ತಡೆ: ಮಹಿಳೆ ಕೈಜೋಡಿಸಲಿ

ರಾಜ್ಯದಲ್ಲಿ 2021ರಿಂದ 23ರವರೆಗಿನ ಮೂರು ವರ್ಷಗಳಲ್ಲಿ ನಡೆದಿರುವ ಆತ್ಮಹತ್ಯೆ ಪ್ರಕರಣಗಳಲ್ಲಿ ಮಹಿಳೆಯರಿಗಿಂತ ಪುರುಷರ ಸಂಖ್ಯೆಯೇ ಅಧಿಕವಾಗಿದೆ ಎಂಬ ಅಂಕಿ ಅಂಶಗಳನ್ನು ಒಳಗೊಂಡ ಮಾಹಿತಿ (ಪ್ರ.ವಾ., ಜ. 3) ಮೈ ನಡುಗಿಸಿತು. ಮಹಿಳೆಯರಿಗೆ ಹೋಲಿಸಿದರೆ ಪುರುಷರ ಆತ್ಮಹತ್ಯೆ ಸಂಖ್ಯೆ ಮೂರು ಪಟ್ಟಿಗೂ ಅಧಿಕವಾಗಿ ಇರುವುದು ಆತಂಕಕಾರಿ. ಹೆಣ್ಣು ಸಹಜವಾಗಿ ಭಾವಜೀವಿ. ಆತ್ಮಹತ್ಯೆಗೆ ಕಾರಣವಾಗುವ ಖಿನ್ನತೆ, ಒಂಟಿತನದಂತಹ ಸಮಸ್ಯೆಗಳಿಂದ ಹೊರಬರಲು ಪತ್ನಿಯಾಗಿ, ಸಹೋದರಿಯಾಗಿ, ತಾಯಿಯಾಗಿ ಅಥವಾ ಗೆಳತಿಯಾಗಿ ಗಂಡನ್ನು ಬೆಂಬಲಿಸುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು, ಜಾಗೃತಿ ಮೂಡಿಸಲು ಮುಂದಾಗಬೇಕು.

ಆಶಾ ಅಪ್ರಮೇಯ, ದಾವಣಗೆರೆ

ಬೇಕು ಶಿಕ್ಷಣ ತಜ್ಞರ ಸಮಿತಿ

ಹತ್ತನೇ ತರಗತಿಯ ಫಲಿತಾಂಶವನ್ನು ಉತ್ತಮಪಡಿಸಲು ಶಿಕ್ಷಣ ಇಲಾಖೆ ಪ್ರತಿ ವರ್ಷವೂ ಅನೇಕ ಪ್ರಯೋಗಗಳನ್ನು ಮಾಡುತ್ತಾ ಬಂದಿದೆ. ಅದರಲ್ಲಿ 'ಶಿಕ್ಷಕರು ಡಿಸೆಂಬರ್‌ನೊಳಗೆ ಪಠ್ಯಕ್ರಮ ಮುಗಿಸಿ ಪುನರಾವರ್ತನೆ ಮಾಡಬೇಕು' ಎಂಬುದೂ ಒಂದು. ವಾರ್ಷಿಕ ಮಾರ್ಗದರ್ಶಿಯಂತೆ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಫೆಬ್ರುವರಿಯವರೆಗೆ ಕಾಲಾವಕಾಶ ಬೇಕಾಗುತ್ತದೆ. ಈ ಒಂದು ಕ್ರಮದಿಂದ, ನಿಧಾನವಾಗಿ ಕಲಿಯುವ ವಿದ್ಯಾರ್ಥಿಗಳು ಏನನ್ನೂ ಕಲಿಯದೆ ಪರೀಕ್ಷೆ ಎದುರಿಸಬೇಕಾಗಿದೆ. ಅರ್ಥವಾಗದ ವಿಷಯವನ್ನು ಎಷ್ಟು ಬಾರಿ ಪುನರಾವರ್ತನೆ ಮಾಡಿ, ಎಷ್ಟು ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಿದರೂ ಏನು ಉಪಯೋಗ? ಈ ದಿಸೆಯಲ್ಲಿ ಪ್ರತಿ ಜಿಲ್ಲೆಯಲ್ಲೂ ಅವೈಜ್ಞಾನಿಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದರಿಂದ ಸಂತಸದ ಕಲಿಕೆಯ ಬದಲು ಕಲಿಕೆಯು ಹೊರೆ ಎನಿಸುವಂತಾಗಿದೆ. ಅನುಭವಿ ಶಿಕ್ಷಕರು ಮತ್ತು ಶಿಕ್ಷಣ ತಜ್ಞರ ಸಮಿತಿಯೊಂದು ಅವಶ್ಯವಾಗಿದ್ದು, ಇಂತಹ ಕ್ರಮಗಳನ್ನು ತೆಗೆದುಕೊಳ್ಳುವ ಮೊದಲು ಈ ಸಮಿತಿಯ ಅನುಮೋದನೆ ಪಡೆಯುವಂತೆ ಆಗಬೇಕು. ಆಗ ಅರ್ಥವಿಲ್ಲದ ಕ್ರಮಗಳಿಗೆ ಕಡಿವಾಣ ಬೀಳಬಹುದು.

ಅಶೋಕ್ ಎನ್.ಎಚ್., ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಂಘದ ಚುನಾವಣೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಿಲ್ಲ: ಷಡಾಕ್ಷರಿ • ಕೃಷಿ ಬೆಲೆ ಆಯೋಗದ ಮುಂದಿದೆ ದೊಡ್ಡ ಸವಾಲು: ಅಶೋಕ ದಳವಾಯಿ

ಒಪಿಎಸ್ ಮರು ಜಾರಿಗೆ ನೌಕರರ ಹೋರಾಟ ತೀವ್ರ


'ಸರ್ಕಾರಿ ನೌಕರರಿಗೆ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಬದಲಾಗಿ ಹಳೆ ಪಿಂಚಣಿ ಯೋಜನೆ (ಒಪಿಎಸ್) ಜಾರಿಗೆ ತೀವ್ರ ಹೋರಾಟ ನಡೆಸುವುದು ಮುಂದಿನ ಮೊದಲ ಹೆಜ್ಜೆ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ **ಸಿ.ಎಸ್.ಷಡಾಕ್ಷರಿ** ಹೇಳಿದರು. ಸಂಘದ ಅಧ್ಯಕ್ಷರಾಗಿ 2024–2029ನೇ ಅವಧಿಗೆ ಎರಡನೇ ಬಾರಿ ಆಯ್ಕೆಯಾಗಿರುವ ಅವರು, ವಿವಿಧ ವೃಂದ ಸಂಘಗಳ 5.20 ಲಕ್ಷ ನೌಕರರ ಬೇಡಿಕೆ, ಮುಂದಿನ ಯೋಜನೆಗಳು, ಸಂಘದ ಮುಂದಿನ ಕಾರ್ಯಚಟುವಟಿಕೆಗಳ ಕುರಿತು 'ಪ್ರಜಾವಾಣಿ' ಜತೆ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ

• ಚಂದ್ರಹಾಸ ಹಿರೇಮಳಲಿ

• ಚುನಾವಣೆಯಲ್ಲಿ ಎರಡೂ ಬಣಗಳ ತಲಾ ಒಬ್ಬರು ಆಯ್ಕೆಯಾಗಿದ್ದೀರಿ? ಸಮನ್ವಯ ಹೇಗೆ ಸಾಧ್ಯ?

ಚುನಾವಣೆಗಾಗಿ ಭಿನ್ನ ಬಣ ಅಷ್ಟೆ. ನಂತರ ಎಲ್ಲರೂ ಸರ್ಕಾರಿ ನೌಕರರ ಸೇವೆಗೆ ಮೀಸಲು. ರಾಜ್ಯ ಸಂಘದಲ್ಲಿ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರವಿದೆ. ಅಧ್ಯಕ್ಷ ಹಾಗೂ ಖಜಾಂಚಿ ಸೇರಿದಂತೆ ಎಲ್ಲರೂ ಕಾರ್ಯಕಾರಿ ಸಮಿತಿ ತೀರ್ಮಾನದಂತೆ ಕೆಲಸ ಮಾಡಬೇಕು.

• ಸಂಘದ ಚುನಾವಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ಮಾಡಿತ್ತಾ?



ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಎಂದೂ ಹಸ್ತಕ್ಷೇಪ ಮಾಡಿಲ್ಲ. ಸರ್ಕಾರದಲ್ಲಿರುವ ಕೆಲವರ ಹೆಸರು ಬಳಸಿಕೊಂಡು ಭಿನ್ನ ಬಣ ಪ್ರಚಾರ ನಡೆಸಿತು ಅಷ್ಟೆ. ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ಕೊಟ್ಟರೆ ನೌಕರರ ಬೇಡಿಕೆ ಈಡೇರಿಕೆಯ ಹೋರಾಟ ಸಾಧ್ಯವಾಗದು.

• ಮೊದಲ ಅವಧಿಯ ಕೆಲಸದ ಬಗ್ಗೆ ಹೇಳಿ?

ಹೌದು. ಬಿಜೆಪಿಯ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 7ನೇ ವೇತನ ಆಯೋಗ ರಚನೆಯಾದ ನಂತರ ಮಧ್ಯಂತರ ಪರಿಹಾರಕ್ಕೆ ಆಗ್ರಹಿಸಿ ನಡೆಸಿದ್ದ ಒಂದು ದಿನದ ಮುಷ್ಕರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು. ನೌಕರರ ಮೂಲವೇತನದ ಶೇ 17ರಷ್ಟು ಮಧ್ಯಂತರ ಪರಿಹಾರ ಘೋಷಿಸಿತ್ತು. ನಂತರ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ 7ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿತು. ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ, ಕೆಜಿಐಡಿ ಡಿಜಿಟಲೀಕರಣ ಸೇರಿದಂತೆ ಹತ್ತಾರು ಆದೇಶಗಳಾಗಲು ಸಂಘ ಶ್ರಮಿಸಿದೆ. ಶತಮಾನೋತ್ಸವ ಭವನ ನಿರ್ಮಾಣ ಹಾಗೂ ಹಲವು ಜಿಲ್ಲೆ, ತಾಲ್ಲೂಕುಗಳಲ್ಲಿ ಭವನಗಳ ನಿರ್ಮಾಣ ಮಾಡಲಾಗಿದೆ.

• ಈ ಅವಧಿಯ ಸವಾಲುಗಳು ಏನು?

ಮುಖ್ಯವಾಗಿ ಹಳೆ ಪಿಂಚಣಿ ವ್ಯವಸ್ಥೆ ಮರು ಜಾರಿಗೆ ಹೋರಾಟ ತೀವ್ರಗೊಳಿಸುತ್ತೇವೆ. ಸರ್ಕಾರವು ಐಎಎಸ್ ಅಧಿಕಾರಿ ಅಂಜುಂ ಪರ್ವೇಜ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದೆ. ಸಮಿತಿ ವರದಿ ನೀಡಿದ ತಕ್ಷಣ ಅನುಷ್ಠಾನಕ್ಕೆ ಒತ್ತಡ ಹಾಕುತ್ತೇವೆ. ನಗದುರಹಿತ ಆರೋಗ್ಯ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಕರ್ನಾಟಕ ರಾಜ್ಯ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಆದೇಶವಾಗಿದ್ದರೂ ಮೂರು ಇಲಾಖೆಗಳ ಸಮನ್ವಯ ವಿಳಂಬವಾದ ಕಾರಣ ಅನುಷ್ಠಾನ ನಿಧಾನವಾಗಿತ್ತು. ಈಗ ಎಲ್ಲ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿದ್ದು, ಜನವರಿ ಅಂತ್ಯಕ್ಕೆ ಜಾರಿಯಾಗುವ ನಿರೀಕ್ಷೆ ಇದೆ.

• ಹಿಂದಿನ ಅವಧಿಯಲ್ಲಿ ಒಪಿಎಸ್ ಜಾರಿಗೆ ಹೆಚ್ಚು ಒತ್ತು ನೀಡಲಿಲ್ಲ ಎನ್ನುವ ಆರೋಪ ಇದೆಯಲ್ಲ?

ಖಂಡಿತ ಇಲ್ಲ, ಮೊದಲ ಅವಧಿಯಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲೂ ಹಳೆ ಪಿಂಚಣಿ ವ್ಯವಸ್ಥೆ ಮರುಜಾರಿ ಆಗಿರಲಿಲ್ಲ. 2022–23ರಿಂದ ಕೆಲ ರಾಜ್ಯಗಳಲ್ಲಿ ಈ ಪ್ರಕ್ರಿಯೆ ಆರಂಭವಾಯಿತು. ನಾವೂ ಬೇಡಿಕೆ ಸಲ್ಲಿಸಿದೆವು. ಬಸವರಾಜ ಬೊಮ್ಮಾಯಿಯವರ ಸರ್ಕಾರ ಸಮಿತಿ ರಚಿಸಿದರೂ ಅಷ್ಟರಲ್ಲಿ ಅವರ ಅವಧಿ ಮುಗಿಯಿತು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದ ಮೇಲೆ ಪರಿಶೀಲನೆಗಾಗಿ ಮತ್ತೊಂದು ಸಮಿತಿ ನೇಮಿಸಿದೆ. ಒಪಿಎಸ್ ಮರುಜಾರಿಯಾದ ರಾಜ್ಯಗಳಿಗೆ ಸಮಿತಿ ತೆರಳಿ ಸಾಧಕ–ಬಾಧಕಗಳ ಅಧ್ಯಯನ ಮಾಡುತ್ತಿದೆ. ವರದಿ ಶೀಘ್ರ ಸಲ್ಲಿಕೆಯಾಗಲಿದೆ.

• ಶಿಕ್ಷಕರ ಹಲವು ಸಮಸ್ಯೆಗಳು ಜೀವಂತವಾಗಿವೆಯಲ್ಲ?

ರಾಜ್ಯದಲ್ಲಿ 120 ವೃಂದ ಸಂಘಗಳಿವೆ. ಸರ್ಕಾರಿ ನೌಕರರ ಸಂಘ ಎಲ್ಲ ಸಂಘಗಳಿಗೂ ಮಾತೃ ಸಂಸ್ಥೆ. ಶಿಕ್ಷಕರ ಸಂಘದ ಕೆಲ ಮುಖಂಡರ ಸ್ವಾರ್ಥದ ನಡೆಯಿಂದಾಗಿ ಸಮನ್ವಯ ಸಾಧ್ಯವಾಗಿಲ್ಲ. ಆದರೂ ವೇತನ, ಬಡ್ತಿ ತಾರತಮ್ಯ ಸೇರಿದಂತೆ ಹಲವು ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದ್ದೇವೆ. 2016ಕ್ಕೂ ಪೂರ್ವದಲ್ಲಿ ನೇಮಕಗೊಂಡ ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರಿಗೆ ಆಗಿರುವ ಬಡ್ತಿ ಅನ್ಯಾಯ ಸರಿಪಡಿಸಲಾಗುವುದು. ಶಿಕ್ಷಕರನ್ನು ಒತ್ತಡ ಮುಕ್ತಗೊಳಿಸಿ, ಬೋಧನೆಗೆ ಸೀಮಿತಗೊಳಿಸಲು ಸರ್ಕಾರದ ಜತೆ ಮಾತುಕತೆ ನಡೆಸಲಾಗುವುದು.

• ನೌಕರರ ಹಕ್ಕುಗಳಿಗಷ್ಟೇ ಸಂಘ ಸೀಮಿತವೇ?

ಸರ್ಕಾರದ ಕೆಲಸವನ್ನು ಶ್ರದ್ಧೆ, ಪ್ರಾಮಾಣಿಕವಾಗಿ ಮಾಡಲು ಕಾಲಕಾಲಕ್ಕೆ ತರಬೇತಿ, ಸಲಹಾ ಶಿಬಿರಗಳನ್ನು ಆಯೋಜಿಸುತ್ತಾ ಬಂದಿದ್ದೇವೆ. ಉತ್ತಮ ಕೆಲಸ ಮಾಡಿದ ಫಲವಾಗಿಯೇ ತೆರಿಗೆ ಸಂಗ್ರಹದಲ್ಲಿ ರಾಜ್ಯ ಮುಂಚೂಣಿಯಲ್ಲಿದೆ. ನೌಕರರನ್ನು ಇನ್ನಷ್ಟು ಕ್ರಿಯಾಶೀಲರಾಗಿಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

• ಭ್ರಷ್ಟಾಚಾರದ ವಿರುದ್ಧ ಸಂಘ ಧ್ವನಿ ಎತ್ತುತ್ತಿದೆಯೇ?

ಭ್ರಷ್ಟಾಚಾರ ನಿರ್ಮೂಲನೆಗೆ ಸಂಘ ಸದಾ ಸಹಕಾರ ನೀಡುತ್ತಿದೆ. ಈ ಕುರಿತು ಜಾಗೃತಿ ಮೂಡಿಸಲು ಲೋಕಾಯುಕ್ತರ ಜತೆ ಹಲವು ಸಭೆಗಳನ್ನು ಆಯೋಜಿಸಿದ್ದೇವೆ. ಸರ್ಕಾರ ಹೆಚ್ಚಿನ ಪಾತ್ರ ವಹಿಸಬೇಕು. ಎಲ್ಲ ವರ್ಗಾವಣೆಗಳಿಗೂ ಕೌನ್ಸೆಲಿಂಗ್ ಕಡ್ಡಾಯಗೊಳಿಸಬೇಕು. ಆನ್‌ಲೈನ್ ಸೇವೆ ಶೇ 100ರಷ್ಟು ಜಾರಿಯಾಗಬೇಕು. ❖

'ಮೃತ ನೌಕರನ ಕುಟುಂಬಕ್ಕೆ ₹1 ಕೋಟಿ ಪರಿಹಾರದ ಯೋಜನೆ'

'ಕರ್ತವ್ಯದಲ್ಲಿರುವಾಗಲೇ ನೌಕರ ಮೃತ ಪಟ್ಟರೆ, ಅವರ ಕುಟುಂಬಕ್ಕೆ ವೇತನ ಖಾತೆ ಹೊಂದಿರುವ ಬ್ಯಾಂಕ್ ಮೂಲಕವೇ ₹1 ಕೋಟಿ ಪರಿಹಾರ ಒದಗಿಸುವ ಯೋಜನೆ ಜಾರಿ ಮಾಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದು ಷಡಾಕ್ಷರಿ ಹೇಳಿದರು.

ಮುಂದಿನ ಯೋಜನೆ ಕುರಿತು ತಮ್ಮ ಭಾವನೆ ಹಂಚಿಕೊಂಡ ಅವರು, 'ಖಾಲಿ ಇರುವ 2.70 ಲಕ್ಷ ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲು ಒತ್ತಡ ಹಾಕುತ್ತೇವೆ' ಎಂದರು.

ನೌಕರರಿಗೆ ₹100 ಶುಲ್ಕದಲ್ಲಿ ವಸತಿ ಸೌಲಭ್ಯ ನೀಡಲು ಬೆಂಗಳೂರಿನ ಮೆಜೆಸ್ಟಿಕ್‌ನಲ್ಲಿ 40 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ 300 ಕೊಠಡಿಗಳ ವಸತಿ ಸಮುಚ್ಚಯ ನಿರ್ಮಾಣ ಮಾಡುವ ಆಶಯವಿದೆ. ₹150 ಕೋಟಿ ವೆಚ್ಚದ ಈ ಯೋಜನೆಯಲ್ಲಿ ಸಭಾಭವನ, ಕ್ಲಬ್‌ಹೌಸ್ ಇರಲಿದೆ ಎಂದರು.

2026ರಲ್ಲಿ ಕೇಂದ್ರ ವೇತನ ಆಯೋಗ ರಚಿಸಿದ ನಂತರ ಕೇಂದ್ರ ಮಾದರಿಯ ವೇತನ, ಸರ್ಕಾರಿ ನೌಕರರ ಮಕ್ಕಳಿಗೆ ವೈದ್ಯಕೀಯ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಲ್ಲಿ ಮೀಸಲಾತಿ ಕಲ್ಪಿಸಲು ಹೋರಾಟ ರೂಪಿಸಲಾಗುವುದು. ಹಲವು ಇಲಾಖೆಗಳಲ್ಲಿ ಬಾಕಿ ಇರುವ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಪ್ರಜಾವಾಣಿ ಸಂದರ್ಶನ

ಮಾರುಕಟ್ಟೆಯಲ್ಲೇ ಉತ್ತಮ ಬೆಲೆ ಬರುವಂತೆ ಮಾಡಬೇಕು

'ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚ ನಿಗದಿ ಮಾಡುವುದಷ್ಟೇ ಕೃಷಿ ಬೆಲೆ ಆಯೋಗದ ಪ್ರಧಾನ ಕೆಲಸವಲ್ಲ. ರೈತರಿಗೆ ಮಾರುಕಟ್ಟೆಯಲ್ಲೇ ಉತ್ತಮ ಬೆಲೆ ದೊರೆಯುವಂತೆ ಮಾಡುವ ಹೊಣೆಗಾರಿಕೆಯೂ ಇದೆ' ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ, ನಿವೃತ್ತ ಐಎಎಸ್ ಅಧಿಕಾರಿ **ಅಶೋಕ ದಳವಾಯಿ** ಹೇಳಿದರು. ಆಯೋಗದ ಅಧ್ಯಕ್ಷರಾದ ಬಳಿಕ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದಲ್ಲಿ ಅವರು ಆಡಿದ ಮಾತುಗಳ ಆಯ್ದ ಭಾಗ ಇಲ್ಲಿದೆ

• ಜಯಸಿಂಹ ಆರ್.

• ಕೃಷಿ ಉತ್ಪನ್ನಗಳ ಬೆಲೆಕುಸಿತ, ಅತಿವೃಷ್ಟಿಯಿಂದ ಬೆಳೆಹಾನಿ, ಉತ್ಪಾದನಾ ವೆಚ್ಚ ಏರಿಕೆಯಂತಹ ಬಿಕ್ಕಟಿನ ಸ್ಥಿತಿಯಲ್ಲಿ ನಿಮ್ಮ ಮತ್ತು ಆಯೋಗದ ಮುಂದೆ ಇರುವ ಸವಾಲುಗಳು ಯಾವುವು?

ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಸುಧಾರಿಸುವ ದೊಡ್ಡ ಸವಾಲು ಇದೆ. ಹಣ್ಣು–ತರಕಾರಿಗಳಿಗೆ ಶೈತ್ಯಾಗಾರಗಳನ್ನು ಮತ್ತು ದವಸ–ಧಾನ್ಯ ಮತ್ತು ಮಸಾಲೆ ಪದಾರ್ಥಗಳ ಸಂಗ್ರಹಕ್ಕೆ ಗೋದಾಮುಗಳನ್ನು ರೂಪಿಸಬೇಕು.



ಜತೆಗೆ ಹೊಲದಿಂದ ಗೋದಾಮುಗಳಿಗೆ ಕಡಿಮೆ ವೆಚ್ಚದಲ್ಲಿ ಮತ್ತು ಕಡಿಮೆ ಅವಧಿಯಲ್ಲಿ ಉತ್ಪನ್ನಗಳನ್ನು ಒಯ್ಯಬಹುದಾದಂತಹ ಸಾಗಣೆ ವ್ಯವಸ್ಥೆ ಬೇಕು. ಕೊಯ್ಲೋತ್ತರ ನಿರ್ವಹಣೆಯ ಭಾಗವಾಗಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಸಾಧ್ಯವಾಗಿಸಬೇಕು. ಈ ಎಲ್ಲ ಅಂಶಗಳತ್ತ ಗಮನ ಕೇಂದ್ರೀಕರಿಸಬೇಕಾಗುತ್ತದೆ.

ಇದಕ್ಕಾಗಿ ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಕೃಷಿ ಮಾರುಕಟ್ಟೆಗಳು, ಕೃಷಿ ಉತ್ಪನ್ನ ಸಂಬಂಧಿ ಕೈಗಾರಿಕೆಗಳ ಮಧ್ಯೆ ಸಮನ್ವಯ ಸಾಧಿಸಬೇಕಿದೆ. ಈ ಎಲ್ಲ ಇಲಾಖೆಗಳು ಮತ್ತು ಸಂಬಂಧಿತರನ್ನು ಒಟ್ಟಿಗೆ ಕರೆದೊಯ್ಯುವ ಹಾಗೂ ಆ ಮೂಲಕ ಕೃಷಿ ಮಾರುಕಟ್ಟೆಯನ್ನು ಸುಧಾರಿಸುವ ದೊಡ್ಡ ಸವಾಲು ಆಯೋಗದ ಮುಂದೆ ಇದೆ.

• ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ವ್ಯಾಪ್ತಿಗೆ ಒಳಪಡುವ ಬೆಳೆಗಳಿಗೆ ಆಯೋಗವು ನಿಗದಿಪಡಿಸುವ ಬೆಲೆಗಿಂತಲೂ ಕಡಿಮೆ ಎಂಎಸ್‌ಪಿಯನ್ನು ಕೇಂದ್ರ ಸರ್ಕಾರ ಸಾಮಾನ್ಯವಾಗಿ ನಿಗದಿ ಮಾಡುತ್ತದೆ. ಎರಡೂ ಬೆಲೆಗಳಲ್ಲಿನ ಈ ಅಂತರಕ್ಕೆ ಕಾರಣಗಳೇನು ಮತ್ತು ಅದನ್ನು ನಿಭಾಯಿಸುವ ಬಗೆ ಹೇಗೆ?

ಎಂಎಸ್‌ಪಿ ಲಾಭದಾಯಕ ಮೊತ್ತ ಅಲ್ಲ. ಉತ್ಪಾದನಾ ವೆಚ್ಚ ಮತ್ತು ಅದರ ಶೇ 50ರಷ್ಟು ಲಾಭಾಂಶ ಸೇರಿಸಿ ಎಂಎಸ್‌ಪಿ ನಿಗದಿ ಮಾಡಲಾಗುತ್ತದೆ. ಪಂಜಾಬ್‌ನಲ್ಲಿ ಭತ್ತದ ಉತ್ಪಾದನಾ ವೆಚ್ಚ ಕಡಿಮೆ ಇದ್ದರೆ, ಕರ್ನಾಟಕದಲ್ಲಿ ಅದರ ದುಪ್ಪಟ್ಟು ವೆಚ್ಚವಾಗುತ್ತದೆ. ಆದರೆ, ಕೇಂದ್ರ ಸರ್ಕಾರ ಸರಾಸರಿ ವೆಚ್ಚವನ್ನು ಪರಿಗಣಿಸಿ ಎಂಎಸ್‌ಪಿ ನಿರ್ಧರಿಸುತ್ತದೆ. ಇದರಿಂದ ಕರ್ನಾಟಕದಂತಹ ರಾಜ್ಯಕ್ಕೆ ನಷ್ಟವಾಗುತ್ತದೆ.

ಉತ್ಪಾದನಾ ವೆಚ್ಚದಲ್ಲಿನ ಈ ಪ್ರಾದೇಶಿಕ ಭಿನ್ನತೆಯನ್ನು ಪರಿಗಣಿಸಿ ಎಂಎಸ್‌ಪಿ ನಿಗದಿ ಮಾಡಬೇಕು ಎಂಬ ವಾದ ಬಹಳ ಹಿಂದಿನಿಂದಲೂ ಇದೆ. ಉತ್ಪಾದನಾ ವೆಚ್ಚದಲ್ಲಿ ರಾಜ್ಯದೊಳಗೂ ಈ ರೀತಿಯ ಪ್ರಾದೇಶಿಕ ಭಿನ್ನತೆ ಇದೆ. ಉಳುಮೆ, ಗೊಬ್ಬರ, ಕೂಲಿ, ಬಿತ್ತನೆ ಬೀಜ, ನೀರಾವರಿ ಮೊದಲಾದವುಗಳ ವೆಚ್ಚದಲ್ಲೂ ಈ ಭಿನ್ನತೆ ಇದೆ. ಪ್ರಾದೇಶಿಕ ಮಟ್ಟದಲ್ಲೇ ಅವುಗಳನ್ನು ಲೆಕ್ಕಹಾಕಿ, ವೈಜ್ಞಾನಿಕ ಉತ್ಪಾದನಾ ವೆಚ್ಚವನ್ನು ನಿಗದಿ ಮಾಡುವುದರತ್ತ ಆಯೋಗ ಗಮನ ನೀಡಲಿದೆ.

ಈ ಭಿನ್ನತೆ ಮತ್ತು ಅದರಿಂದಾಗುವ ಅನ್ಯಾಯದ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುವ ಯತ್ನವನ್ನೂ ಮಾಡಲಾಗುತ್ತದೆ. ಉತ್ಪಾದನಾ ವೆಚ್ಚ ಮತ್ತು ಎಂಎಸ್‌ಪಿ ನಡುವಣ ಅಂತರವನ್ನು ತುಂಬಲು ರಾಜ್ಯ ಸರ್ಕಾರ ಪ್ರೋತ್ಸಾಹ ಧನವನ್ನು ನೀಡಬೇಕಾದ ಅಗತ್ಯದ ಬಗ್ಗೆ ಮನವರಿಕೆ ಮಾಡಿಕೊಡಲಾಗುತ್ತದೆ.

• ಆಯೋಗ ಶಿಫಾರಸು ಮಾಡುವ ಪ್ರೋತ್ಸಾಹಧನಕ್ಕಿಂತ ಕಡಿಮೆ ಮೊತ್ತವನ್ನು ರಾಜ್ಯ ಸರ್ಕಾರ ಘೋಷಿಸುತ್ತದೆ. ಶಿಫಾರಸನ್ನು ಸಂಪೂರ್ಣವಾಗಿ ಒಪ್ಪುವಲ್ಲಿ ಇರುವ ತೊಡಕುಗಳೇನು?

ರೈತರಿಗೆ ಉತ್ತಮ ಬೆಲೆ ದೊರೆಯಲಿ ಎಂಬುದನ್ನಷ್ಟೇ ಆಯೋಗ ಗಮನದಲ್ಲಿ ಇರಿಸಿಕೊಳ್ಳುತ್ತದೆ. ಅದರ ಆಧಾರದಲ್ಲೇ ಶಿಫಾರಸು ಮಾಡುತ್ತದೆ. ಆದರೆ, ಸರ್ಕಾರವು ಇತರ ಅಂಶಗಳನ್ನೂ ಪರಿಗಣಿಸುತ್ತದೆ. ರಾಜ್ಯದ ಆರ್ಥಿಕ ಸ್ಥಿತಿಗತಿ, ಪ್ರೋತ್ಸಾಹಧನದ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು, ಶಿಫಾರಸಿನ ಅನುಷ್ಠಾನದ ಸಾಧ್ಯತೆಗಳನ್ನು ಸರ್ಕಾರದ ಹಂತದಲ್ಲಿ ಮತ್ತೊಮ್ಮೆ ಪರಿಶೀಲಿಸಲಾಗುತ್ತದೆ. ಅಧಿಕಾರಿಯಾಗಿ ಸರ್ಕಾರದ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾಗಿದ್ದ ಕಾರಣ ಈ ಪ್ರಕ್ರಿಯೆಯ ಪರಿಚಯ ನನಗಿದೆ. ಈ ಎಲ್ಲದರ ಮಧ್ಯೆ ಒಂದು ಸಮತೋಲನವನ್ನು ಕಾಯ್ದುಕೊಂಡು, ಸರ್ಕಾರದ ಗಮನ ಸೆಳೆಯುವ ಕೆಲಸವನ್ನು ಆಯೋಗ ಮಾಡಲಿದೆ.

• ಬೇಡಿಕೆ ಮತ್ತು ಪೂರೈಕೆ ಮಧ್ಯೆ ಸಮತೋಲನ ಇಲ್ಲದ ಕಾರಣಕ್ಕೆ ಕೃಷಿ ಉತ್ಪನ್ನಗಳ ಬೆಲೆ ನೆಲಕಚ್ಚಿದ ಉದಾಹರಣೆಗಳು ಬಹಳ ಇವೆ. ಈ ಸಮಸ್ಯೆಯನ್ನು ನಿವಾರಿಸುವ ದಿಸೆಯಲ್ಲಿ ಆಯೋಗವು ಏನೆಲ್ಲಾ ಕ್ರಮ ತೆಗೆದುಕೊಳ್ಳಲಿದೆ?

ರೈತ ಉತ್ಪನ್ನಗಳ ವಿಚಾರಕ್ಕೆ ಬಂದಾಗ ಕೊಯ್ಲೋತ್ತರ ನಿರ್ವಹಣೆಗೇ ಹೆಚ್ಚು ಒತ್ತು ನೀಡಲಾಗುತ್ತಿದೆ. ಅದು ಮುಖ್ಯವೇ. ಶೀತಲಗೃಹಗಳು ಮತ್ತು ಸಂಗ್ರಹದ ಆಧಾರದ ಮೇಲೆ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ವ್ಯವಸ್ಥೆಯನ್ನು ಪ್ರಚಾರ ಮಾಡಬೇಕು. ಬಹುತೇಕರಿಗೆ ಈ ಬಗ್ಗೆ ಮಾಹಿತಿ ಕೊರತೆ ಇದೆ. ಗ್ರಾಮೀಣಾಭಿವೃದ್ಧಿ ಇಲಾಖೆ, ಕೃಷಿ ಇಲಾಖೆ, ನೀರಾವರಿ ಇಲಾಖೆಗಳ ಸಹಯೋಗದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಶೀತಲಗೃಹ, ಗೋದಾಮುಗಳನ್ನು ನಿರ್ಮಾಣ ಮಾಡಬೇಕು. ಬೆಲೆ ಕುಸಿದಾಗ ಸಂಗ್ರಹಿಸಿ, ಏರಿಕೆಯಾದಾಗ ಮಾರಾಟ ಮಾಡಲು ಇದರಿಂದ ಸಾಧ್ಯವಾಗುತ್ತದೆ.

ಇದಕ್ಕಿಂತಲೂ ಮುಖ್ಯವಾಗಿ ಬೇಡಿಕೆ ಯಾವ ಪ್ರಮಾಣದಲ್ಲಿ ಇದೆ ಮತ್ತು ಎಷ್ಟು ಪ್ರದೇಶದಲ್ಲಿ ಬಿತ್ತನೆ ಮಾಡಿದರೆ ಉತ್ತಮ ಬೆಲೆ ದೊರೆಯಲಿದೆ ಎಂಬ ಮಾಹಿತಿ ಕೊಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಬೇಕು. ನಮ್ಮಲ್ಲಿ ಈಗಾಗಲೇ ನಿಖರವಾದ ಮಾಹಿತಿ ನೀಡುವ ಬೆಳೆ ಸಮೀಕ್ಷೆ ವ್ಯವಸ್ಥೆ ಇದೆ. ಅದನ್ನು ಬಳಸಿಕೊಳ್ಳಬೇಕು. ಒಂದೇ ಬೆಳೆ ಅಗತ್ಯಕ್ಕಿಂತ ಹೆಚ್ಚು ಪ್ರದೇಶದಲ್ಲಿ ಬಿತ್ತನೆಯಾಗದಂತೆ ಎಚ್ಚರವಹಿಸಬೇಕು. ಆ ಮೂಲಕ ಬೇಡಿಕೆ ಮತ್ತು ಬೆಲೆ ಉತ್ತಮ ಮಟ್ಟದಲ್ಲೇ ಇರುವಂತೆ ನೋಡಿಕೊಳ್ಳಬಹುದು. ಇಂತಹ ವ್ಯವಸ್ಥೆಯನ್ನು ಸಂಬಂಧಿತ ಎಲ್ಲ ಇಲಾಖೆಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲು ಆಯೋಗವು ಒತ್ತು ನೀಡಲಿದೆ. ❖

'ಸಂವಿಧಾನದಲ್ಲಿ ನಂಬಿಕೆ ಇರುವ ಸರ್ಕಾರ ರೈತರ ಹಿತಾಸಕ್ತಿ ವಿರುದ್ಧ ನಡೆಯದು'

'ಕಲ್ಯಾಣ ಕಾರ್ಯಕ್ರಮಗಳಲ್ಲಿ ಮತ್ತು ಸಂವಿಧಾನದಲ್ಲಿ ನಂಬಿಕೆ ಇರಿಸಿದ ಯಾವುದೇ ಸರ್ಕಾರವೂ ರೈತರ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಳ್ಳುವುದಿಲ್ಲ' ಎಂದು ಅಶೋಕ ದಳವಾಯಿ ಹೇಳಿದರು.

'ಆಯೋಗದ ಈ ಹಿಂದಿನ ಅಧ್ಯಕ್ಷರ ಅವಧಿಯಲ್ಲಿ ನೀಡಲಾಗಿದ್ದ ವರದಿಯ ಶಿಫಾರಸುಗಳನ್ನು ರಾಜ್ಯ ಸರ್ಕಾರ ಪರಿಗಣಿಸಿಯೇ ಇರಲಿಲ್ಲ. ಈ ಅಂಶ ನಿಮ್ಮ ಕಾರ್ಯವಿಧಾನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ' ಎಂಬ ಪ್ರಶ್ನೆಗೆ ಅವರು ಹೀಗೆ ಉತ್ತರಿಸಿದರು.

'ಹಾಗೆಂದ ಮಾತ್ರಕ್ಕೆ ಕಾರ್ಯಸಾಧು ಅಲ್ಲದ ಅಥವಾ ಕಷ್ಟಸಾಧ್ಯವಾದ ಶಿಫಾರಸುಗಳನ್ನು ಮಾಡಿದರೆ, ಅದನ್ನು ಅನುಷ್ಠಾನಕ್ಕೆ ತರುವುದು ಸರ್ಕಾರದ ವಿವೇಚನೆಗೆ ಬಿಟ್ಟದ್ದು' ಎಂದೂ ದಳವಾಯಿ ಹೇಳಿದರು.

'ಎಂಎಸ್‌ಪಿ ಮತ್ತು ಪ್ರೋತ್ಸಾಹಧನಕ್ಕಾಗಿ ಉತ್ಪಾದನಾ ವೆಚ್ಚವನ್ನು ನಿಗದಿ ಮಾಡುವುದಕ್ಕೇ ಆಯೋಗವು ಹೆಚ್ಚು ಗಮನ ನೀಡುವುದರಲ್ಲಿ ಅರ್ಥವಿಲ್ಲ. ಬದಲಿಗೆ ಮಾರುಕಟ್ಟೆಯಲ್ಲೇ ರೈತರಿಗೆ ಉತ್ತಮ ಬೆಲೆ ದೊರೆಯುವಂತೆ ಮಾಡುವ ಹೊಣೆಯನ್ನು ಆಯೋಗ ಹೊರಬೇಕು. ಇದಕ್ಕಾಗಿ ಸಂಬಂಧಿತ ಇಲಾಖೆ–ಸಂಸ್ಥೆಗಳ ಮಧ್ಯೆ ಸಮನ್ವಯ ಸಾಧಿಸಬೇಕು. ದೀರ್ಘಾವಧಿಯಲ್ಲಿ ಸುಸ್ಥಿರವಾಗಿ ಉಳಿಯಬಲ್ಲಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು. ಅದಕ್ಕೆ ಪೂರಕವಾದ ಶಿಫಾರಸುಗಳನ್ನು ಮಾಡಿ, ಸರ್ಕಾರಕ್ಕೆ ಮನವಿ ಮಾಡಿಕೊಡುವ ಕೆಲಸ ಮಾಡಬೇಕು' ಎಂದರು.

ಪ್ರೇಮಿಗಳ ದಿನಕ್ಕೆ 'ಸಿದ್ಲಿಂಗು-2'



ಯೋಗಿ

ಲೂಸ್‌ಮಾದ ಯೋಗಿ, ರಮ್ಯಾ ಜೋಡಿಯಾಗಿ ನಟಿಸಿದ್ದ 'ಸಿದ್ಲಿಂಗು' ಹೊಸ ರೀತಿಯ ನಿರೂಪಣೆಯಿಂದ ಜನಮನ್ನಣೆ ಗಳಿಸಿತ್ತು. ಆ ಸಿನಿಮಾ ತೆರೆಕಂಡು 12 ವರ್ಷಗಳ ಬಳಿಕ ಸೆಟ್ಟೇರಿದ 'ಸಿದ್ಲಿಂಗು-2' ಫೆಬ್ರುವರಿ 14ರಂದು ತೆರೆಗೆ ಬರುತ್ತಿದೆ.

'ತೋತಾಪುರಿ' ಬಳಿಕ ನಿರ್ದೇಶಕ ವಿಜಯ್ ಪ್ರಸಾದ್ 'ಸಿದ್ಲಿಂಗು' ಸೀಕ್ವೆಲ್ ಕಥೆಯನ್ನು ಚಿತ್ರವಾಗಿಸಿದ್ದಾರೆ. 'ಜಮಾಲಿಗುಡ್ಡ' ಚಿತ್ರದ ನಿರ್ಮಾಪಕ ಶ್ರೀಹರಿ ರೆಡ್ಡಿ ನಿಹಾರಿಕಾ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

'ಪ್ರೇಮಕಥೆಯನ್ನು ಹೊಂದಿರುವ ಚಿತ್ರ ಪ್ರೇಮಿಗಳ ದಿನಕ್ಕೆ ಉಡುಗೊರೆ. ಸಿದ್ಲಿಂಗು ಹಾಸ್ಯ, ಸಂಬಂಧಗಳು, ಪ್ರೀತಿ, ಭಾವನೆಗಳಿಂದ ಜನರ ಮೆಚ್ಚುಗೆ ಗಳಿಸಿತ್ತು. ಇಲ್ಲಿ ಬರೀ ಮೀನಿಂಗ್ ಇರಲಿದೆ. ನನ್ನ ಹಿಂದಿನ ಸಿನಿಮಾಗಳಂತೆ ಡಬಲ್ ಮೀನಿಂಗ್ ಇರುವುದಿಲ್ಲ. ಮೈಸೂರು, ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದ್ದು, ಒಂದು ಹಾಡನ್ನು ಜಮ್ಮು–ಕಾಶ್ಮೀರದಲ್ಲಿ ಚಿತ್ರೀಕರಿಸಲಾಗಿದೆ' ಎಂದಿದ್ದಾರೆ ನಿರ್ದೇಶಕ.

'ಕಿರಗೂರಿನ ಗಯ್ಯಾಳಿಗಳು' ಖ್ಯಾತಿಯ ಸೋನುಗೌಡ ನಾಯಕಿ. ಅನೂಪ್ ಸೀಳಿನ್ ಸಂಗೀತ, ಅರಸು ಅಂತಾರೆ ಸಾಹಿತ್ಯ ಚಿತ್ರಕ್ಕಿದೆ. ಪದ್ಮಜಾ ರಾಜ್, ಆಂಟೋನಿ ಕಮಲ್, ಮಹಾಂತೇಶ್ ಸೇರಿದಂತೆ ದೊಡ್ಡ ತಾರಾಗಣವಿದೆ. ❖

ಸಿನಿ ಬಿಟ್ಸ್

'ಶಿವರಾತ್ರಿ'ಗೆ ಬರ್ತಾನೆ 'ರಾಕ್ಷಸ'



ಪ್ರಜ್ವಲ್ ದೇವರಾಜ್

ಚಂದನವನದ 'ಡೈನಾಮಿಕ್ ಪ್ರಿನ್ಸ್' ನಟ ಪ್ರಜ್ವಲ್ ದೇವರಾಜ್ ನಟನೆಯ 'ರಾಕ್ಷಸ' ಸಿನಿಮಾ ಶಿವರಾತ್ರಿಯಂದು ಬಿಡುಗಡೆಯಾಗಲಿದೆ.

'ಮಮ್ಮಿ', 'ದೇವಕಿ' ಸಿನಿಮಾ ಖ್ಯಾತಿಯ ಲೋಹಿತ್ ಈ ಸಿನಿಮಾ ನಿರ್ದೇಶಿಸಿದ್ದಾರೆ. ಈವರೆಗೆ 36ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಪ್ರಜ್ವಲ್, ಇವೆಲ್ಲಕ್ಕಿಂತಲೂ ವಿಭಿನ್ನವಾಗಿ 'ರಾಕ್ಷಸ' ಚಿತ್ರದ ಮೂಲಕ ಪ್ರೇಕ್ಷಕರೆದುರಿಗೆ ಬರಲಿದ್ದಾರೆ. 'ಇದು ಕೇವಲ ಹಾರರ್ ಸಿನಿಮಾ ಅಂದುಕೊಳ್ಳುವುದು ಸಹಜ. ಆದರೆ 'ರಾಕ್ಷಸ'ನಿಗೆ ಭಾವನಾತ್ಮಕ ಕಥೆಯ ಜೊತೆಗೆ ಟೈಮ್ ಲೂಪ್ ಕಾನ್ಸೆಪ್ಟ್‌ನ ಸ್ಪರ್ಶವಿದೆ' ಎಂದಿದೆ ಚಿತ್ರತಂಡ.

ಪ್ರಜ್ವಲ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಶೋಭಾರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್, ಆರ್ನ ರಾಥೋಡ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. 'ರಾಕ್ಷಸ' ಸಿನಿಮಾದ ಶೇ 80ರಷ್ಟು ಚಿತ್ರೀಕರಣ ರಾಮೋಜಿ ಫಿಲಂ ಸಿಟಿಯಲ್ಲಿ ನಡೆದಿರುವುದು ವಿಶೇಷ. ರಾಮೇಶ್ವರಂ, ಗೋವಾ, ಬೆಂಗಳೂರಿನಲ್ಲಿ ಉಳಿದ ಭಾಗದ ಚಿತ್ರೀಕರಣ ನಡೆಸಲಾಗಿದೆ. ಶಾನ್ವಿ ಎಂಟರ್‌ಟೈನ್‌ಮೆಂಟ್‌ನಡಿ ದೀಪು ಬಿ.ಎಸ್ ಈ ಸಿನಿಮಾ ನಿರ್ಮಾಣ ಮಾಡಿದ್ದು, ಜೇಬಿನ್ ಪಿ ಜೋಕಬ್ ಛಾಯಾಚಿತ್ರಗ್ರಹಣ, ವಿನೋದ್ ಸಾಹಸ ನಿರ್ದೇಶನ, ವರುಣ್ ಉನ್ನಿ ಸಂಗೀತ ನಿರ್ದೇಶನವಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5912


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಾಂತಿಯ ಆವರಣ (5)
3.ಮೊದಲನೆಯ ಹಿಂದೂ ಸಂವತ್ಸರ (3)
5.ಸುಂಕವನ್ನು ಹೀಗೂ ಹೇಳುತ್ತಾರೆ (3)
7.ಕಟ್ಟುಪಾಡಿಗೆ ಒಳಪಡದುದು (4)
8. ಯುದ್ಧದಲ್ಲಿ ದೇಹರಕ್ಷಣೆಗೆ ಧರಿಸುವ ಉಕ್ಕಿನ ಅಂಗಿ (5)
11.ಪಣದಲ್ಲಿರುವ ಅಳತೆ (4)
13.ಮುಸಲ್ಮಾನ ಸಂತರ ಗೋರಿಯಿರುವ ಪವಿತ್ರಸ್ಥಳ (3)
16.ಕೋಟೆಯ ಮೇಲಿನ ಕೊತ್ತಳ (3)
17.ಮೃಗಾವಲಿನವನು ಇಲ್ಲಿದ್ದಾನೆ (5)

ಮೇಲಿಂದ ಕೆಳಕ್ಕೆ

1.ಜನ ಕೊನೆಗಿದ್ದಾಗ ಬೀಸಿದ ಬಿರುಗಾಳಿ (4)
2.ಲಡಾಯಿಯಲ್ಲಿ ಸಿಕ್ಕಿರುವ ದಾರದ ಸುರುಳಿ(2)
3.ಮುಖವಿಟ್ಟು ನೋಡಿ! ಪ್ರಧಾನವಾದುದು ಕಾಣುತ್ತದೆ! (3)
4.ನೇರವಲ್ಲದುದು ಇದು (2)
6.ಮೂರೆಳೆಯ ಸರ (3)
7.ಪ್ರಕರಣದಲ್ಲಿ ಸಿಕ್ಕಿದ್ದು ಕೆಲಸ ಮಾಡುವ ಸಲಕರಣೆ (5)
9.ಚಿಕ್ಕಂದಿನಿಂದಲೂ ಮಾಡಿದ ಲಲ್ಲೆ! (3)
10.ಎಚ್ಚರದಿಂದಿರುವವನು (4)
12.ರೀತಿಯೊಡಗೂಡುವ ಜೋಡು ನುಡಿ (3)
14.ಕೆರೆಕಟ್ಟೆಗಳ ನೀರು ಹೋಗುವ ಕಂಡಿ (2)
15.ಆಕಾಶದಲ್ಲಿ ಸಂಚರಿಸುವಂಥದು (2)



5911ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಅಟ್ಟಹಾಸ 4.ಹರಿಹಾಯು
6.ಖನಿ 8.ಗಣಬಿ
10.ತ್ರಿಕೃತಿಪ್ರ 11.ನಂದಾದೀಪ
12.ವಸಂತ 13.ಸೃಷ್ಟಿಕರ್ತ
14.ಶಯ್ಯಾಗೃಹ 15.ಕಷಾಯ 16.ನಖ
18.ನಡೆವೆಣ 20.ರಜತಾದ್ರಿ

ಮೇಲಿಂದ ಕೆಳಕ್ಕೆ:
1.ಝರಿ 3.ಸಖ
5.ಯುಗಪ್ರವರ್ತಕ
7.ನಿರೂಪ 9.ಅನಂತಶಯನ
13.ಸೃಜನ 17.ಖರ
19.ವೆಚ್ಚ

ಸುಡೊಕು 6297

7		4		5				3
	2		1		9	6		5
6		5		3			1	
2					4	1		9
	7	1		8				
4			9		2	3		7
	4		3		7		2	1
						7		
1	3			2			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6296 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 4, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪಂಚಮಿ ಗಂ. 22 02 ನಕ್ಷತ್ರ: ಶತಭಿಷ ಗಂ. 21-24 ಯೋಗ: ಸಿದ್ಧಿ (ಆಸ್ರಿಕ್) ಗಂ. 10-08 ಕರಣ: ಬವ ಗಂ. 10-52, ಧನು ಮಾಸದ 19 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-58 ಸೂರ್ಯಾಸ್ತ : 06-13
ಮುಸ್ಲಿಂ ದಿನಾಂಕ : 03 ರಜಬ್
ಅದೃಷ್ಟ ಸಂಖ್ಯೆ : 3, 7

ಮೇಷ: ಆರಕ್ಷಕರು ಮತ್ತು ರಾಜಕಾರಣಿಗಳಿಂದ ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ. ವಿದೇಶ ವ್ಯವಹಾರಗಳಿಂದ ಲಾಭವನ್ನು ಕಾಣುವಿರಿ.

ವೃಷಭ: ವ್ಯವಹಾರದಲ್ಲಿ ವಿದೇಶಿ ಸಂಪರ್ಕಗಳು ಅಥವಾ ದೊಡ್ಡ ಮಟ್ಟದ ದೇಶೀಯ ವ್ಯವಹಾರಗಳ ಸಂಪರ್ಕಗಳು ಹೆಚ್ಚಲಿವೆ. ಕಮಿಷನ್ ಏಜೆಂಟ್‌ಗಳಿಗೆ ಅಧಿಕ ಆದಾಯ ಉಂಟಾಗುವುದು.

ಮಿಥುನ: ಉದ್ಯೋಗದಲ್ಲಿ ನಿಮ್ಮ ಅಸ್ತಿತ್ವ ಹಾಗೂ ಸ್ಥಾನಮಾನಗಳು ಭದ್ರವಾಗಲಿವೆ. ಹೊಸ ಉದ್ಯೋಗಕ್ಕಾಗಿ ನಡೆಸಿದ ಪ್ರಯತ್ನ ಫಲ ನೀಡಲಿದೆ. ನಟ–ನಟಿಯರು ಮತ್ತು ಸಂಗೀತಗಾರರಿಗೆ ಉತ್ತಮ ದಿನ.

ಕರ್ಕಾಟಕ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ಸಿಗಲಿದೆ. ವಾಕ್ಚಾತುರ್ಯಕ್ಕೆ ಸಾಮಾಜಿಕವಾಗಿ ಗೌರವ ಪ್ರಶಂಸೆಗಳು ದೊರೆಯಲಿವೆ.

ಸಿಂಹ: ಸಹೋದರರ ಸಲಹೆಯನ್ನು ಪಡೆದು ಹಳೆಯ ಯೋಜನೆಗಳಿಗೆ ಮರು ಜೀವ ಕೊಡಲು ನಿಶ್ಚಯಿಸಬಹುದು. ಎತ್ತರದಲ್ಲಿ ಕೆಲಸ ಮಾಡುವವರು ಹಾಗೂ ಸಾಹಸಿ ಪ್ರವೃತ್ತಿ ಇರುವವರು ಜಾಗ್ರತರಾಗಿರಿ.

ಕನ್ಯಾ: ಮಗನ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಡವಿದ ಅನುಭವ ಆಗಲಿದೆ. ಕ್ರಾಂತಿಕಾರಿ ಸ್ವಭಾವವು ಲಾಭವನ್ನು ತರಲಿದೆ. ಬಹಳ ದಿನಗಳಿಂದ ಇದ್ದ ಅಪವಾದಗಳು ದೂರಾಗಲಿವೆ.

ತುಲಾ: ಸೂರ್ಯನಾರಾಯಣನ ಸ್ಮರಣೆ ಮಾಡಿದಲ್ಲಿ ಆರೋಗ್ಯ ವೃದ್ಧಿಯಾಗಿ, ಮೈ ಕೈ ನೋವುಗಳು ಶಮನಗೊಳ್ಳುತ್ತವೆ. ಹರಿತ ವಸ್ತುಗಳನ್ನು ಬಳಸುವ ಕೆಲಸ ಕಾರ್ಯಗಳಲ್ಲಿ ಅಧಿಕ ಗಮನವಿರಲಿ. ಸ್ವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಿರಿ.

ವೃಶ್ಚಿಕ: ದೈನಂದಿನ ಬದುಕನ್ನು ಶಿಸ್ತು ಬದ್ಧ ರೀತಿಯಲ್ಲಿ ನಡೆಸಲು ತೀರ್ಮಾನಿಸುವುದರಿಂದ ಅಭಿವೃದ್ಧಿಯನ್ನು ಹೊಂದುವಿರಿ. ಒದಗಿ ಬರಲಿರುವ ಅವಕಾಶವೊಂದನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ಧನು: ಸರ್ವತೋಮುಖ ಅಭಿವೃದ್ಧಿಗೆ ಸಂಗಾತಿಯ ಸಂಪೂರ್ಣ ಬೆಂಬಲ ಸಿಗಲಿದೆ. ಆಳವಾದ ಅಧ್ಯಯನದಲ್ಲಿ ತೊಡಗಿದವರಿಗೆ ಆಶ್ಚರ್ಯಕರವಾದ ವಿಷಯ ತಿಳಿಯಲಿದೆ. ಗ್ಲಾಸ್‌ಗಳಿಂದ ಗಾಯಗಳಾಗುವ ಲಕ್ಷಣಗಳಿವೆ.

ಮಕರ: ಸ್ನೇಹಿತರ ಕಷ್ಟಗಳಿಗೆ ನೆರವಾಗುವ ಸ್ವಭಾವದಿಂದ ಸಮಸ್ಯೆಗಳನ್ನು ತಲೆ ಮೇಲೆ ಎಳೆದುಕೊಂಡಂತೆ ಆಗಬಹುದು. ಸಹೋದರರಲ್ಲಿ ಅಥವಾ ಮನೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ, ವಾದ ವಿವಾದ, ಕಲಹಗಳು ಇಲ್ಲವಾಗುವುದು.

ಕುಂಭ: ಅನ್ಯರಿಗೆ ಸಲಹೆ ಸೂಚನೆ ಕೊಡುವ ನಿಮಗೆ ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಕಷ್ಟವೆನಿಸಲಿದೆ. ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ.

ಮೀನ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಹಿರಿಯರ ಹೇಳಿಕೆಯಂತೆ ದಿನದ ಅಗತ್ಯಗಳನ್ನು ಪೂರೈಸುವ ಕಡೆಗೆ ಗಮನ ಹರಿಸಿ. ಸಂಗೀತ ಕಲಾವಿದರಿಗೆ ಉತ್ತಮ ವೇದಿಕೆ ಸಿಗುವ ಮುನ್ಸೂಚನೆ ಇದೆ.

ಶನಿವಾರ • ಜನವರಿ 4, 2025 ಪ್ರಜಾವಾಣಿ

ನಿಮ್ಹಾನ್ಸ್ ಸಾಧನೆಗೆ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘನೆ

17 ಲಕ್ಷ ಮಂದಿಗೆ 'ಟೆಲಿ ಮನಸ್' ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ನಾಯಕನಾಗಿ ಹೊರಹೊಮ್ಮಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್), 'ಟೆಲಿ ಮನಸ್' ಸಹಾಯವಾಣಿಯಡಿ ಎರಡು ವರ್ಷಗಳಲ್ಲಿಯೇ 17 ಲಕ್ಷ ಮಂದಿಗೆ ಸೇವೆ ಒದಗಿಸಿದೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಶ್ಲಾಘಿಸಿದರು.

ನಿಮ್ಹಾನ್ಸ್ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮನೋಚಿಕಿತ್ಸಾ ವಿಶೇಷ ವಿಭಾಗ, ಕೇಂದ್ರೀಯ ಪ್ರಯೋಗಾಲಯ ಸಂಕೀರ್ಣ, ಭೀಮಾ ವಸತಿ ನಿಲಯ, 3ಟಿ ಎಂಆರ್‌ಐ ಸ್ಕ್ಯಾನರ್ ಹಾಗೂ ಡಿಎಸ್‌ಎ ಸಿಸ್ಟಮ್ ಉದ್ಘಾಟಿಸಿ ಅವರು ಮಾತನಾಡಿದರು.

'ಸಂಶೋಧನೆ ಮತ್ತು ರೋಗಿಗಳ ಆರೈಕೆಯಲ್ಲಿ ಅಸಾಧಾರಣವಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆ, ಮಾನಸಿಕ ಆರೋಗ್ಯ ಸೇವೆಗೆ ತಂತ್ರಜ್ಞಾನವನ್ನೂ ಸಮರ್ಪಕವಾಗಿ ಬಳಸಿಕೊಂಡಿದೆ. ಟೆಲಿ ಮನಸ್ ಸೇವೆಯಿಂದ ಮಾನಸಿಕ ಅನಾರೋಗ್ಯ ಸಮಸ್ಯೆ ಇರುವವರನ್ನು ತಲುಪಲು ಸಾಧ್ಯವಾಗುತ್ತಿದೆ. ದೇಶದಾದ್ಯಂತ ಲಭ್ಯವಿರುವ ಈ ಸೇವೆಯಡಿ, ಜನರು ತಮ್ಮ ಆಯ್ಕೆಯ ಭಾಷೆಯಲ್ಲಿ ತಜ್ಞರ ಸಮಾಲೋಚನೆಗೆ ಒಳಪಡಬಹುದಾಗಿದೆ. ಮಾನಸಿಕ ಕಾಯಿಲೆಗಳ ಬಗೆಗಿನ ಕಳಂಕಗಳೂ ದೂರವಾಗಿ, ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಮೂಡುತ್ತಿರುವುದು ಉತ್ತಮ ಬೆಳವಣಿಗೆ' ಎಂದರು.

'ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪದವಿ ವಿದ್ಯಾರ್ಥಿಗಳಲ್ಲಿ ಶೇ 79.7ರಷ್ಟು ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲಿ ಶೇ 61.4ರಷ್ಟು ಮಂದಿ ಯುವತಿಯರಾಗಿದ್ದಾರೆ. ವೈದ್ಯಕೀಯ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚುತ್ತಿರುವುದು ಸಕಾರಾತ್ಮಕ ಬೆಳವಣಿಗೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರೋಗಿಗಳ ಸಂಖ್ಯೆ ಹೆಚ್ಚಳ: ನಿಮ್ಹಾನ್ಸ್ ಅಧ್ಯಕ್ಷರೂ ಆಗಿರುವ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಮಾತನಾಡಿ, 'ನಿಮ್ಹಾನ್ಸ್ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸುತ್ತಿರುವುದರಿಂದ ರೋಗಿಗಳ ಸಂಖ್ಯೆ ಐದು ಪಟ್ಟು ಹೆಚ್ಚಾಗಿದೆ. 1970ರ ದಶಕದಲ್ಲಿ ರೋಗಿಗಳ ಸಂಖ್ಯೆ 10 ಲಕ್ಷಕ್ಕಿಂತ ಕಡಿಮೆಯಿತ್ತು. ಕಳೆದ ದಶಕದಲ್ಲಿ ಈ ಸಂಖ್ಯೆ 50 ಲಕ್ಷಕ್ಕೂ ಹೆಚ್ಚಾಗಿದೆ. 'ಟೆಲಿಮನಸ್' ಮೂಲಕ ಮಾನಸಿಕ ಆರೋಗ್ಯ ಸೇವೆ ಒದಗಿಸುತ್ತಿದ್ದು, ಸಂಸ್ಥೆಯಲ್ಲಿ ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಈ ಸೇವೆಗೆ ತರಬೇತಿ ನೀಡಲಾಗುತ್ತಿದೆ. ಸಂಸ್ಥೆಯು ಮುಂದಿನ 25 ವರ್ಷಗಳಿಗೆ ನೀಲನಕ್ಷೆ ರೂಪಿಸಿಕೊಳ್ಳಬೇಕು' ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, ಸಂಸದರಾದ ಪಿ.ಸಿ. ಮೋಹನ್, ತೇಜಸ್ವಿ ಸೂರ್ಯ, ಡಾ.ಸಿ.ಎನ್. ಮಂಜುನಾಥ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಸಂಸ್ಥೆ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಉಪಸ್ಥಿತರಿದ್ದರು.



ಸುವರ್ಣ ಮಹೋತ್ಸವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಜೆ.ಪಿ. ನಡ್ಡಾ ಗೌರವಿಸಿದರು. ಸಿದ್ದರಾಮಯ್ಯ ಹಾಗೂ ಡಾ. ಪ್ರತಿಮಾ ಮೂರ್ತಿ ಉಪಸ್ಥಿತರಿದ್ದರು

ನಿಮ್ಹಾನ್ಸ್‌ಗೆ ಅಗತ್ಯ ನೆರವು: ಮುಖ್ಯಮಂತ್ರಿ

'ನಿಮ್ಹಾನ್ಸ್ ಕಳೆದ ಐದು ದಶಕಗಳಲ್ಲಿ ದೇಶದ ಮಾನಸಿಕ ಆರೋಗ್ಯ ಹಾಗೂ ನರ ವಿಜ್ಞಾನ ಕ್ಷೇತ್ರದಲ್ಲಿ ಅಸಾಧಾರಣ ಕೊಡುಗೆ ನೀಡುತ್ತಾ ಬಂದಿದ್ದು, ದೇಶದ ಪ್ರಮುಖ ಸಂಸ್ಥೆಯಾಗಿ ತನ್ನ ಛಾಪು ಮೂಡಿಸಿದೆ. ಸಂಸ್ಥೆಯ ಮೂಲಸೌಕರ್ಯ ಅಭಿವೃದ್ಧಿ, ಸಂಶೋಧನೆ ಹಾಗೂ ತರಬೇತಿ ಕಾರ್ಯಕ್ರಮಗಳಿಗೆ ನೆರವು ನೀಡಲು ರಾಜ್ಯ ಸರ್ಕಾರ ಬದ್ಧವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಮಾನಸಿಕ ಆರೋಗ್ಯದ ಆರೈಕೆ ಜತೆಗೆ ರೋಗದ ಕುರಿತಾಗಿ ಸಾಮಾನ್ಯವಾಗಿ ಅಂಟಿಕೊಳ್ಳುವ ಸಮಾಜದ ನಕಾರಾತ್ಮಕ ದೃಷ್ಟಿಕೋನವನ್ನು ನಿವಾರಿಸುವಲ್ಲಿ ನಿಮ್ಹಾನ್ಸ್ ಬಹುತೇಕ ಯಶಸ್ವಿಯಾಗಿದೆ. ರಾಜ್ಯ ಸರ್ಕಾರವು ಮಾನಸಿಕ ಆರೋಗ್ಯ ಸೇವೆ ಒದಗಿಸಲು ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ನಿಮ್ಹಾನ್ಸ್ ಸಂಸ್ಥೆಯ ಕಾರ್ಯನಿರ್ವಹಣೆಗಾಗಿ ಪ್ರತಿವರ್ಷ ₹137 ಕೋಟಿ ಒದಗಿಸಿ ಸರ್ಕಾರ ತನ್ನ ಬದ್ಧತೆಯನ್ನು ನಿರೂಪಿಸಿದೆ' ಎಂದರು.

ಸುದ್ದಿ 2 ನಿಮಿಷ

ಗ್ರಂಥಾಲಯದಲ್ಲೇ ಆಕಾಶಕಾಯ ಕಲಿಕೆ

ಬೆಂಗಳೂರು: ಗ್ರಾಮ ಪಂಚಾಯತಿ ಗ್ರಂಥಾಲಯ ಅರಿವು ಕೇಂದ್ರಗಳ ಮೂಲಕ ವಿದ್ಯಾರ್ಥಿಗಳಿಗೆ ಆಕಾಶಕಾಯಗಳ ಬಗ್ಗೆ ಮಾಹಿತಿ ನೀಡಲು ಖಗೋಳ ಭೌತಶಾಸ್ತ್ರ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ಈ ಕುರಿತು ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆಯ ನಿರ್ದೇಶಕಿ ಅನ್ನಪೂರ್ಣಿ ಸುಬ್ರಮಣ್ಯಂ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಆಯುಕ್ತೆ ಅರುಂಧತಿ ಚಂದ್ರಶೇಖರ್ ಈ ಕುರಿತ ಒಡಂಬಡಿಕೆಗೆ ಸಹಿ ಹಾಕಿದ್ದಾರೆ.

ಮಾಹಿತಿ ನೀಡಿರುವ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಇಲಾಖೆ ರಾಜ್ಯದಲ್ಲಿ 6 ಸಾವಿರ ಅರಿವು ಕೇಂದ್ರಗಳನ್ನು ನಿರ್ವಹಿಸುತ್ತಿದೆ. ಖಗೋಳ ಭೌತಶಾಸ್ತ್ರ ಸಂಸ್ಥೆ ಜತೆ ಮಾಡಿಕೊಂಡಿರುವ ಒಪ್ಪಂದದಂತೆ ವಿಜ್ಞಾನ ಸಾಕ್ಷರತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸಲು ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಮೇಲ್ವಿಚಾರಕರಿಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಾಗುವುದು. ಕನ್ನಡದಲ್ಲಿ ಖಗೋಳ ಸಂಪನ್ಮೂಲಗಳ ರಚನೆ ಮತ್ತು ಆಕಾಶಕಾಯಗಳ ಘಟನೆಗಳ ಸುತ್ತ ಸಾರ್ವಜನಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದಿದ್ದಾರೆ.

ತನಿಖೆ ಆರಂಭಿಸಿದ ಸಿಐಡಿ



ಬೀದರ್: ಸಿಐಡಿ ಡಿವೈಎಸ್ಪಿ ಸುಲೇಮಾನ್ ತಹಶೀಲ್ದಾರ್ ನೇತೃತ್ವದ ತಂಡ ಶುಕ್ರವಾರ ನಗರಕ್ಕೆ ಆಗಮಿಸಿದ್ದು, ಗುತ್ತಿಗೆದಾರ ಸಚಿನ್ ಪಾಂಚಾಳ್ ಆತ್ಮಹತ್ಯೆ ಪ್ರಕರಣದ ತನಿಖೆ ಆರಂಭಿಸಿದೆ.

ಸಿಐಡಿ ಅಧಿಕಾರಿಗಳು, ಎಸ್‌.ಪಿ ಪ್ರದೀಪ್ ಗುಂಟಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ಜೊತೆ ಚರ್ಚಿಸಿ, ಮಾಹಿತಿ ಪಡೆದರು.

ಫೇಸ್‌ಬುಕ್‌ನಲ್ಲಿ ಸಚಿನ್ ಪಾಂಚಾಳ್ ಮರಣ ಪತ್ರ ಅಪ್‌ಲೋಡ್ ಮಾಡಿದ್ದನ್ನು ಗಮನಿಸಿ ಅವರ ಕುಟುಂಬದ ಸದಸ್ಯರು ಠಾಣೆಗೆ ಬಂದಾಗ ಪೊಲೀಸರೇಕೆ ದೂರು ಸ್ವೀಕರಿಸಲಿಲ್ಲ ಎಂದು ಸಿಐಡಿ ಅಧಿಕಾರಿಗಳು ವಿಚಾರಿಸಿದರು ಎಂದು ಗೊತ್ತಾಗಿದೆ.

ಬಳಿಕ ಬೀದರ್ ರೈಲ್ವೆ ಪೊಲೀಸ್ ಠಾಣೆಗೆ ಭೇಟಿ ನೀಡಿ ಮಾಹಿತಿ ಪಡೆದರು. ಸಚಿನ್ ಆತ್ಮಹತ್ಯೆ ಮಾಡಿಕೊಂಡಿದ್ದ ಸ್ಥಳಕ್ಕೆ ಭೇಟಿ ನೀಡಿ ಮಹಜರು ಮಾಡಿದರು. ಸಚಿನ್ ಹುಟ್ಟೂರು ಭಾಲ್ಕಿ ತಾಲ್ಲೂಕಿನ ಕಟ್ಟಿತೂಗಾಂವ್ ಗ್ರಾಮಕ್ಕೆ ತೆರಳಿ ಕುಟುಂಬದ ಸದಸ್ಯರಿಂದಲೂ ವಿವರ ಪಡೆದರು.

'ಆಪರೇಷನ್ ಹಸ್ತ'ಕ್ಕೆ ಕೆಲವರ ಯತ್ನ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೆಡಿಎಸ್ ಶಾಸಕರನ್ನು ಕಾಂಗ್ರೆಸ್‌ನತ್ತ ಸೆಳೆಯಲು ಆಪರೇಷನ್ ಹಸ್ತ ನಡೆಯುತ್ತಿದೆ. ಬಲಿಯಾಗಲು ಜೆಡಿಎಸ್ ದುರ್ಬಲ ಪಕ್ಷವಲ್ಲ'. ಪಕ್ಷದ ಶಾಸಕರಿಗೆ ಅಂತಹ ಗತಿ ಬಂದಿಲ್ಲ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.


ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜೆಡಿಎಸ್ ಮುಗಿಸಲು 12–13 ಶಾಸಕರನ್ನು ಕರೆದುಕೊಂಡು ಹೋಗಲು ಷಡ್ಯಂತ್ರ ರೂಪಿಸಿದ್ದಾರೆ' ಎಂದು ದೂರಿದರು.

'ಜೆಡಿಎಸ್ ಒಡೆಯುವ ಕಾಂಗ್ರೆಸ್‌ನ ಈ ಆಟ ಬಹಳ ದಿನ ನಡೆಯುವುದಿಲ್ಲ. ಅವರಿಗೆ ದೇವರೇ ಶಿಕ್ಷೆ ನೀಡುತ್ತಾನೆ' ಎಂದರು.

ಯತ್ನಾಳ ಬಣದ ವಿರುದ್ಧ ನಡ್ಡಾಗೆ ದೂರು

ಪ್ರಜಾವಾಣಿ ವಾರ್ತೆ


ಜೆ.ಪಿ.ನಡ್ಡಾ


ವಿಜಯೇಂದ್ರ

ಬೆಂಗಳೂರು: 'ರಾಜ್ಯ ಸರ್ಕಾರ ಸರಣಿ ಹಗರಣಗಳಲ್ಲಿ ಮುಳುಗಿದೆ. ದುರಾಡಳಿತದಿಂದ ಕೆಟ್ಟ ಹೆಸರು ಪಡೆದಿದೆ. ಈ ಸಂದರ್ಭದಲ್ಲಿ ಸರ್ಕಾರದ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ನಾಯಕರಿಗೆ ಸೂಚಿಸಿದ್ದಾರೆ.

ಶುಕ್ರವಾರ ಸಂಜೆ ಕುಮಾರಕೃಪಾ ಅತಿಥಿಗೃಹದಲ್ಲಿ ರಾಜ್ಯ ನಾಯಕರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಆದರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಗುರುವಾರ ರಾತ್ರಿಯೇ ನಿಮ್ಹಾನ್ಸ್ ಅತಿಥಿ ಗೃಹದಲ್ಲಿ ನಡ್ಡಾ ಜತೆ ಸುಮಾರು ಒಂದು ತಾಸು ಮಾತುಕತೆ ನಡೆಸಿದರು.

ವಿಜಯೇಂದ್ರ ಅವರು ತಮ್ಮ ಭೇಟಿಯ ಸಂದರ್ಭದಲ್ಲಿ, ಭಿನ್ನಮತೀಯರ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ, ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ದೂರಿರುವುದಾಗಿ ಮೂಲಗಳು ತಿಳಿಸಿವೆ.

ಭಿನ್ನಮತೀಯರ ನಾಯಕ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಪಕ್ಷ ಕೈಗೊಳ್ಳುವ ಹೋರಾಟಕ್ಕೆ ಪರ್ಯಾಯವಾಗಿ ಹೋರಾಟ ರೂಪಿಸುತ್ತಿದ್ದಾರೆ. ತಮ್ಮ ಮತ್ತು ತಮ್ಮ ತಂದೆಯ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಇದರಿಂದ ಪಕ್ಷ ಮುಜುಗರಕ್ಕೆ ಒಳಗಾಗುತ್ತಿದೆ ಎಂಬುದನ್ನು ವಿಜಯೇಂದ್ರ ಅವರು ನಡ್ಡಾ ಅವರ ಗಮನಕ್ಕೆ ತಂದರು.

'ದೆಹಲಿ ಭೇಟಿಯ ಸಂದರ್ಭದಲ್ಲಿ ಹೆಚ್ಚು ಮಾತುಕತೆಗೆ ಅವಕಾಶ ಸಿಗದ ಕಾರಣ, ವಿವರಗಳನ್ನು ನೀಡಲು ಸಾಧ್ಯವಾಗುತ್ತಿರಲಿಲ್ಲ. ಗುರುವಾರ ರಾತ್ರಿ ಇಬ್ಬರೇ ಬಹಳ ಹೊತ್ತು ಚರ್ಚಿಸಿದರು. ಎಲ್ಲ ಮಾಹಿತಿ ನೀಡಿದ್ದಾರೆ' ಎಂದು ವಿಜಯೇಂದ್ರ ಅವರ ಆಪ್ತ ಮೂಲಗಳು ಹೇಳಿವೆ.

ಕಾಂಗ್ರೆಸ್ ವಿರುದ್ಧ ದೂರು: 'ಬಿಜೆಪಿ ಕಾರ್ಯಕರ್ತರು ಮತ್ತು ನಾಯಕರ ವಿರುದ್ಧ ಕಾಂಗ್ರೆಸ್ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ. ಅನಗತ್ಯ ಕಿರುಕುಳ ನೀಡುತ್ತಿದೆ. ಸರ್ಕಾರದ ಹಗರಣಗಳು ಮತ್ತು ಸರ್ಕಾರಿ ಅಧಿಕಾರಿಗಳ ಸರಣಿ ಆತ್ಮಹತ್ಯೆ ಸೇರಿದಂತೆ ಯಾವುದೇ ವಿಷಯ ಪ್ರಸ್ತಾಪಿಸಲು ಹೋದಾಗ ಸರ್ಕಾರ ಸೇಡಿನಿಂದ ವರ್ತಿಸುತ್ತಿದೆ' ಎಂದು ಆರ್. ಅಶೋಕ ಮತ್ತು ಛಲವಾದಿ ನಾರಾಯಣಸ್ವಾಮಿ ನಡ್ಡಾ ಅವರಿಗೆ ವಿವರಿಸಿದರು.

ನಡ್ಡಾ ಭೇಟಿಗೆ ಬಾರದ ಯತ್ನಾಳ ಬಣ

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಲು ಬಸನಗೌಡ ಪಾಟೀಲ ಯತ್ನಾಳ ಬಣದ ಯಾವುದೇ ನಾಯಕರು ಕುಮಾರಕೃಪಾದತ್ತ ಸುಳಿಯಲಿಲ್ಲ.

ಸರ್ಕಾರಿ ಕಾರ್ಯಕ್ರಮದ ನಿಮಿತ್ತ ನಗರಕ್ಕೆ ಬಂದಿದ್ದ ನಡ್ಡಾ ಅವರು ಶುಕ್ರವಾರ ಸಂಜೆ ಪಕ್ಷದ ನಾಯಕರ ಭೇಟಿಗೆ ಒಂದೂವರೆ ತಾಸು ಮೀಸಲಿಟ್ಟಿದ್ದರು. ಆದರೆ, ಯತ್ನಾಳ ನೇತೃತ್ವದ ಬಣದ ಯಾವುದೇ ನಾಯಕರು ಅವರನ್ನು ಭೇಟಿಯಾಗದೇ ಅಂತರ ಕಾಯ್ದುಕೊಂಡರು.

'ಕಾಂಗ್ರೆಸ್‌ನ ದಬ್ಬಾಳಿಕೆ, ದ್ವೇಷದ ರಾಜಕಾರಣಕ್ಕೆ ಹೆದರಬೇಕಾಗಿಲ್ಲ. ಒಗ್ಗಟ್ಟಿನಿಂದ ಹೋರಾಟ ಮಾಡಿ, ನಿರಂತರವಾಗಿ ಜನರ ಪರ ವಿಷಯಗಳನ್ನು ಪ್ರಸ್ತಾಪಿಸುತ್ತಲೇ ಇರಿ' ಎಂದು ನಡ್ಡಾ ಸಲಹೆ ನೀಡಿದರು.

ನಡ್ಡಾ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಛಲವಾದಿ ನಾರಾಯಣಸ್ವಾಮಿ, 'ಕಾಂಗ್ರೆಸ್ ಸರ್ಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದರ ಮಾಹಿತಿ ಕೊಟ್ಟಿದ್ದೇವೆ. ಸಂಘಟನೆಯ ಬಗ್ಗೆ ಕೇಳಿದ್ದು, ಎಲ್ಲವನ್ನೂ ಹೇಳಿದ್ದೇವೆ' ಎಂದು ಹೇಳಿದರು.

ಸಂಸದರಾದ ಗೋವಿಂದ ಕಾರಜೋಳ, ತೇಜಸ್ವಿ ಸೂರ್ಯ, ಲಹರ್ ಸಿಂಗ್ ಸಿರೋಯ, ವಿಧಾನಪರಿಷತ್ ಸದಸ್ಯ ಎನ್‌.ರವಿಕುಮಾರ್, ಶಾಸಕರಾದ ಡಾ. ಸಿ. ಎನ್. ಅಶ್ವತ್ಥನಾರಾಯಣ, ಮುನಿರತ್ನ ಅವರು ನಡ್ಡಾ ಅವರನ್ನು ಭೇಟಿ ಮಾಡಿದರು.

'ಒದ್ದು ಅಧಿಕಾರ ಕಿತ್ತುಕೊಳ್ಳುವ ಸಮಯ ಬಂದಿದೆ'

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಅವರೇ, ಒದ್ದು ಅಧಿಕಾರವನ್ನು ಕಿತ್ತುಕೊಳ್ಳುತ್ತೇನೆ ಎಂದು ಸದನದಲ್ಲಿ ಅಬ್ಬರಿಸಿದ್ದೀರಿ. ಅದನ್ನು ಕಾರ್ಯಗತ ಮಾಡುವ ಸಮಯ ಈಗ ಬಂದಿದೆ' ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಹೇಳಿದ್ದಾರೆ.

'ಶಿವಕುಮಾರ್ ವಿದೇಶ ಪ್ರವಾಸಕ್ಕೆ ಹೋಗುವುದನ್ನೇ ಕಾಯುತ್ತಿದ್ದ ಸಿ.ಎಂ ಸಿದ್ದರಾಮಯ್ಯ ಬಣ ಇತ್ತ ಸತೀಶ್ ಜಾರಕಿಹೊಳಿ ನಿವಾಸದಲ್ಲಿ ಸಭೆ ನಡೆಸಿ ಶಕ್ತಿ ಪ್ರದರ್ಶಿಸಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ನಿಮ್ಮ ಅಬ್ಬರ ಏನಿದ್ದರೂ ಮಾಧ್ಯಮಗಳ ಮುಂದೆ ಮಾತ್ರವೇ? ಹೀಗೆ ಮುಂದುವರಿದರೆ ತಮ್ಮ ಕನಸು ಕನಸಾಗಿಯೇ ಉಳಿಯುವುದು ಗ್ಯಾರಂಟಿ' ಎಂದು ಕಾಲೆಳೆದಿದ್ದಾರೆ.

ಐಶ್ವರ್ಯಗೌಡ ಪ್ರಕರಣದಲ್ಲಿ ಅನಿತಾ, ನಿಖಿಲ್ ಹೆಸರು ಉಲ್ಲೇಖಕ್ಕೆ ಆಕ್ಷೇಪ

'ಅನಗತ್ಯವಾಗಿ ಕುಟುಂಬಸ್ಥರ ಪ್ರಸ್ತಾಪ'

ಪ್ರಜಾವಾಣಿ ವಾರ್ತೆ


ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: ಐಶ್ವರ್ಯಗೌಡ ಚಿನ್ನಾಭರಣ ವಂಚನೆ ಮಾಡಿದ ಪ್ರಕರಣದಲ್ಲಿ ಅನಿತಾ ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರ ಹೆಸರು ತಳಕುಹಾಕಿಕೊಂಡಿದೆ ಎಂಬುದನ್ನು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಸ್ವತಃ ಪ್ರಸ್ತಾಪಿಸಿದ್ದು, ತಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದು ಆರೋಪಿಸಿದರು.

ಸುದ್ದಿಗಾರರ ಜತೆ ನಗರದಲ್ಲಿ ಶುಕ್ರವಾರ ಮಾತನಾಡಿದ ಅವರು, 'ಐಶ್ವರ್ಯ ಎಂಬ ಮಹಿಳೆ ಚಿನ್ನ ವಂಚಿಸಿದ ಪ್ರಕರಣದಲ್ಲಿ ನನ್ನ ಪತ್ನಿ ಮತ್ತು ಮಗನ ಹೆಸರು ತಳಕು ಹಾಕಿಕೊಂಡಿದೆ. ಅವರು ಪರಸ್ಪರ ಭೇಟಿ ಮಾಡಿದ್ದರು ಎಂದು ಕೆಲ ಮಾಧ್ಯಮಗಳು ವರದಿ ಮಾಡಿವೆ. ವರದಿಗಳನ್ನು ನೋಡಿದ ನಂತರವೇ ಮಾಹಿತಿ ತರಿಸಿಕೊಂಡು ಪರಿಶೀಲಿಸಿದೆ' ಎಂದರು.

'ಈ ಪ್ರಕರಣದಲ್ಲಿ ಅನಗತ್ಯವಾಗಿ ನನ್ನ ಕುಟುಂಬದವರ ಹೆಸರನ್ನು ಎಳೆದು ತರುತ್ತಿದ್ದು, ಷಡ್ಯಂತ್ರ ರೂಪಿಸಿದ್ದಾರೆ. ಯಾರು ಇದನ್ನೆಲ್ಲಾ ಮಾಡಿಸುತ್ತಿದ್ದಾರೆ ಮತ್ತು ಏತಕ್ಕಾಗಿ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಆದರೆ ಅವರಿಂದ ಏನು ಮಾಡಲೂ ಸಾಧ್ಯವಿಲ್ಲ' ಎಂದು ಹೇಳಿದರು.

'ಇದು 2016–2019ರ ನಡುವೆ ನಡೆದ ಪ್ರಕರಣ. ಆ ಹೊತ್ತಿನಲ್ಲಿ ಅನಿತಾ ಮತ್ತು ನಿಖಿಲ್ ಅವರನ್ನು ಆ ಮಹಿಳೆ ಭೇಟಿ ಮಾಡಿದ್ದಾರೆ ಎನ್ನಲಾಗಿದೆ. ಈ ಇಬ್ಬರನ್ನು ಐಶ್ವರ್ಯ ಎಲ್ಲಿ ಮತ್ತು ಯಾವಾಗ ಭೇಟಿ ಮಾಡಿದರು ಎಂಬುದು ಗೊತ್ತಿದ್ದರೆ ಅದನ್ನು ಬಹಿರಂಗಪಡಿಸಲಿ. ಅಸಲಿಗೆ ನಮ್ಮ ಮನೆಯವರಿಗೆ ಐಶ್ವರ್ಯ ಮುಖವೇ ಗೊತ್ತಿಲ್ಲ' ಎಂದರು.

'ಆ ಮಹಿಳೆಯಿಂದ ವಂಚನೆಗೆ ಒಳಗಾದವರು ಈಗ ದೂರು ನೀಡಿದ್ದಾರೆ. 2016ರಲ್ಲಿ ನಡೆದ ವಂಚನೆಗೆ 2024ರಲ್ಲಿ ದೂರು ನೀಡಿರುವುದು ಸಹಜವೆಂಬಂತೆ ಕಾಣುತ್ತಿಲ್ಲ. ಮೊದಲೇ ದೂರು ಕೊಡಬಹುದಿತ್ತಲ್ಲವೇ? 2018ರಲ್ಲಿ ನಾನೇ ಮುಖ್ಯಮಂತ್ರಿಯಾಗಿದ್ದೆ. ಆಗಲೂ ದೂರು ನೀಡಬಹುದಿತ್ತು. ಆದರೆ ದುರುದ್ದೇಶದಿಂದ ಈಗ ಯಾರು ದೂರು ಕೊಡಿಸಿದ್ದಾರೆ ಎಂಬುದು ಗೊತ್ತಾಗಿದೆ' ಎಂದು ಹೇಳಿದರು.

'ನಾನು ₹50 ಕೋಟಿ ಕೇಳಿದೆ ಎಂದು ನನ್ನ ಮೇಲೂ ದೂರು ನೀಡಿದ್ದರು. ಈಗ ಕುಟುಂಬದವರನ್ನು ಎಳೆದು ತರುತ್ತಿದ್ದಾರೆ. ಸಂಕ್ರಾಂತಿ ಕಳೆಯಲಿ. ಈ ಎಲ್ಲ ವಿಷಯಗಳ ಬಗ್ಗೆ ಮಾತನಾಡುತ್ತೇನೆ' ಎಂದರು.

ಔತಣಕೂಟ ರಾಜಕೀಯಕ್ಕೆ ಅಲ್ಲ: ಸತೀಶ

ಪ್ರಜಾವಾಣಿ ವಾರ್ತೆ


ಸತೀಶ ಜಾರಕಿಹೊಳಿ

ಬೆಳಗಾವಿ: 'ನಾವು ಔತಣಕೂಟ ನಡೆಸಿದ್ದು ಇದೇ ಮೊದಲೇನಲ್ಲ. ಕಳೆದ 20 ತಿಂಗಳಲ್ಲಿ 10 ಸಲ ಸೇರಿ ಚರ್ಚಿಸಿದ್ದೇವೆ. ಹೀಗಿರುವಾಗ ಈ ಸಭೆಗೆ ಮಹತ್ವ ನೀಡಬೇಕಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಬೆಂಗಳೂರಿನಲ್ಲಿರುವ ತಮ್ಮ ನಿವಾಸದಲ್ಲಿ ಗುರುವಾರ ರಾತ್ರಿ ನಡೆದ ಔತಣಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಲವು ಸಚಿವರು, ಶಾಸಕರು ಭಾಗಿಯಾದ ಕುರಿತ ಪ್ರಶ್ನೆಗೆ, ಇಲ್ಲಿ ಶುಕ್ರವಾರ ಸುದ್ದಿಗಾರರಿಗೆ ಹೀಗೆ ಪ್ರತಿಕ್ರಿಯಿಸಿದರು.

'ಮುಖ್ಯಮಂತ್ರಿ ನಮ್ಮ ಮನೆಗೆ ಬರುವುದು ಮತ್ತು ನಾವು ಅವರ ಮನೆಗೆ ಹೋಗುವುದು ಹೊಸತಲ್ಲ. ಮುಖ್ಯಮಂತ್ರಿ ಜೊತೆಗೆ ಎಲ್ಲ ಸಚಿವರು ಮಾತನಾಡಲು ಬಯಸಿದ್ದರು. ಅದಕ್ಕೆ ಹೊಸ ವರ್ಷದ ಸಂದರ್ಭದಲ್ಲಿ ಸೇರಿದ್ದೆವು. ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸುಧಾರಿಸಿ, 2028ರ ವಿಧಾನಸಭೆ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರುವ ವಿಷಯ ಚರ್ಚಿಸಲಾಗಿದೆಯೇ ಹೊರತು; ಸಂಪುಟ ಪುನರ್‌ರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಕುರಿತು ಚರ್ಚಿಸಿಲ್ಲ' ಎಂದರು.

'ಸಭೆಯಲ್ಲಿ ಅಹಿಂದ ನಾಯಕರಷ್ಟೇ ಸೇರಿದ್ದೇಕೆ' ಎಂಬ ಪ್ರಶ್ನೆಗೆ, 'ತುರ್ತಾಗಿ ಸಭೆ ನಿಗದಿಯಾಯಿತು. ಅದಕ್ಕೆ ತ್ವರಿತವಾಗಿ ಲಭ್ಯವಿರುವ ಕೆಲವರು ಸೇರಿದೆವು. ಪ್ರವಾಸ ಮತ್ತಿತರ ಕಾರಣಕ್ಕೆ ಕೆಲವರಿಗೆ ಹಾಜರಾಗಲು ಸಾಧ್ಯವಾಗಲಿಲ್ಲ' ಎಂದರು.

ಸಂಪುಟ ಪುನರ್‌ರಚನೆ ವಿಷಯಕ್ಕೆ ಪ್ರತಿಕ್ರಿಯಿಸಿದ ಅವರು, 'ಅನೇಕ ನಾಯಕರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಈ ಬಗ್ಗೆ ಪಕ್ಷದ ಹೈಕಮಾಂಡ್, ಕೆಪಿಸಿಸಿ ಅಧ್ಯಕ್ಷರು ಮತ್ತು ಮುಖ್ಯಮಂತ್ರಿ ನಿರ್ಧರಿಸುತ್ತಾರೆ' ಎಂದರು.

'ಆಂತರಿಕ ಕಲಹದಿಂದ ಸರ್ಕಾರ ಪತನ'


ಜಗದೀಶ ಶೆಟ್ಟರ್

ಬೆಳಗಾವಿ: 'ರಾಜ್ಯದಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಮಧ್ಯೆ ಆಂತರಿಕ ತಿಕ್ಕಾಟ ಶುರು ಆಗಿದೆ. ಯಾವುದೇ ಹಂತದಲ್ಲಿ ಅಸಮಾಧಾನ ಸ್ಫೋಟವಾಗಿ ಸರ್ಕಾರ ಪತನವಾಗಬಹುದು' ಎಂದು ಸಂಸದ ಜಗದೀಶ ಶೆಟ್ಟರ್ ಹೇಳಿದರು.

ಬೆಂಗಳೂರಿನಲ್ಲಿರುವ ಸಚಿವ ಸತೀಶ ಜಾರಕಿಹೊಳಿ ನಿವಾಸದಲ್ಲಿ ಗುರುವಾರ ರಾತ್ರಿ ಔತಣಕೂಟ ನಡೆದಿರುವ ಕುರಿತು, ಇಲ್ಲಿ ಶುಕ್ರವಾರ ಸುದ್ದಿಗಾರರಿಗೆ ಅವರು ಹೀಗೆ ಪ್ರತಿಕ್ರಿಯಿಸಿದರು.

'ಈ ಆಂತರಿಕ ತಿಕ್ಕಾಟ ಇಂದು ಅಥವಾ ನಾಳೆ ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ ಎಂದು ಮೊದಲೇ ಹೇಳಿದ್ದೆ. ಈಗ ಡಿ.ಕೆ.ಶಿವಕುಮಾರ್ ವಿದೇಶ ಪ್ರವಾಸಕ್ಕೆ ಹೋದಾಗ, ಸತೀಶ ಜಾರಕಿಹೊಳಿ ಮನೆಗೆ ಸಿದ್ದರಾಮಯ್ಯ ಹೋಗಿದ್ದಾರೆ. ಕೆಪಿಸಿಸಿ ಅಧ್ಯಕ್ಷರು ಬದಲಾಗಬೇಕೆಂದು ಸತೀಶ ಹೇಳಿದ್ದಾರೆ. ಅವರು ಹೇಳಿಕೆ ಕೊಡುವುದು, ಔತಣಕೂಟ ಆಯೋಜಿಸುವುದು, ಅದಕ್ಕೆ ಉಪಮುಖ್ಯಮಂತ್ರಿ ಗೈರು ಆಗುವುದು ಗಮನಿಸಿದರೆ, ರಾಜ್ಯ ಸರ್ಕಾರ ಉತ್ತಮ ರೀತಿ ನಡೆಯುತ್ತಿಲ್ಲ ಎಂಬುದು ಸಾಬೀತಾಗುತ್ತದೆ' ಎಂದರು.

'ಬಹುಮತ ಇದೆ ಎಂಬ ಕಾರಣಕ್ಕೆ ಕಾಂಗ್ರೆಸ್ ಸರ್ಕಾರ ಹೇಗೋ ನಡೆದಿದೆ. ಆದರೆ, ಸ್ವತಃ ಕಾಂಗ್ರೆಸ್‌ನ ಶಾಸಕರಿಗೆ ಸರ್ಕಾರದ ವಿರುದ್ಧ ಅಸಮಾಧಾನವಿದೆ. ಅಭಿವೃದ್ಧಿ ಕೆಲಸಗಳು ನಿಂತಿವೆ. ಹತ್ತಾರು ಸಾವಿರ ಕೋಟಿ ರೂಪಾಯಿ ಬಿಲ್ ಪಾವತಿಯಾಗದೆ ಗುತ್ತಿಗೆದಾರರು ಒತ್ತಡದಲ್ಲಿದ್ದಾರೆ' ಎಂದರು.

ರಾಜ್ಯ ಸರ್ಕಾರದಲ್ಲಿ ಎಲ್ಲವೂ ಸರಿಯಿಲ್ಲ. ಉಪಮುಖ್ಯಮಂತ್ರಿಯನ್ನು ಬಿಟ್ಟು ಎಲ್ಲ ಸಚಿವರ ಜೊತೆ ಮುಖ್ಯಮಂತ್ರಿ ಔತಣಕೂಟ ನಡೆಸಿದ್ದಾರೆ. ಕಾಂಗ್ರೆಸ್ ನಾಯಕರು ಅಧಿಕಾರಕ್ಕಾಗಿ ಕೀಳು ಮಟ್ಟಕ್ಕೆ ಹೋಗಲು ಹಿಂಜರಿಯಲ್ಲ.
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಲೈಂಗಿಕ ದೌರ್ಜನ್ಯ: ಡಿವೈಎಸ್‌ಪಿ ಬಂಧನ

ಪ್ರಜಾವಾಣಿ ವಾರ್ತೆ


ರಾಮಚಂದ್ರಪ್ಪ

ತುಮಕೂರು: ಕಚೇರಿಯಲ್ಲೇ ಮಹಿಳೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪದಡಿ ಮಧುಗಿರಿ ಡಿವೈಎಸ್‌ಪಿ ಎ.ರಾಮಚಂದ್ರಪ್ಪ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಮಧುಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಶುಕ್ರವಾರ ರಾತ್ರಿ ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ ನಡೆಸಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು. ಈ ಸಂಬಂಧ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವರದಿ ಆಧರಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಅಮಾನತಿಗೆ ಆದೇಶಿಸಿದ್ದರು.

ಜಮೀನಿನ ವಿವಾದ ಬಗೆಹರಿಸಿಕೊಡಲು ಕೋರಿ ಮಹಿಳೆಯೊಬ್ಬರು ಕಚೇರಿಗೆ ಬಂದಿದ್ದಾಗ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎನ್ನಲಾದ ವಿಡಿಯೊ ಹರಿದಾಡಿತ್ತು. ಬಳಿಕ ಪ್ರತಿಭಟನೆಗಳು ನಡೆದಿದ್ದವು.

ಅವಾಚ್ಯ ಪದ ಬಳಕೆ: ಸಿಐಡಿ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ವೇಳೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವಾಚ್ಯ ಪದದಿಂದ ನಿಂದಿಸಿದ್ದಾರೆ ಎನ್ನಲಾದ ಪ್ರಕರಣದ ತನಿಖೆಯನ್ನು ಸಿಐಡಿ ಆರಂಭಿಸಿದೆ.

ತನಿಖಾಧಿಕಾರಿ ಅಂಜುಮಾಲಾ ನಾಯಕ್ ಅವರ ನೇತೃತ್ವದಲ್ಲಿ ತನಿಖೆ ಆರಂಭವಾಗಿದ್ದು, ಲಕ್ಷ್ಮೀ ಹೆಬ್ಬಾಳಕರ ಅವರ ಹೇಳಿಕೆಯನ್ನು ಶುಕ್ರವಾರ ದಾಖಲಿಸಿಕೊಳ್ಳಲಾಯಿತು.

'ಸಚಿವರು ಬೆಳಗಾವಿಯಿಂದ ನಗರಕ್ಕೆ ಬಂದಿದ್ದರು. ಆ ಮಾಹಿತಿ ಪಡೆದು, ಸಚಿವರ ಮನೆಗೇ ತೆರಳಿ ಪ್ರಕರಣ ಸಂಬಂಧ ಕೆಲವು ಪ್ರಶ್ನೆ ಕೇಳಲಾಯಿತು. ಅವರು ನೀಡಿದ ಹೇಳಿಕೆಯನ್ನು ವಿಡಿಯೊ ರೆಕಾರ್ಡ್ ಮಾಡಿಕೊಳ್ಳಲಾಯಿತು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಸಿ.ಟಿ.ರವಿ ಅವರಿಂದಲೂ ಹೇಳಿಕೆ ಪಡೆಯಲಾಗುವುದು. ಬೆಳಗಾವಿಗೂ ತೆರಳಿ ಮಾಹಿತಿ ಕಲೆ ಹಾಕಲಾಗುವುದು' ಎಂದು ಮೂಲಗಳು ತಿಳಿಸಿವೆ.

ವಿಧಾನ ಪರಿಷತ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಸಿ.ಟಿ.ರವಿ ಅವರು ಅಶ್ಲೀಲ ಪದ ಬಳಸಿ ನಿಂದಿಸಿದ್ದಾರೆ ಎಂದು ಆರೋಪಿಸಿ ಸಚಿವೆ ದೂರು ನೀಡಿದ್ದರು. ಆ ದೂರು ಆಧರಿಸಿ ಬೆಳಗಾವಿ ಪೊಲೀಸರು ರವಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದರು. ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆ ತರುತ್ತಿದ್ದರು. ಆಗ ಹೈಕೋರ್ಟ್ ಜಾಮೀನು ಮಂಜೂರು ಮಾಡಿದ್ದರಿಂದ ಮಾರ್ಗ ಮಧ್ಯದಲ್ಲೇ ರವಿ ಅವರನ್ನು ಪೊಲೀಸರು ಬಿಡುಗಡೆ ಮಾಡಿದ್ದರು. ಅದಾದ ಮೇಲೆ ಸರ್ಕಾರವು ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿತ್ತು.

ಮನುಕುಲಕ್ಕೇ ನೋವಾಗಿದೆ: ಸಚಿವೆ

'ತನಿಖಾ ತಂಡಕ್ಕೆ ಘಟನೆಯ ಕುರಿತು ಸಂಪೂರ್ಣ ಮಾಹಿತಿ ನೀಡಿದ್ದೇನೆ. ಕಾನೂನು ಚೌಕಟ್ಟಿನಲ್ಲಿ ಕ್ರಮ ಆಗಲಿದೆ ಎನ್ನುವ ವಿಶ್ವಾಸವಿದೆ' ಎಂದು ಲಕ್ಷ್ಮೀ ಹೆಬ್ಬಾಳಕರ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ನನಗೆ ಅನ್ಯಾಯ ಆಗಿದೆ. ಇಂತಹ ನಿಂದನೆಯ ಮಾತು ಇಡೀ ಮನುಕುಲಕ್ಕೆ ಆಗಿರುವ ನೋವು. ಈ ಹೋರಾಟದಲ್ಲಿ ಎಲ್ಲರೂ ನನ್ನ ಜತೆ ನಿಲ್ಲಬೇಕು' ಎಂದು ಅವರು ಕೋರಿದರು.

'ಪ್ರಕರಣವನ್ನು ಪ್ರತಿಷ್ಠೆಯಾಗಿ, ರಾಜಕೀಯವಾಗಿ ತೆಗೆದುಕೊಂಡಿಲ್ಲ. ಇದು ಸ್ವಾಭಿಮಾನದ ಪ್ರಶ್ನೆ. ತನಿಖೆ ಈಗಷ್ಟೇ ಆರಂಭವಾಗಿದೆ. ತನಿಖೆ ಸೂಕ್ತ ರೀತಿಯಲ್ಲಿ ನಡೆಯಲಿ ಎನ್ನುವುದೇ ನನ್ನ ಆಶಯ. ಈ ಹಂತದಲ್ಲಿ ಹೆಚ್ಚು ಮಾತನಾಡುವುದು ಸರಿಯಲ್ಲ' ಎಂದರು.

ಆರೋಗ್ಯ ಇಲಾಖೆ ಅಧೀಕ್ಷಕ ಬಂಧನ

ಬಳ್ಳಾರಿ: 'ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ ಆರೋಪದ ಮೇಲೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿಯ ಅಧೀಕ್ಷಕ ವಿ.ಕೆ ವೆಂಕಟೇಶಲು ಅವರನ್ನು ಬಂಧಿಸಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ತಿಳಿಸಿದ್ದಾರೆ.

ಸಂತ್ರಸ್ತೆಯು ವೈದ್ಯಕೀಯ ಸಂಸ್ಥೆಯೊಂದರಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಲಾಗಿದೆ.

ಸರ್ಕಾರಿ ನೌಕರರ ಆಸ್ತಿ ವಿವರ ಕೋರಿದ ಲೋಕಾಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಪ್ರಕರಣಗಳ ತನಿಖೆಗೆ ಅನುಕೂಲವಾಗುವಂತೆ ಸರ್ಕಾರಿ ನೌಕರರ ಆಸ್ತಿ ವಿವರಗಳನ್ನು ವೆಬ್ ಹೋಸ್ಟ್ ಮಾಡಿ, ಆ ಮಾಹಿತಿ ಪಡೆಯಲು ಲೋಕಾಯುಕ್ತದ ಪೊಲೀಸ್ ವಿಭಾಗಕ್ಕೆ ಲಾಗಿನ್ ನೀಡುವಂತೆ ಲೋಕಾಯುಕ್ತವು ರಾಜ್ಯ ಸರ್ಕಾರವನ್ನು ಕೋರಿದೆ.

ಡಿಸೆಂಬರ್ 18ರಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿರುವ ಲೋಕಾಯುಕ್ತದ ರಿಜಿಸ್ಟ್ರಾರ್ ಎಂ. ಚಂದ್ರಶೇಖರ್ ರೆಡ್ಡಿ ಅವರು, 'ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ಆಸ್ತಿ ವಿವರಗಳನ್ನು ವೆಬ್‌ಹೋಸ್ಟ್ ಮಾಡಿ, ಆ ಮಾಹಿತಿಯನ್ನು ವೀಕ್ಷಿಸಲು ಲೋಕಾಯುಕ್ತದ ಅಧಿಕಾರಿಗಳಿಗೆ ಲಾಗಿನ್ ನೀಡುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಬೇಕು' ಎಂದು ಕೋರಿದ್ದಾರೆ.

ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸುವಾಗ ಸಂಬಂಧಿಸಿದ ಇಲಾಖೆಗಳು ಸಕಾಲಕ್ಕೆ ಮಾಹಿತಿ ಒದಗಿಸುತ್ತಿಲ್ಲ. ಕೆಲವೊಮ್ಮೆ ಮಾಹಿತಿ ನೀಡದೇ ಸತಾಯಿಸಲಾಗುತ್ತಿದೆ. ತನಿಖೆಗೆ ಅಡಚಣೆ ಆಗುವುದನ್ನು ತಪ್ಪಿಸುವ ಉದ್ದೇಶದಿಂದ ಡಿಜಿಟಲ್ ಸ್ವರೂಪದಲ್ಲಿ ಆಸ್ತಿ ವಿವರ ಸಲ್ಲಿಸುವ ಕ್ರಮವನ್ನು ಕಡ್ಡಾಯಗೊಳಿಸಬೇಕು. ಆ ಮಾಹಿತಿ ಸಾರ್ವಜನಿಕರಿಗೆ ಲಭ್ಯವಾಗದಂತೆ ರಕ್ಷಣಾ ಕ್ರಮಗಳನ್ನು ಕೈಗೊಂಡು, ಲೋಕಾಯುಕ್ತದ ಜೊತೆ ಹಂಚಿಕೊಳ್ಳಬೇಕು ಎಂದು ಪತ್ರದಲ್ಲಿ ಸೂಚಿಸಲಾಗಿದೆ.

'ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ಸೇರಿದಂತೆ ಎಲ್ಲ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಪ್ರತಿ 12 ತಿಂಗಳಿಗೊಮ್ಮೆ ತಮ್ಮ ಆಸ್ತಿ ವಿವರವನ್ನು ಸಲ್ಲಿಸುವುದು ಕಾನೂನಿನ ಪ್ರಕಾರ ಕಡ್ಡಾಯವಾಗಿದೆ. ತನಿಖೆಯ ಉದ್ದೇಶಕ್ಕಾಗಿ ಮಾಹಿತಿ ಒದಗಿಸುವಂತೆ ಕೋರಿದಾಗ ಕೆಲವು ಇಲಾಖೆಗಳ ಮುಖ್ಯಸ್ಥರು ಸ್ಪಂದಿಸುತ್ತಿಲ್ಲ. ಕೆಲವರು ತನಿಖಾ ಸಂಸ್ಥೆಯ ಕೋರಿಕೆಯನ್ನೇ ವಿರೋಧಿಸುತ್ತಿದ್ದಾರೆ. ಆ ಮೂಲಕ ಸರ್ಕಾರಿ ನೌಕರರನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ಲೋಕಾಯುಕ್ತ ರಿಜಿಸ್ಟ್ರಾರ್ ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಕ್ಷಮ ಪ್ರಾಧಿಕಾರಿಗಳು ತಮ್ಮ ಅಧೀನದ ಅಧಿಕಾರಿಗಳು ಮತ್ತು ನೌಕರರ ಆಸ್ತಿ ವಿವರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ತನಿಖಾ ಸಂಸ್ಥೆಯ ಜೊತೆ ಹಂಚಿಕೊಳ್ಳುವುದು ಕಾನೂನಿನ ಪ್ರಕಾರ ಕಡ್ಡಾಯವಾಗಿದ್ದರೂ ಹಲವರು ಅದನ್ನು ಪಾಲಿಸುತ್ತಿಲ್ಲ. ಆದ್ದರಿಂದ ವೆಬ್‌ಹೋಸ್ಟಿಂಗ್‌ನಂತಹ ಹೊಸ ವ್ಯವಸ್ಥೆಯನ್ನು ರೂಪಿಸಬೇಕು. ತನಿಖಾಧಿಕಾರಿಯು ಅಗತ್ಯ ಇರುವಾಗಲೆಲ್ಲ ಆ ಮಾಹಿತಿಯನ್ನು ಪರಿಶೀಲಿಸಲು ಮುಕ್ತ ಅವಕಾಶ ಕಲ್ಪಿಸಬೇಕು ಎಂದು ಕೋರಿದ್ದಾರೆ.

'ಈ ವಿಚಾರದಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಿ ಅಧಿಕಾರಿಗಳು, ನೌಕರರ ಆಸ್ತಿ ವಿವರಕ್ಕೆ ಸಂಬಂಧಿಸಿದ ಮಾಹಿತಿಗಳ ನೇರ ಪರಿಶೀಲನೆಗೆ ವ್ಯವಸ್ಥೆ ಮಾಡುತ್ತೀರಿ ಎಂಬ ಭರವಸೆ ಇದೆ. ಆದಾಗ್ಯೂ ಈ ವಿಚಾರದಲ್ಲಿ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ನಿಮ್ಮೊಂದಿಗೆ ಚರ್ಚಿಸಲು ಲೋಕಾಯುಕ್ತರು ಸಿದ್ಧರಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು.

ಮಾಹಿತಿ ವಿನಿಮಯಕ್ಕೆ ಎರಡು ವಾರಗಳೊಳಗೆ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ಕೋರಲಾಗಿತ್ತು. ಆದರೆ, ಮುಖ್ಯ ಕಾರ್ಯದರ್ಶಿಯವರು ಈವರೆಗೆ ಯಾವುದೇ ಪ್ರತಿಕ್ರಿಯೆ ಸಲ್ಲಿಸಿಲ್ಲ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, 'ಆಸ್ತಿ ವಿವರದ ಮಾಹಿತಿ ವಿನಿಮಯಕ್ಕೆ ಸಂಬಂಧಿಸಿದ ಪತ್ರಕ್ಕೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಮುಖ್ಯ ಕಾರ್ಯದರ್ಶಿ ಸೇರಿದಂತೆ ಹಿರಿಯ ಅಧಿಕಾರಿಗಳ ಜೊತೆ ಶೀಘ್ರದಲ್ಲಿ ಸಭೆ ನಡೆಸಿ ಈ ಬಗ್ಗೆ ಚರ್ಚಿಸುತ್ತೇನೆ' ಎಂದರು.

ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ ಉದ್ಘಾಟನೆ

ಜಗದ ಜ್ಞಾನದೊಂದಿಗೆ ಹೆಜ್ಜೆ ಹಾಕಿ: ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವನ್ನು ಜ್ಞಾನ ಆಳುತ್ತದೆ. ಜಗತ್ತಿನ ಜ್ಞಾನವನ್ನು ನಾವು ಹೊಂದದೇ ಹೋದರೆ ಹಿಂದುಳಿಯುತ್ತೇವೆ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಫಸ್ಟ್ ಸರ್ಕಲ್ ಸೊಸೈಟಿ ಹಮ್ಮಿಕೊಂಡಿದ್ದ 'ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ' ಕಾರ್ಯಕ್ರಮದಲ್ಲಿ ಶುಕ್ರವಾರ ಅವರು ಮಾತನಾಡಿದರು.

'ಮೊದಲು ರಾಜಕೀಯ ಕ್ರಾಂತಿಗಳಾದವು. ಬಳಿಕ ವಿದ್ಯುತ್ ಕಂಡು ಹಿಡಿಯುವ ಮೂಲಕ ಕೈಗಾರಿಕಾ ಕ್ರಾಂತಿಯಾಯಿತು. ಆನಂತರ ಡಿಜಿಟಲ್ ಕ್ರಾಂತಿ ಬಂತು. ಈಗ ಕೃತಕ ಬುದ್ಧಿಮತ್ತೆ (ಎಐ) ಬಂದಿದೆ. ಕಾಲದ ಬದಲಾವಣೆಗಳಿಗೆ ಹೊಂದಿಕೊಂಡು ಮುಂದುವರಿಯಬೇಕು' ಎಂದು ಸಲಹೆ ನೀಡಿದರು.

ಒಕ್ಕಲಿಗ ಸಮಾಜವು ಅನ್ನದಾತ ಸಮಾಜ. ಕೃಷಿಯ ಜೊತೆಗೆ ಅದಕ್ಕೆ ಪೂರಕವಾದ ಉದ್ಯಮಗಳಿಗೆ ಹಿಂದಿನಿಂದಲೂ ಪ್ರೋತ್ಸಾಹ ನೀಡುತ್ತಾ ಬಂದ ಸಮುದಾಯ. ಇನ್ನು ಅನ್ನದಾತರಾಗುವುದರ ಜೊತೆಗೆ ಉದ್ಯೋಗದಾತರೂ ಆಗಬೇಕು. ಅದಕ್ಕಾಗಿ ಫಸ್ಟ್ ಸರ್ಕಲ್ ಎಂಬ ವಿಸ್ಮಯ ಹುಟ್ಟಿಕೊಂಡಿದೆ ಎಂದು ವಿವರಿಸಿದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, 'ಒಕ್ಕಲಿಗರು ಶ್ರಮಜೀವಿಗಳು. ಅವರು ತಮ್ಮ ವೃತ್ತಿ ಮಾಡುತ್ತ ಸುಮ್ಮನಿದ್ದರೂ ಸ್ಥಾನಮಾನಗಳು ಸಿಗುತ್ತಿದ್ದವು. ಈಗ ಹೋರಾಟ ಮಾಡಬೇಕಾದ ಕಾಲದಲ್ಲಿ ಇದ್ದೇವೆ. ಕೃಷಿಕರಾಗುವುದಷ್ಟೇ ಅಲ್ಲದೇ ಕೃಷಿಯನ್ನೇ ಉದ್ಯಮವನ್ನಾಗಿ ಮಾಡಬೇಕು. ಬೇರೆ ಉದ್ಯಮಗಳಲ್ಲಿಯೂ ತೊಡಗಿಸಿಕೊಳ್ಳಬೇಕು' ಎಂದರು.

ಫಸ್ಟ್ ಸರ್ಕಲ್ ಸೊಸೈಟಿ ಮಾರ್ಗದರ್ಶಕ ಜಯರಾಮ್ ರಾಯಪುರ ಮಾತನಾಡಿ, 'ಸರ್ಕಾರದಿಂದ ಉದ್ಯೋಗ, ಸಹಾಯಧನಗಳು ಕಡಿಮೆಯಾಗುವ ಕಾಲದಲ್ಲಿ ನಾವೇ ಉದ್ಯೋಗ ನೀಡುವವರಾಗಬೇಕು. ಅದಕ್ಕಾಗಿ ಫಸ್ಟ್ ಸರ್ಕಲ್ ಸೊಸೈಟಿಯನ್ನು ದಕ್ಷಿಣ ಕರ್ನಾಟಕದ 14 ಜಿಲ್ಲೆಗಳಲ್ಲಿ ಆರಂಭಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಫಸ್ಟ್ ಸರ್ಕಲ್ ಸೊಸೈಟಿ ಅಧ್ಯಕ್ಷ ನಂದೀಶ್ ಎಸ್‌.ರಾಜೇಗೌಡ, ಶಾಸಕರಾದ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಕೆ. ಗೋಪಾಲಯ್ಯ, ಮಾಜಿ ಸಂಸದ ಶಿವರಾಮೇಗೌಡ, ಮಾಜಿ ಶಾಸಕ ಎ.ಟಿ. ರಾಮಸ್ವಾಮಿ, ವಿಧಾನ ಪರಿಷತ್‌ನ ಮಾಜಿ ಸಭಾಪತಿ ಬಿ.ಎಲ್. ಶಂಕರ್, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪಗೌಡ, ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಉಪಸ್ಥಿತರಿದ್ದರು.

ಗಮನ ಸೆಳೆದ ಪ್ರದರ್ಶನ: ಗಾಣದ ಎತ್ತುಗಳು, ಮಂಡ್ಯದ ಬೆಲ್ಲ, ವಿವಿಧ ಸಾಂಸ್ಕೃತಿಕ ವೇಷಗಳು, ಉದ್ಯೋಗ, ಉದ್ಯಮಗಳಿಗೆ ಸಂಬಂಧಿಸಿದ 200ಕ್ಕೂ ಅಧಿಕ ಮಳಿಗೆಗಳು ಗಮನ ಸೆಳೆದವು.


ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್‌ಪೊ 2025ದಲ್ಲಿ ಪ್ರದರ್ಶನ ಮಳಿಗೆಗಳಿಗೆ ನಿರ್ಮಲಾನಂದನಾಥ ಸ್ವಾಮೀಜಿ ಗಾಣಕ್ಕೆ ಕೊಬ್ಬರಿ ಸುರಿದು ಚಾಲನೆ ನೀಡಿದರು

ಭಾರತದಲ್ಲಿ ಪ್ರಕರಣಗಳ ಏರಿಕೆ ದಾಖಲಾಗಿಲ್ಲ– ಬೆಳವಣಿಗೆಗಳ ಮೇಲೆ ನಿಗಾ: ಕೇಂದ್ರ ಸರ್ಕಾರ

‘ಚೀನಾ ಹೊಸ ವೈರಸ್: ಆತಂಕ ಬೇಡ’

ನವದೆಹಲಿ (ಪಿಟಿಐ): ‘ಹ್ಯೂಮನ್ ಮೆಟಾನ್ಯುಮೊ’ (ಎಚ್‌ಎಂಪಿವಿ)’ ಹೆಸರಿನ ಸೋಂಕು ಚೀನಾದಲ್ಲಿ ಪತ್ತೆಯಾಗಿದೆ’ ಎಂಬ ವರದಿಗಳ ಹಿಂದೆಯೇ, ‘ಈ ಬೆಳವಣಿಗೆ ಕುರಿತು ನಿಗಾ ವಹಿಸಿದ್ದೇವೆ. ಯಾವುದೇ ಆತಂಕ ಬೇಡ’ ಎಂದು ಕೇಂದ್ರ ಸರ್ಕಾರ ಹೇಳಿದೆ.



ಚೀನಾದಲ್ಲಿ ಹೊಸ ಸೋಂಕು ಕುರಿತ ವರದಿ ಮತ್ತು ಬೆಳವಣಿಗೆಗಳನ್ನು ‘ರಾಷ್ಟ್ರೀಯ ಸೋಂಕು ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ) ಸೂಕ್ಷ್ಮವಾಗಿ ಗಮನಿಸುತ್ತಿದೆ’ ಎಂದು ಸರ್ಕಾರದ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಭಾರತದಲ್ಲಿ ಸದ್ಯ ಉಸಿರಾಟ ಸಮಸ್ಯೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ವಿಶ್ಲೇಷಿಸಿದ್ದೇವೆ. 2024ರ ಡಿಸೆಂಬರ್‌ನಲ್ಲಿ ಇಂತಹ ಪ್ರಕರಣಗಳು ಗಣನೀಯವಾಗಿ ಏರಿಕೆ ಕಂಡಿಲ್ಲ. ದೊಡ್ಡಸಂಖ್ಯೆಯಲ್ಲಿ ಜನರಿಗೆ ಬಾಧಿಸಿರುವ ಯಾವುದೇ ವರದಿಗಳಿಲ್ಲ. ಪ್ರಸ್ತುತ ಸ್ಥಿತಿ ಕುರಿತು ಮುನ್ನೆಚ್ಚರಿಕೆ ನೀಡುವ ಅಗತ್ಯವೂ ಇಲ್ಲ’ ಎಂದೂ ವಿವರಿಸಿದರು.

‘ಸೋಂಕಿನ ಸ್ವರೂಪ ಕುರಿತು ಅಂತರರಾಷ್ಟ್ರೀಯ ಸಂಸ್ಥೆಗಳ ಜೊತೆಗೂ ಸಂಪರ್ಕದಲ್ಲಿದ್ದೇವೆ. ಪರಿಸ್ಥಿತಿ ಮತ್ತು ಸಂಬಂಧಿಸಿದ ಬೆಳವಣಿಗೆಗಳತ್ತ ನಿರಂತರವಾಗಿ ನಿಗಾ ಇಡಲಾಗಿದೆ. ಆದರೆ, ಈ ಬಗ್ಗೆ ಸಾರ್ವತ್ರಿಕವಾಗಿ ಮುನ್ನೆಚ್ಚರಿಕೆ ನೀಡುವ ಅಗತ್ಯವಿಲ್ಲ’ ಎಂದು ಆರೋಗ್ಯ ಸೇವೆಗಳ ಮಹಾ ನಿರ್ದೇಶಕ (ಡಿಜಿಎಚ್‌ಎಸ್) ಡಾ. ಅತುಲ್ ಗೋಯಲ್ ಪ್ರತಿಕ್ರಿಯಿಸಿದರು. ‘ಎಚ್‌ಎಂಪಿವಿ ಎಂಬುದು ಉಸಿರಾಟದ ಸಮಸ್ಯೆಗೆ ಕಾರಣವಾಗುವ ಇತರೆ ವೈರಸ್‌ಗಳಂತೆಯೇ ಶೀತ ಉಂಟು ಮಾಡಲಿದೆ. ಯುವಜನರು ಮತ್ತು ವೃದ್ಧರು, ಮಕ್ಕಳಲ್ಲಿ ಜ್ವರ, ತೀವ್ರ ಶೀತದಂತಹ ಅನಾರೋಗ್ಯಕ್ಕೆ ಕಾರಣವಾಗಲಿದೆ’ ಎಂದರು.

ಕೋವಿಡ್ ಸೋಂಕು ತೀವ್ರ ಆತಂಕ ಉಂಟು ಮಾಡಿದ ಐದು ವರ್ಷಗಳ ತರುವಾಯ, ಚೀನಾದಲ್ಲಿ ಕಾಣಿಸಿಕೊಂಡಿರುವ ಮತ್ತೊಂದು ಸೋಂಕು ಸಾಂಕ್ರಾಮಿಕ ಆಗುತ್ತಿದೆ ಎಂಬ ಆತಂಕ ಸಮಾಜದಲ್ಲಿ ಮೂಡಿತ್ತು. ವಿಶ್ವ ಆರೋಗ್ಯ ಸಂಸ್ಥೆ ಈ ಕುರಿತು ಪ್ರತಿಕ್ರಿಯಿಸಿಲ್ಲ.

‘ಉಸಿರಾಟದ ಸೋಂಕು ಸಮಸ್ಯೆಗಳು ಚಳಿಗಾಲದಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಸಹಜವಾಗಿಯೇ ನಮ್ಮ ಆಸ್ಪತ್ರೆಗಳು ಕೂಡಾ ಅಗತ್ಯ ಔಷಧಗಳು, ಹಾಸಿಗೆ ಸೌಲಭ್ಯದೊಂದಿಗೆ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗಿರುತ್ತವೆ’ ಎಂದು ಗೋಯಲ್ ಪ್ರತಿಕ್ರಿಯಿಸಿದರು.

ಆದರೂ, ಸಾರ್ವಜನಿಕರು ಸಾಮಾನ್ಯವಾಗಿ ಪಾಲಿಸುವ ಮುನ್ನೆಚ್ಚರಿಕೆ ಕ್ರಮ ಗಳನ್ನು ವಹಿಸಬೇಕು. ಕೆಮ್ಮು ಅಥವಾ ಶೀತ ಸಮಸ್ಯೆ ಕಂಡುಬಂದಲ್ಲಿ ಸೋಂಕು ಹರಡದಂತೆ ಕುಟುಂಬ ಸದಸ್ಯರ ಜೊತೆಗೆ ಅಂತರ ಕಾಯ್ದುಕೊಳ್ಳ ಬೇಕು ಎಂದು ಸಲಹೆ ಮಾಡಿದರು. ಉಸಿರಾಟ ಸಮಸ್ಯೆ ನಿವಾರಣೆಗೆ ಅಗತ್ಯ ಸಲಹೆಗಳನ್ನು ಪಾಲಿಸಬೇಕು ಹಾಗೂ ಶೀತ ಮತ್ತು ಜ್ವರ ಸಮಸ್ಯೆಗೆ ಲಭ್ಯವಿರುವ ಸಾಮಾನ್ಯ ಔಷಧವನ್ನೇ ಪಡೆಯಬಹುದು ಎಂದು ಹೇಳಿದರು.

ವರದಿ ಅಲ್ಲಗಳೆದ ಚೀನಾ

ಬೀಜಿಂಗ್ (ಪಿಟಿಐ): ದೇಶದಲ್ಲಿ ಜನರಿಗೆ ಶೀತ, ಜ್ವರ, ಕೆಮ್ಮು ಸಾಂಕ್ರಾಮಿಕವಾಗಿ ಹರಡಿ, ಜನರು ಆಸ್ಪತ್ರೆಗೆ ದಾಖಲಾಗುತ್ತಿರುವ ವರದಿಗಳನ್ನು ಚೀನಾ ಶುಕ್ರವಾರ ನಿರಾಕರಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಚಳಿಗಾಲದಲ್ಲಿ ಕಾಣಿಸಿಕೊಳ್ಳುವ ಉಸಿರಾಟದ ಕಾಯಿಲೆಗಳ ಪ್ರಕರಣಗಳು ತುಂಬಾ ಕಡಿಮೆಯಾಗಿವೆ ಎಂದು ಅದು ಹೇಳಿದೆ.

ವಿದೇಶಿಯರು ಚೀನಾಕ್ಕೆ ಸುರಕ್ಷಿತವಾಗಿ ಪ್ರಯಾಣಿಸಬಹುದು ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಹೇಳಿದ್ದಾರೆ.

ಗಂಟೆಗೆ 180 ಕಿ.ಮೀ. ವೇಗದಲ್ಲಿ ಚಲಿಸಿದ ವಂದೇ ಭಾರತ್

ನವದೆಹಲಿ (ಪಿಟಿಐ): ರಾಜಸ್ಥಾನದಲ್ಲಿ 40 ಕಿ.ಮೀ ಉದ್ದದ ಮಾರ್ಗದಲ್ಲಿ ಕಳೆದ ಮೂರು ದಿನಗಳಲ್ಲಿ ಬಹು ಪ್ರಯೋಗಗಳಿಗೆ ಒಳಪಡಿಸಲಾದ ವಂದೇ ಭಾರತ್ ಸ್ಲೀಪರ್ ರೈಲು ಗಂಟೆಗೆ 180 ಕಿ.ಮೀ ಗರಿಷ್ಠ ವೇಗದಲ್ಲಿ ಚಲಿಸಿದೆ ಎಂದು ರೈಲ್ವೆ ಸಚಿವಾಲಯ ಶುಕ್ರವಾರ ತಿಳಿಸಿದೆ.

‘ಈ ರೈಲುಗಳನ್ನು ಅರ್ಪಿಸುವ ಮೊದಲು ಈ ತಿಂಗಳ ಅಂತ್ಯದವರೆಗೆ ಪ್ರಯೋಗ ಮುಂದುವರಿಯಲಿದೆ. ಈ ಯಶಸ್ವಿ ಪ್ರಯೋಗಗಳ ನಂತರ ರೈಲು ಪ್ರಯಾಣಿಕರಿಗೆ ವಿಶ್ವ ದರ್ಜೆಯ ಪ್ರಯಾಣದ ಅನುಭವ ಪಡೆಯಬಹುದಾಗಿದೆ’ ಎಂದು ಸಚಿವಾಲಯ ಹೇಳಿದೆ.

ಹಿತಾಸಕ್ತಿ ರಕ್ಷಣೆಗೆ ಕ್ರಮ –ಭಾರತ

ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಬೃಹತ್ ಅಣೆಕಟ್ಟು ನಿರ್ಮಾಣಕ್ಕೆ ಚೀನಾದ ಸಿದ್ಧತೆ

ನವದೆಹಲಿ (ಪಿಟಿಐ): ‘ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಟಿಬೆಟ್‌ನಲ್ಲಿ ಚೀನಾ ಬೃಹತ್ ಅಣೆಕಟ್ಟು ನಿರ್ಮಿಸಲು ಸಿದ್ಧತೆ ನಡೆಸಿರುವುದರತ್ತ ನಿಗಾವಹಿಸಲಾಗಿದೆ. ಭಾರತದ ಹಿತಾಸಕ್ತಿ ರಕ್ಷಿಸಲು ಅಗತ್ಯ ಕ್ರಮವಹಿಸಲಾಗುವುದು’ ಎಂದು ಕೇಂದ್ರ ಸರ್ಕಾರ ಪ್ರತಿಕ್ರಿಯಿಸಿದೆ.

ಉದ್ದೇಶಿತ ಅಣೆಕಟ್ಟು ನಿರ್ಮಾಣ ಕುರಿತಂತೆ ಸರ್ಕಾರ ಇದೇ ಮೊದಲ ಬಾರಿ ಪ್ರತಿಕ್ರಿಯಿಸಿದೆ.

‘ಕೆಳಹಂತದ ನದಿಪಾತ್ರದ ಪ್ರದೇಶಗಳ ಹಿತ ರಕ್ಷಿಸಲೂ ಚೀನಾ ಆದ್ಯತೆ ನೀಡಬೇಕು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದರು.

ಅಣೆಕಟ್ಟು ನಿರ್ಮಾಣ ಮಾಡುವುದರಿಂದ ಭಾರತದಲ್ಲಿ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಪ್ರದೇಶದಲ್ಲಿ ಪರಿಸರ ಅಸಮತೋಲನ ಉಂಟಾಗಬಹುದು ಎಂಬ ಆತಂಕವಿದೆ. ಬ್ರಹ್ಮಪುತ್ರ ನದಿಯು ಈ ಎರಡೂ ರಾಜ್ಯಗಳನ್ನು ಹಾದುಹೋಗಿದೆ.

ಕೆಳಹಂತದಲ್ಲಿರುವ ನದಿಪಾತ್ರದ ರಾಜ್ಯಗಳು ನದಿ ನೀರಿನ ಮೇಲಿನ ಹಕ್ಕು ಪ್ರತಿಪಾದಿಸಿವೆ. ತಜ್ಞರ ಹಂತದಲ್ಲಿ ಹಾಗೂ ರಾಜತಾಂತ್ರಿಕ ಮಾರ್ಗದಲ್ಲಿ ಈಗಾಗಲೇ ಈ ಆತಂಕವನ್ನು ಚೀನಾ ಸರ್ಕಾರಕ್ಕೆ ಮನವರಿಕೆ ಮಾಡಲಾಗಿದೆ ಎಂದು ತಿಳಿಸಿದರು.

ಅಣೆಕಟ್ಟು ನಿರ್ಮಾಣ ಕುರಿತ ಇತ್ತೀಚಿನ ವರದಿಗಳ ಹಿನ್ನೆಲೆಯಲ್ಲಿ ನದಿಯ ಕೆಳಹಂತದ ರಾಷ್ಟ್ರಗಳ ಜೊತೆಗೆ ಚರ್ಚಿಸಬೇಕು ಮತ್ತು ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂಬ ಆಗ್ರಹವನ್ನು ಪುನರುಚ್ಚರಿಸಲಾಗಿದೆ ಎಂದು ತಿಳಿಸಿದರು.

ಬ್ರಹ್ಮಪುತ್ರ ನದಿಗೆ ಅಡ್ಡಲಾಗಿ ಟಿಬೆಟ್ ಪ್ರಾಂತ್ಯದಲ್ಲಿ, ಭಾರತದ ಗಡಿಗೆ ಸಮೀಪದಲ್ಲಿಯೇ ಅಂದಾಜು ₹ 11.67 ಲಕ್ಷ ಕೋಟಿ ವೆಚ್ಚದಲ್ಲಿ (137 ಬಿಲಿಯನ್ ಡಾಲರ್) ಬೃಹತ್ ಅಣೆಕಟ್ಟು ನಿರ್ಮಿಸಲಾಗುವುದು ಎಂದು ಚೀನಾ ಡಿಸೆಂಬರ್ 25ರಂದು ಪ್ರಕಟಿಸಿತ್ತು.

ಚೀನಾದ ಈ ನಿರ್ಧಾರಕ್ಕೆ ಭಾರತ ಮತ್ತು ಬಾಂಗ್ಲಾದಲ್ಲಿ ಆತಂಕ ವ್ಯಕ್ತವಾಗಿತ್ತು. ಕಳೆದ ವಾರ ಪ್ರತಿಕ್ರಿಯಿಸಿದ್ದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವೊ ನಿಂಗ್, ಇಂತಹ ಆತಂಕ ಅನಗತ್ಯ ಎಂದು ತಳ್ಳಿಹಾಕಿದ್ದರು. ಲಭ್ಯ ಮಾಹಿತಿಗಳ ಪ್ರಕಾರ, ಬ್ರಹ್ಮಪುತ್ರ ನದಿಯು ಹಿಮಾಲಯದಲ್ಲಿ ‘ಯು’ ತಿರುವು ಪಡೆದು ಅರುಣಾಚಲ ಪ್ರದೇಶ ಹಾಗೂ ಆ ನಂತರ ಬಾಂಗ್ಲಾದೇಶದತ್ತ ಹರಿಯಲು ಆರಂಭಿಸುವ ಪ್ರದೇಶದಲ್ಲಿ ಅಣೆಕಟ್ಟು ನಿರ್ಮಿಸಲು ಚೀನಾ ಮುಂದಾಗಿದೆ.



ತಾಲೀಮು ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಳ್ಳಲಿರುವ ಅಸ್ಸಾಂ ರೈಫಲ್ಸ್ ತಂಡದ ಸದಸ್ಯರು ಶುಕ್ರವಾರ ದೆಹಲಿಯ ಕರ್ತವ್ಯ ಪಥದಲ್ಲಿ ತಾಲೀಮಿನ ಬಳಿಕ ಸಂತಸ ಹಂಚಿಕೊಂಡರು –ಪಿಟಿಐ ಚಿತ್ರ

ಕುಲಾಂತರಿ ತಳಿ: ನಿಯಮಗಳ ತಿದ್ದುಪಡಿಗೆ ಮುಂದಾದ ಕೇಂದ್ರ

ನವದೆಹಲಿ(ಪಿಟಿಐ): ಕುಲಾಂತರಿ ತಳಿಗಳನ್ನು ಅನುಮೋದಿಸುವ ಹಾಗೂ ನಿಯಂತ್ರಿಸುವ ಹೊಣೆ ಹೊತ್ತ ‘ಕುಲಾಂತರಿತಳಿ ಎಂಜಿನಿಯರಿಂಗ್ ಪರಿಶೀಲನಾ ಸಮಿತಿ’ಯ (ಜಿಇಎಸಿ) ಕಾರ್ಯವೈಖರಿಯಲ್ಲಿ ಮತ್ತಷ್ಟು ಪಾರದರ್ಶಕತೆ ತರುವುದಕ್ಕಾಗಿ, ನಿಯಮಗಳಿಗೆ ತಿದ್ದುಪಡಿಗಳನ್ನು ತರಲು ಕೇಂದ್ರ ಸರ್ಕಾರ ಉದ್ದೇಶಿಸಿದೆ.

ಈ ಕುರಿತು ಕೇಂದ್ರ ಸರ್ಕಾರ ಡಿ.31ರಂದು ಅಧಿಸೂಚನೆ ಪ್ರಕಟಿಸಿದೆ. ಪ್ರಸ್ತಾವಿತ ತಿದ್ದುಪಡಿಗಳ ಕುರಿತು ಸಾರ್ವಜನಿಕರು 60 ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸಲ್ಲಿಸಬಹುದು.

ಅಧಿಸೂಚನೆಯಲ್ಲಿನ ಪ್ರಮುಖ ಅಂಶಗಳು:

- ಸಮಿತಿಯ ಪರಿಗಣನೆಯಲ್ಲಿರುವ ಯಾವುದೇ ವಿಚಾರವು ನೇರವಾಗಿ ಇಲ್ಲವೇ ಪರೋಕ್ಷವಾಗಿ ಸದಸ್ಯರೊಂದಿಗೆ ನಂಟು ಹೊಂದಿದ್ದಲ್ಲಿ, ಆ ವಿಚಾರ ಕುರಿತ ಚರ್ಚೆಗಳಿಂದ ಸದಸ್ಯರು ದೂರ ಉಳಿಯಬೇಕು
- ಸಮಿತಿಗೆ ನೇಮಕಗೊಂಡ ಸಂದರ್ಭದಲ್ಲಿ, ತಜ್ಞರು ‘ಹಿತಾಸಕ್ತಿ ಸಂಘರ್ಷ’ ಕುರಿತಂತೆ ಲಿಖಿತವಾಗಿ ಘೋಷಣೆಗಳನ್ನು ಸಲ್ಲಿಸಬೇಕು
- ಹೊಸದಾಗಿ ಯಾವುದೇ ವಿಚಾರ ಪ್ರಸ್ತಾಪಗೊಂಡ ಸಂದರ್ಭದಲ್ಲಿ/ಸನ್ನಿವೇಶ ಸೃಷ್ಟಿಯಾದ ವೇಳೆ, ಈ ಘೋಷಣೆಗಳನ್ನು ಸದಸ್ಯರು ಅಪ್‌ಡೇಟ್ ಮಾಡಬೇಕು
- ಯಾವುದೇ ಸದಸ್ಯರಿಗೆ ಸಂಬಂಧಿಸಿ ‘ಹಿತಾಸಕ್ತಿ ಸಂಘರ್ಷ’ವಿರುವ ಬಗ್ಗೆ ಖಚಿತತೆ ಕಂಡುಬರದಿದ್ದ ಸಂದರ್ಭದಲ್ಲಿ, ಸಮಿತಿಯ ಮುಖ್ಯಸ್ಥರು ಅಂತಿಮ ತೀರ್ಮಾನ ತೆಗೆದುಕೊಳ್ಳುವರು

ಅಲ್ಲು ಅರ್ಜುನ್‌ಗೆ ಜಾಮೀನು



ಹೈದರಬಾದ್ (ಪಿಟಿಐ): ‘ಪುಷ್ಪ–2’ ಚಿತ್ರದ ಪ್ರದರ್ಶನದ ವೇಳೆ ಚಿತ್ರಮಂದಿರದಲ್ಲಿ ಉಂಟಾದ ಕಾಲ್ತುಳಿತದಿಂದ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣದ ಆರೋಪಿ, ತೆಲುಗು ನಟ ಅಲ್ಲು ಅರ್ಜುನ್ ಅವರಿಗೆ ಇಲ್ಲಿನ ನ್ಯಾಯಾಲಯವು ನಿಯಮಿತ ಜಾಮೀನು ಮಂಜೂರು ಮಾಡಿದೆ.

ತ್ಯಾಜ್ಯ ವಿಲೇವಾರಿಗೆ ವಿರೋಧ

ಧರ್, ಮಧ್ಯಪ್ರದೇಶ (ಪಿಟಿಐ): ಯೂನಿಯನ್ ಕಾರ್ಬೈಡ್‌ನ 337 ಟನ್ ವಿಷಕಾರಿ ತ್ಯಾಜ್ಯವನ್ನು ಕೈಗಾರಿಕಾ ನಗರ ಪೀಥಾಂಪುರದಲ್ಲಿ ವಿಲೇವಾರಿ ಮಾಡುವ ಸರ್ಕಾರದ ನಿರ್ಧಾರವನ್ನು ಖಂಡಿಸಿ ಶುಕ್ರವಾರ ನಡೆದ ಪ್ರತಿಭಟನೆ ವೇಳೆ ಇಬ್ಬರು ಆತ್ಮಹತ್ಯೆಗೆ ಯತ್ನಿಸಿದರು.

ತ್ಯಾಜ್ಯ ವಿಲೇವಾರಿ ವಿರೋಧಿಸಿ ಪೀಥಾಂಪುರದಲ್ಲಿ ಶುಕ್ರವಾರ ಬಂದ್ ಘೋಷಿಸಲಾಗಿತ್ತು. ಈ ವೇಳೆ ಇಬ್ಬರು ಮೈ ಮೇಲೆ ದ್ರವ ಪದಾರ್ಥವನ್ನು ಸುರಿದುಕೊಂಡು ಬೆಂಕಿ ಹಚ್ಚಿಕೊಂಡರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು. ಇಬ್ಬರೂ ಅಪಾಯದಿಂದ ಪಾರಾಗಿದ್ದಾರೆ.

ಇ.ಡಿ ವರ್ತನೆಗೆ ‘ಸುಪ್ರೀಂ’ ಕಿಡಿ



ನವದೆಹಲಿ(ಪಿಟಿಐ): ಹರಿಯಾಣದ ಕಾಂಗ್ರೆಸ್‌ನ ಮಾಜಿ ಶಾಸಕ ಸುರೇಂದ್ರ ಪನ್ವಾರ್ ಅವರನ್ನು 15 ಗಂಟೆ ವಿಚಾರಣೆಗೆ ಒಳಪಡಿಸಿರುವ ಜಾರಿ ನಿರ್ದೇಶನಾಲಯದ (ಇ.ಡಿ) ‘ದರ್ಪ’ದಿಂದ ಕೂಡಿದೆ ಹಾಗೂ ‘ಅಮಾನವೀಯ’ವಾಗಿದೆ ಎಂದು ಹೇಳಿರುವ ಸುಪ್ರೀಂ ಕೋರ್ಟ್, ಮಾಜಿ ಶಾಸಕನ ಬಂಧನ ಕಾನೂನುಬಾಹಿರ ಎಂದು ಹೇಳಿದೆ.

‘ಪನ್ವಾರ್ ವಿರುದ್ಧ ಮರಳು ಅಕ್ರಮ ಗಣಿಗಾರಿಕೆ ಆರೋಪವಿದೆಯೇ ಹೊರತು, ಅವರ ವಿರುದ್ಧದ ಪ್ರಕರಣ ಯಾವುದೇ ಭಯೋತ್ಪಾದಕ ಚಟುವಟಿಕೆಗೆ ಸಂಬಂಧಿಸಿದ್ದಲ್ಲ. ಈ ವಿಚಾರದಲ್ಲಿ ಇ.ಡಿ ಅಧಿಕಾರಿಗಳು ಅಮಾನವೀಯವಾಗಿ ನಡೆದುಕೊಂಡಿದ್ದಾರೆ’ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರು ಇದ್ದ ಪೀಠ ಹೇಳಿದೆ.

ಪೀಠವು ಈ ಕುರಿತು ಡಿಸೆಂಬರ್ 2ರಂದು ಆದೇಶ ಹೊರಡಿಸಿದೆ.

‘ಇಂತಹ ಪ್ರಕರಣಗಳಲ್ಲಿ ಜನರನ್ನು ನಡೆಸಿಕೊಳ್ಳುವ ರೀತಿ ಇದಲ್ಲ. ಹೇಳಿಕೆ ನೀಡುವಂತೆ ಆ ವ್ಯಕ್ತಿಗೆ ನೀವು ಬಲವಂತ ಮಾಡಿದ್ದೀರಿ’ ಎಂದೂ ಕಟು ಮಾತುಗಳಲ್ಲಿ ಹೇಳಿದೆ.

ಪನ್ವಾರ್ ಅವರ ಬಂಧನ ಕಾನೂನು ಬಾಹಿರ ಎಂದು ಹರಿಯಾಣ ಮತ್ತು ಪಂಜಾಬ್ ಹೈಕೋರ್ಟ್ ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಇ.ಡಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಪೀಠ, ‘ಪ್ರತಿವಾದಿಯ ಬಂಧನ ಕಾನೂನುಬಾಹಿರ ಎಂಬ ಹೈಕೋರ್ಟ್‌ನ ನಿರ್ಣಯದಲ್ಲಿ ಹಸ್ತಕ್ಷೇಪ ಮಾಡಲು ಇಷ್ಟಪಡುವುದಿಲ್ಲ’ ಎಂದು ಹೇಳಿದೆ.

ಮಣಿಪುರ: ಎಸ್‌ಪಿಗೆ ಗಾಯ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೊಕ್ಪಿ ಜಿಲ್ಲೆಯ ಎಸ್‌ಪಿ ಕಚೇರಿಯ ಮೇಲೆ ಶುಕ್ರವಾರ ಸಂಜೆ ಗುಂಪೊಂದು ದಾಳಿ ನಡೆಸಿದ್ದು, ಎಸ್‌ಪಿ ಎಂ.ಪ್ರಭಾಕರ್ ಅವರು ಗಾಯಗೊಂಡಿದ್ದಾರೆ.

ಇಂಫಾಲ್ ಪೂರ್ವ ಜಿಲ್ಲೆಯ ಗಡಿಗೆ ಹೊಂದಿಕೊಂಡಿರುವ ಸೈಬೋಲ್ ಗ್ರಾಮದಲ್ಲಿ ನಿಯೋಜಿಸಿರುವ ಭದ್ರತಾ ಪಡೆಗಳನ್ನುವಾಪಸ್‌ಕರೆಸುವಲ್ಲಿಎಸ್‌ಪಿವಿಫಲರಾಗಿದ್ದಾರೆ ಎಂದು ಆರೋಪಿಸಿ ಈ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಪಿ ಕಚೇರಿ ಬಳಿ ಪ್ರತಿಭಟನಕಾರರು ಮತ್ತು ಭದ್ರತಾ ಸಿಬ್ಬಂದಿ ನಡುವಿನ ಘರ್ಷಣೆಯಲ್ಲಿ ಹಲವರು ಗಾಯಗೊಂಡಿದ್ದಾರೆ.

ದಾಳಿಕೋರರು ಕಲ್ಲು ಹಾಗೂ ಕೈಗೆ ಸಿಕ್ಕ ವಸ್ತುಗಳನ್ನು ಎಸ್‌ಪಿ ಕಚೇರಿಯತ್ತ ಎಸೆದಿದ್ದಾರೆ. ತೂರಿ ಬಂದ ವಸ್ತುವೊಂದು ಎಸ್‌ಪಿ ಅವರ ಹಣೆಗೆ ಬಡಿದಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಪಿ ಕಚೇರಿ ಆವರಣದಲ್ಲಿ ನಿಲ್ಲಿಸಿದ್ದ ವಾಹನಗಳು ಜಖಂಗೊಂಡಿವೆ. ಸೈಬೋಲ್ ಗ್ರಾಮದಿಂದ ಬಿಎಸ್‌ಎಫ್, ಸಿಆರ್‌ಪಿಎಫ್ ಪಡೆಗಳನ್ನು ವಾಪಸ್ ಕರೆಸಿಕೊಳ್ಳಬೇಕು ಎಂದು ಆಗ್ರಹಿಸಿ ಹೆಚ್ಚಿನ ಸಂಖ್ಯೆಯ ಪ್ರತಿಭಟನಕಾರರು ಮಧ್ಯಾಹ್ನದಿಂದಲೇ ಎಸ್‌ಪಿ ಕಚೇರಿ ಎದುರು ಜಮಾಯಿಸತೊಡಗಿದ್ದರು.

ದೆಹಲಿ: 400ಕ್ಕೂ ಅಧಿಕ ವಿಮಾನ ಸಂಚಾರ ವಿಳಂಬ

ನವದೆಹಲಿ (ಪಿಟಿಐ): ದಟ್ಟ ಮಂಜು ಮತ್ತು ಪ್ರತಿಕೂಲ ಹವಾಮಾನದಿಂದಾಗಿ ದೆಹಲಿ ವಿಮಾನ ನಿಲ್ದಾಣದಿಂದ ಶುಕ್ರವಾರ ಮುಂಜಾನೆ ಹೊರಡಬೇಕಿದ್ದ 400ಕ್ಕೂ ಹೆಚ್ಚು ವಿಮಾನಗಳ ಸಂಚಾರದಲ್ಲಿ ವಿಳಂಬ ಆಯಿತು.

ಇಂದಿರಾ ಗಾಂಧಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ದಟ್ಟ ಮಂಜು ಆವರಿಸಿದ್ದರಿಂದ ಎದುರಿನ ಗೋಚರತೆಯು ಶೂನ್ಯ ಪ್ರಮಾಣದಲ್ಲಿತ್ತು. ಹೀಗಾಗಿ ವಿಮಾನಗಳ ಸಂಚಾರ ವಿಳಂಬವಾಯಿತು.

‘ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ ತಡೆಗೆ ಕ್ರಮ’

ಒಂದನೇ ಪುಟದಿಂದ...

‘ನಾವು ಈ ಸೂಕ್ಷ್ಮ ವಿಷಯದ ಬಗ್ಗೆ ಚೆನ್ನಾಗಿ ಅರಿತಿದ್ದು, ಇದನ್ನು ತಡೆಯಲು ಏನನ್ನಾದರೂ ಮಾಡುತ್ತೇವೆ. 2012ರ ನಿಯಮಾವಳಿಗಳ ಪಾಲನೆಯಾಗುತ್ತಿದೆಯೇ ಎಂಬುದನ್ನು ತಿಳಿದುಕೊಳ್ಳಲು ಕೆಲವು ಪರಿಣಾಮಕಾರಿ ಕಾರ್ಯವಿಧಾನವನ್ನು ಕಂಡುಕೊಳ್ಳಬೇಕಿದೆ’ ಎಂದು ಹೇಳಿತು.

ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾದ ರೋಹಿತ್ ವೇಮುಲ ಹಾಗೂ ಪಾಯಲ್ ತದ್ವಿ ಅವರ ಪೋಷಕರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸುತ್ತಿದೆ. ವಿ.ವಿಗಳಲ್ಲಿ ನಡೆಯುತ್ತಿರುವ ಜಾತಿ ತಾರತಮ್ಯದ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಹೈದರಾಬಾದ್ ಕೇಂದ್ರೀಯ ವಿ.ವಿಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿದ್ದ ರೋಹಿತ್ ವೇಮುಲ ಅವರು 2016ರಲ್ಲಿ ಹಾಗೂ ಮುಂಬೈನ ಟಿ.ಎನ್. ಟೋಪಿವಾಲಾ ನ್ಯಾಷನಲ್ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಪಾಯಲ್ ತದ್ವಿ ಅವರು 2019ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಇಬ್ಬರೂ ಕ್ಯಾಂಪಸ್‌ನಲ್ಲಿ ಜಾತಿ ತಾರತಮ್ಯ ಎದುರಿಸಿದ್ದರು ಎಂಬ ಆರೋಪ ಕೇಳಿಬಂದಿತ್ತು.

ಹೈದರಾಬಾದ್: ಪ್ರಾಯೋಗಿವಾಗಿ 39 ಮಂದಿಗೆ ಉದ್ಯೋಗ

ಸಂಚಾರ ನಿಯಂತ್ರಣಕ್ಕೆ ಲಿಂಗತ್ವ ಅಲ್ಪಸಂಖ್ಯಾತರು



ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಹೈದರಾಬಾದ್‌ನ ವೃತ್ತವೊಂದರಲ್ಲಿ ಸಂಚಾರ ನಿಯಂತ್ರಣ ಕಾಯಕದಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಹೈದರಾಬಾದ್ (ಪಿಟಿಐ): ನಗರದ ವಿವಿಧ ರಸ್ತೆಗಳಲ್ಲಿ ಭಿಕ್ಷೆ ಬೇಡುತ್ತಿದ್ದ ಲಿಂಗತ್ವ ಅಲ್ಪಸಂಖ್ಯಾತರ ಪೈಕಿ ಕೆಲವರು ಅದೇ ರಸ್ತೆಗಳಲ್ಲಿ ಸಂಚಾರ ನಿಯಂತ್ರಣ ಕಾಯಕದಲ್ಲಿ ತೊಡಗಿದ್ದಾರೆ. ಇದು ಅವರ ಸಬಲೀಕರಣಕ್ಕೆ ನೆರವಾಗುತ್ತಿದೆ.

ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರ ಸೂಚನೆ ಮೇರೆಗೆ ಪೊಲೀಸ್ ಇಲಾಖೆಯು 39 ಲಿಂಗತ್ವ ಅಲ್ಪಸಂಖ್ಯಾತರನ್ನು ನಗರದ ಸಂಚಾರ ಸಹಾಯಕರನ್ನಾಗಿ ಪ್ರಾಯೋಗಿಕವಾಗಿ ನೇಮಿಸಿಕೊಂಡಿದೆ. ಗೃಹ ರಕ್ಷಕ ದಳ ಸಿಬ್ಬಂದಿ ನೇಮಕಾತಿ ಮಾದರಿಯಲ್ಲಿಯೇ ಈ ನೇಮಕಾತಿಗಳನ್ನು ನಡೆಸಲಾಗಿದೆ.

ಹೀಗೆ ನೇಮಕಗೊಂಡವರು ಈಗಾಗಲೇ ಕೆಲಸ ಆರಂಭಿಸಿದ್ದಾರೆ. ಈ ಹಿಂದೆ ತಾವು ಎದುರಿಸಿದ್ದ ತಾರತಮ್ಯ, ಅವಮಾನಗಳಿಗೆ ಬದಲಿಯಾಗಿ, ಅವರೀಗ ಜನರು ಮತ್ತು ಸಮಾಜದಿಂದ ಗೌರವ ಪಡೆಯುತ್ತಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಲಿಂಗತ್ವ ಅಲ್ಪಸಂಖ್ಯಾತ ಸಂಚಾರ ಸಹಾಯಕರಾದ ನಿಶಾ, ‘ನಾವು ಎಲ್ಲಿ ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದೆವೊ ಅಲ್ಲಿಯೇ ಸಂಚಾರ ನಿಯಂತ್ರಣದ ಕಾರ್ಯ ನಿರ್ವಹಿಸುತ್ತಿರುವುದು ಖುಷಿ ತಂದಿದೆ. ಇದಕ್ಕಾಗಿ ಮುಖ್ಯಮಂತ್ರಿಗೆ ಧನ್ಯವಾದ ಅರ್ಪಿಸುತ್ತೇನೆ’ ಎಂದರು.


12ನೇ ತರಗತಿವರೆಗೆ ಓದಿರುವ ನಿಶಾ, ಸ್ನೇಹಿತರು, ಪೋಷಕರಿಂದ ತಿರಸ್ಕೃತರಾಗಿದ್ದರು. ತಾರತಮ್ಯ ಧೋರಣೆಯಿಂದ ನೊಂದಿದ್ದರು.

‘ಪೋಷಕರೂ ಆಗ ನನ್ನನ್ನು ಸ್ವೀಕರಿಸಿರಲಿಲ್ಲ. ಆದರೆ ಈಗ ಒಪ್ಪಿಕೊಂಡಿದ್ದಾರೆ. ನನ್ನನ್ನು ತಿರಸ್ಕರಿಸಿದ್ದ ಸ್ನೇಹಿತರು ಮಾತನಾಡಲಾರಂಭಿಸಿದ್ದಾರೆ. ನನಗೆ ಕೆಲಸ ದೊರೆತ ಬಳಿಕ ಸಂಬಂಧಿಕರು ಮತ್ತು ಇತರರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರಿಂದ ತುಂಬ ಸಂತಸವಾಗಿದೆ. ಅದನ್ನು ವರ್ಣಿಸಲು ನನ್ನಲ್ಲಿ ಪದಗಳಿಲ್ಲ’ ಎಂದು ಅವರು ಹೇಳಿದರು.

‘ಮೊದಲಿಗೆ ಜನರು ನಮ್ಮೊಂದಿಗೆ ಮಾತನಾಡಲೂ ಹಿಂಜರಿಯುತ್ತಿದ್ದರು. ಆದರೆ ಈಗ ಮಾತನಾಡಿಸುತ್ತಾರೆ, ಗೌರವ ಕೊಡುತ್ತಾರೆ. ಅದು ಹೆಮ್ಮೆಯ ವಿಷಯ’ ಎಂದು ಸಂಚಾರ ಸಹಾಯಕರಾಗಿ ನೇಮಕವಾಗಿರುವ ಮತ್ತೊಬ್ಬ ಲಿಂಗತ್ವ ಅಲ್ಪಸಂಖ್ಯಾತರಾದ ಸನಾ ಪ್ರತಿಕ್ರಿಯಿಸಿದರು.

‘ಈ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದಾಗ 100 ಲಿಂಗತ್ವ ಅಲ್ಪಸಂಖ್ಯಾತರು ಅರ್ಜಿ ಸಲ್ಲಿಸಿದ್ದರು. ದೈಹಿಕ ಪರೀಕ್ಷೆ ಸೇರಿದಂತೆ ಇತರ ಪ್ರಕ್ರಿಯೆಗಳ ಬಳಿಕ 44 ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಯಿತು. 39 ಅಭ್ಯರ್ಥಿಗಳು ತರಬೇತಿ ಪೂರ್ಣಗೊಳಿಸಿದ್ದಾರೆ. ಇವರಿಗೆ 2024ರ ಡಿಸೆಂಬರ್ 6ರಂದು ಮುಖ್ಯಮಂತ್ರಿ ಅವರು ನೇಮಕಾತಿ ಪತ್ರಗಳನ್ನು ವಿತರಿಸಿದ್ದಾರೆ. ಅವರು ಡಿಸೆಂಬರ್ 22ರಿಂದ ಸಂಚಾರ ಸಹಾಯಕರಾಗಿ ಕೆಲಸ ಮಾಡುತ್ತಿದ್ದಾರೆ’ ಎಂದು ಹೈದರಾಬಾದ್ ಪೊಲೀಸ್ ಕಮಿಷ ನರ್ ಸಿ.ವಿ. ಆನಂದ್ ತಿಳಿಸಿದರು.


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,188
ಇಂದಿನ ಅಂತ್ಯ	24,004
▼	183
ದಿನದ ಕನಿಷ್ಠ	23,976

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹565
12 ಕ್ಕೆ	₹75
ಮೈಸೂರು	
100ಕ್ಕೆ	₹568

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹385-630
ದ್ವಿತಳಿ (ಬಿ.ವಿ)	₹352-742

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹188
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹176

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14100-14550
ಬೆಂಗಳೂರು	₹20000-25000
ದಾವಣಗೆರೆ	₹10300-10300
ತುರುವೇಕೆರೆ	₹14000-14500



ವಾಕ್‌ಮೇಟ್‌ಗೆ ಕ್ರಿಕೆಟಿಗ ಸಂಜು ಸ್ಯಾಮ್ಸನ್ ಹೊಸ ರಾಯಭಾರಿಯಾಗಿ ನೇಮಕವಾಗಿದ್ದು, ಕಂಪನಿಯ ನಿರ್ದೇಶಕ ರೋಷನ್ ಬಾಪ್ಟೈನ್ ಅಭಿನಂದಿಸಿದರು

ವಾಕ್‌ಮೇಟ್ ರಾಯಭಾರಿಯಾಗಿ ಸಂಜು ಸ್ಯಾಮ್ಸನ್ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾದರಕ್ಷೆಗಳ ಪ್ರಮುಖ ಬ್ರ್ಯಾಂಡ್ ಆಗಿರುವ ವಾಕ್‌ಮೇಟ್ ಇಂಡಿಯಾ ಕಂಪನಿಗೆ, ಕ್ರಿಕೆಟಿಗ ಸಂಜು ಸ್ಯಾಮ್ಸನ್ ಅವರು ಹೊಸ ರಾಯಭಾರಿಯಾಗಿ ನೇಮಕ ಆಗಿದ್ದಾರೆ.

'ಪ್ರಾದೇಶಿಕ ಕಂಪನಿಯಾದ ವಾಕ್‌ಮೇಟ್ ಜಾಗತಿಕ ಮಾರುಕಟ್ಟೆಗೆ ತನ್ನ ವಹಿವಾಟು ವಿಸ್ತರಿಸಿದೆ. ಸಂಜು ಸ್ಯಾಮ್ಸನ್ ಅವರು ಹೊಸ ರಾಯಭಾರಿ ಆಗಿರುವುದು ಖುಷಿ ತಂದಿದೆ' ಎಂದು ಕಂಪನಿಯ ನಿರ್ದೇಶಕ ರೋಷನ್ ಬಾಪ್ಟೈನ್ ಹೇಳಿದ್ದಾರೆ.

ಗ್ರಾಹಕರ ಅಗತ್ಯತೆಗೆ ಅನುಗುಣವಾಗಿ ಬಾಳಿಕೆ ಬರುವ ಹಾಗೂ ಕೈಗೆಟಕುವ ದರದಲ್ಲಿ ಪಾದರಕ್ಷೆಗಳನ್ನು ಒದಗಿಸಲು ಬದ್ಧವಾಗಿದೆ. ಎಲ್ಲಾ ವಯೋಮಾನ ದವರನ್ನು ಗಮನ ದಲ್ಲಿಟ್ಟುಕೊಂಡು ಹೊಸ ವಿನ್ಯಾಸ ಹಾಗೂ ಆರಾಮದಾಯಕವಾದ ಪಾದರಕ್ಷೆ ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ದುಬೈನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಹೊಸ ಜಾಹೀರಾತನ್ನು ಬಿಡುಗಡೆ ಮಾಡಲಾಯಿತು.

'ವಾಕ್‌ಮೇಟ್‌ನ ಹೊಸ ಪಾದರಕ್ಷೆ ಗಳ ವಿನ್ಯಾಸ ಮತ್ತು ತಯಾರಿಕೆಯಲ್ಲಿ ಬಳಕೆದಾರಸ್ನೇಹಿಯಾದ ಸುಧಾರಿತ ತಂತ್ರಜ್ಞಾನ ಬಳಸಲಾಗಿದೆ. ಈ ಪಾದರಕ್ಷೆ ಗಳನ್ನು ಧರಿಸಲು ಉತ್ಸುಕನಾಗಿ ದ್ದೇನೆ' ಎಂದು ಸಂಜು ಸ್ಯಾಮ್ಸನ್ ಪ್ರತಿಕ್ರಿಯಿಸಿದ್ದಾರೆ.

ವಿದೇಶಿ ವಿನಿಮಯ ಸಂಗ್ರಹ ಇಳಿಕೆ

ಮುಂಬೈ (ಪಿಟಿಐ): ಡಿಸೆಂಬರ್ 27ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹35,273 ಕೋಟಿ ಇಳಿಕೆಯಾಗಿದೆ.

2024ರ ಸೆಪ್ಟೆಂಬರ್‌ನಲ್ಲಿ ಮೀಸಲು ಸಂಗ್ರಹ ಪ್ರಮಾಣವು ₹60.47 ಲಕ್ಷ ಕೋಟಿಗೆ ತಲುಪಿತ್ತು. ಇದು ಸಾರ್ವಕಾಲಿಕ ಗರಿಷ್ಠವಾಗಿತ್ತು. ಸದ್ಯ ಒಟ್ಟು ಮೀಸಲು ಸಂಗ್ರಹ ₹54.93 ಲಕ್ಷ ಕೋಟಿಗೆ ಇಳಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತ ಮುಂದುವರಿದಿದೆ. ಇದರ ತಡೆಗೆ ಆರ್‌ಬಿಐ ವಿದೇಶಿ ವಿನಿಮಯ ಮೀಸಲು ಸಂಗ್ರಹವನ್ನು ಬಳಸಿ-ಕೊಳ್ಳುತ್ತಿದೆ. ಇದರಿಂದ ಮೀಸಲು ಸಂಗ್ರಹ ಪ್ರಮಾಣ ಕಡಿಮೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ವಿದೇಶಿ ಕರೆನ್ಸಿ ಸಂಗ್ರಹ ಮೌಲ್ಯವು ₹39,820 ಕೋಟಿ ಕಡಿಮೆಯಾಗಿದೆ. ಒಟ್ಟು ಸಂಗ್ರಹ ಪ್ರಮಾಣ ₹47.35 ಲಕ್ಷ ಕೋಟಿ ಆಗಿದೆ. ಚಿನ್ನದ ಮೀಸಲು ಸಂಗ್ರಹವು ₹4,641 ಕೋಟಿ ಹೆಚ್ಚಳವಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಮೀಸಲು ₹102 ಕೋಟಿ ಕಡಿಮೆಯಾಗಿದೆ.

ದರ ಏರಿಕೆ ಲಾಭ ಪಡೆಯಲು ಮುಂದಾದ ಬೆಳೆಗಾರರು

ಕಾಫಿ ತರಾತುರಿ ಕೊಯ್ಲು

• ರವಿ ಕೆಳಂಗಡಿ

ಕಳಸ (ಚಿಕ್ಕಮಗಳೂರು ಜಿಲ್ಲೆ): 50 ಕೆ.ಜಿ ಚೀಲ ತೂಕದ ರೊಬಸ್ಟಾ ಚೆರ್ರಿ ಕಾಫಿ ಬೆಲೆಯು ₹11,500 ತಲುಪಿದೆ. ಈ ದರ ಏರಿಕೆಯ ಲಾಭ ಪಡೆಯಲು ಬೆಳೆಗಾರರು ತರಾತುರಿಯಲ್ಲಿ ಕಾಫಿ ಕೊಯ್ಲು ಆರಂಭಿಸಿದ್ದಾರೆ.

ರೊಬಸ್ಟಾ ಕಾಫಿ ಕೆ.ಜಿಗೆ ₹405ರಿಂದ ₹410ರ ಆಸುಪಾಸಿನಲ್ಲಿದೆ. ಈ ಬಾರಿ ಬಹುತೇಕ ತೋಟಗಳಲ್ಲಿ ಒಂದು ಮೂಟೆ ರೊಬಸ್ಟಾ ಚೆರ್ರಿಯಲ್ಲಿ 27ರಿಂದ 28 ಕೆ.ಜಿ. ಬೀಜ ಸಿಗುತ್ತಿದೆ. ಇದರಿಂದಾಗಿ ವ್ಯಾಪಾರಿಗಳು ಹೆಚ್ಚು ಷರತ್ತು ಇಲ್ಲದೆ ಕಾಫಿ ಖರೀದಿಸುತ್ತಿದ್ದಾರೆ.

'ಮೊದಲ ಕೊಯ್ಲಿನಲ್ಲಿ ಒಂದು ಚೀಲ ಕಾಫಿಗೆ 29 ಕೆ.ಜಿ. ಬೀಜ ಸಿಕ್ಕಿದೆ. ಇದರಿಂದ ಚೀಲವೊಂದಕ್ಕೆ ₹11,500 ಬೆಲೆ ಏರಿಕೆಯಾಗಿದೆ' ಎಂದು ಕಳಸದ ಬೆಳೆಗಾರ ಅನಿಲ್ ಡಿಸೋಜ ತಿಳಿಸಿದರು.

'ಕಳೆದ ವರ್ಷದ ಡಿಸೆಂಬರ್ ಮಧ್ಯಭಾಗದವರೆಗೂ ಮಳೆ ಸುರಿದಿದ್ದರಿಂದ ಕಾಫಿ ಬೆಳೆ ಉತ್ತಮ ಬೆಳವಣಿಗೆ ಕಂಡಿದೆ. ಇದರಿಂದ ಈ ವರ್ಷ ಎಲ್ಲ ಬೆಳೆಗಾರರ ಕಾಫಿಯು ಹೆಚ್ಚಿನ ತೂಕ ಬರುತ್ತಿದೆ. ಹಿಂದೆಲ್ಲ ಚಳಿಗಾಲದಲ್ಲೂ ಕಾಫಿಗೆ ನೀರು ಕೊಡುವಂತೆ ಸಲಹೆ ಮಾಡುತ್ತಿದ್ದರು. ಈ ವರ್ಷ ಮಳೆಯೇ ಆ ಕೆಲಸ ಮಾಡಿದ್ದರಿಂದ ಕಾಫಿಯಲ್ಲಿ ತೂಕ ಹೆಚ್ಚಾಗಿದೆ' ಎನ್ನುತ್ತಾರೆ ಹೊರನಾಡಿನಲ್ಲಿ ತೋಟ ಹೊಂದಿರುವ ಬೆಳೆಗಾರ ವಿಶಾಲ್ ನೋಟದ.

ಪ್ರತಿವರ್ಷ ಒಂದೇ ಬಾರಿಗೆ ಕಾಫಿ ಕೊಯ್ಲು ಮಾಡಲಾಗುತ್ತಿತ್ತು. ಈ ಬಾರಿ ಹಣ್ಣು ಮಾತ್ರ ಕೊಯ್ಯುವ ಕ್ರಮ ಹೆಚ್ಚಾಗಿದೆ. ಇದರಿಂದ ಎರಡನೇ ಕೊಯ್ಲಿನಲ್ಲಿ ಹೆಚ್ಚು ಹಣ್ಣು ಸಿಗಲಿದ್ದು, ಹೆಚ್ಚಾಗುತ್ತದೆ ಎಂಬುದು ಬೆಳೆಗಾರರ ಅಂಬೋಣ. ಈ ಬಾರಿ ಕಾಫಿ ಕೊಯ್ಯುವ ಕಾರ್ಮಿಕರಿಗೆ ಹೆಚ್ಚಿನ ಕೂಲಿ ಸಿಗುತ್ತಿದೆ.

ಬೆಳೆಗಾರರು ಕಣದಲ್ಲಿ ಕಾಫಿ ಒಣಗಿಸುವಾಗಲೂ ಎಚ್ಚರ ವಹಿಸುತ್ತಿ-ದ್ದಾರೆ. ಕಾಫಿ ಅತಿಯಾಗಿ ಒಣಗಿಸಿದರೆ ತೂಕದಲ್ಲಿ ನಷ್ಟ ಆಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಬೆಳೆಗಾರರು ಅಗತ್ಯ ಇರುವಷ್ಟೇ ಒಣಗಿಸುತ್ತಿದ್ದಾರೆ.

ರೊಬಸ್ಟಾ ಕಾಫಿಯಲ್ಲಿ ಶೇ 13ರ ವರೆಗೆ ತೇವಾಂಶ ಇರಬಹುದು. ಅತಿಹೆಚ್ಚು ಒಣಗಿಸಿದರೆ ತೇವಾಂಶ 10ಕ್ಕಿಂತ ಕಡಿಮೆ ಆಗುತ್ತದೆ. ಅಂತಹ ಸಂದರ್ಭದಲ್ಲಿ ಚೀಲವೊಂದಕ್ಕೆ 2 ಕೆ.ಜಿ ತೂಕ ಇಳಿಕೆಯಾಗುತ್ತದೆ ಎಂಬುದು ಬೆಳೆಗಾರರ ಲೆಕ್ಕಾಚಾರವಾಗಿದೆ.

'ವಿಯೆಟ್ನಾಂನಲ್ಲಿ ರೊಬಸ್ಟಾ ಮತ್ತು ಬ್ರೆಜಿಲ್‌ನಲ್ಲಿ ಅರೇಬಿಕಾ ಕಾಫಿ ಫಸಲು ನಷ್ಟವಾಗಿದೆ. ಇದರಿಂದ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿ ದರ ಇನ್ನಷ್ಟು ಏರಿಕೆ ಆಗುವ ನಿರೀಕ್ಷೆ ಇದೆ' ಎಂದು ವ್ಯಾಪಾರಿಗಳು ಹೇಳುತ್ತಾರೆ.


ಕಳಸದ ಕಾಫಿ ಕಣವೊಂದರಲ್ಲಿ ಒಣಗಿದ ಕಾಫಿಯನ್ನು ಕಾರ್ಮಿಕರು ರಾಶಿ ಮಾಡಿದರು

ಮುದ್ರೆಮನೆ ಕಾಫಿ

(50 ಕೆಜಿಗೆ)



ಎಪಿ	₹23100
ಎಸಿ	₹11900
ಆರ್‌ಪಿ	₹19200
ಆರ್‌ಸಿ	₹10600

ಕಾಫಿ ಹಣ್ಣು ಕೊಯ್ಲು ಮಾಡಲು ಕಾರ್ಮಿಕರ ಕೊರತೆ ಇದೆ. ಈ ವರ್ಷ ಬೆಲೆ ಹೆಚ್ಚಾಗಿದೆ. ಹೆಚ್ಚಿನ ಕೂಲಿ ನೀಡಿ ಕೊಯ್ಲು ಮಾಡಿಸಬಹುದು


ಕೆ.ಆರ್.ಭಾಸ್ಕರ್,
ಅಧ್ಯಕ್ಷ, ಕಳಸ ಮತ್ತು ಬಾಳೂರು ಕಾಫಿ ಬೆಳೆಗಾರರ ಸಂಘ

ಸುದ್ದಿ 2 ನಿಮಿಷ

ಸೆನ್ಸೆಕ್ಸ್, ನಿಫ್ಟಿ ಶೇ 1ರಷ್ಟು ಇಳಿಕೆ

ಮುಂಬೈ (ಪಿಟಿಐ): ಸತತ ಎರಡು ದಿನಗಳ ಗೂಳಿಯ ಓಟಕ್ಕೆ ಶುಕ್ರವಾರದ ವಹಿವಾಟಿನಲ್ಲಿ ತೆರೆ ಬಿದ್ದಿದೆ. ಕರಡಿ ಕುಣಿತ ಜೋರಾಗಿದ್ದರಿಂದ ಷೇರು ಸೂಚ್ಯಂಕಗಳು ಶೇ 1ರಷ್ಟು ಇಳಿಕೆ ಕಂಡಿವೆ.

ಬ್ಯಾಂಕಿಂಗ್ ಹಾಗೂ ಐ.ಟಿ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯದ ಕುಸಿತ ಮುಂದುವರಿದಿರುವುದು ಕೂಡ ಇದಕ್ಕೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 720 ಅಂಶ ಕುಸಿತ ಕಂಡು 79,223 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 183 ಅಂಶ ಇಳಿಕೆ ಕಂಡು, 24,004 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಜೊಮಾಟೊ, ಎಚ್‌ಡಿಎಫ್‌ಸಿ ಬ್ಯಾಂಕ್, ಟೆಕ್ ಮಹೀಂದ್ರ, ಅದಾನಿ ಪೋರ್ಟ್ಸ್, ಟಿಸಿಎಸ್, ಐಸಿಐಸಿಐ ಬ್ಯಾಂಕ್, ಸನ್ ಫಾರ್ಮಾ, ಎಲ್ ಆ್ಯಂಡ್ ಟಿ, ಎಚ್‌ಸಿಎಲ್ ಟೆಕ್ ಮತ್ತು ಐಟಿಸಿ ಷೇರುಗಳ ಮೌಲ್ಯದಲ್ಲಿ ಇಳಿಕೆಯಾಗಿದೆ.

ಟಾಟಾ ಮೋಟರ್ಸ್, ನೆಸ್ಲೆ, ಟೈಟನ್, ಎಚ್‌ಸಿಎಲ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಮೌಲ್ಯದಲ್ಲಿ ಏರಿಕೆಯಾಗಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು 4 ಪೈಸೆ ಇಳಿಕೆ ಕಂಡಿದೆ. ಪ್ರತೀ ಡಾಲರ್ ಮೌಲ್ಯ ₹85.79 ಆಗಿದೆ.

15ರಿಂದ ನವೋದ್ಯಮ ಬೈಠಕ್

ನವದೆಹಲಿ (ಪಿಟಿಐ): ಸ್ಟಾರ್ಟ್‌ಅಪ್ ಪಾಲಿಸಿ ಫೋರಂನಿಂದ (ಎಸ್‌ಪಿಎಫ್) ಇದೇ 15 ಮತ್ತು 16ರಂದು ನವದೆಹಲಿಯ ಭಾರತ ಮಂಟಪದಲ್ಲಿ ನವೋದ್ಯಮ ಬೈಠಕ್ ಹಮ್ಮಿಕೊಳ್ಳಲಾಗಿದೆ.

ರೇಜರ್‌ಪೇ, ಸಿಆರ್‌ಇಡಿ, ಗ್ರೋವ್, ಜೊರೊದಾ, ಪೈನ್ ಲ್ಯಾಬ್, ಒಯೊ, ಸ್ವಿಗ್ಗಿ, ಡ್ರೀಮ್11 ಸೇರಿ ಹಲವು ನವೋದ್ಯಮಗಳು ಜೊತೆಗೂಡಿ ಈ ಬೈಠಕ್ ಸಂಘಟಿಸಿವೆ.

ದೇಶದಲ್ಲಿ ನವೋದ್ಯಮಗಳಿಗೆ ಉತ್ತೇಜನ ನೀಡಲು ಹಾಗೂ ಉದ್ಯಮಶೀಲತೆ ಮತ್ತು ಅನ್ವೇಷಣೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಬೈಠಕ್‌ನ ಸಹಭಾಗಿತ್ವ ಹೊಂದಲು ನಿರ್ಧರಿಸಲಾಗಿದೆ ಎಂದು ಕೈಗಾರಿಕಾ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ತಿಳಿಸಿದೆ.

'ಈ ಸಹಭಾಗಿತ್ವದಿಂದ ದೇಶದಲ್ಲಿ ಹೊಸ ಅನ್ವೇಷಣೆ ಮತ್ತು ತಂತ್ರಜ್ಞಾನ ಅಳವಡಿಕೆಗೆ ಸಹಕಾರಿಯಾಗಲಿದೆ. ಇದರಿಂದ ತಯಾರಿಕಾ ವಲಯದ ಸಾಮರ್ಥ್ಯ ಹೆಚ್ಚಳಕ್ಕೆ ನೆರವಾಗಲಿದೆ. ಇಲಾಖೆ ಹಾಗೂ ಎಸ್‌ಪಿಎಫ್ ಸದಸ್ಯರು ಒಗ್ಗೂಡಿ ಜಾಗತಿಕ ಮಟ್ಟದಲ್ಲಿ ಭಾರತದ ನವೋದ್ಯಮಗಳಿಗೆ ವೇದಿಕೆ ಒದಗಿಸಲು ಅನುಕೂಲವಾಗಲಿದೆ' ಎಂದು ಸ್ಟಾರ್ಟ್‌ಅಪ್ ಇಂಡಿಯಾ ನಿರ್ದೇಶಕ ಸುಮೀತ್ ಕುಮಾರ್ ಜರಂಗಲ್ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಸಾಮಾಜಿಕ ಮಾಧ್ಯಮ ಖಾತೆ ಪೋಷಕರ ಒಪ್ಪಿಗೆ ಕಡ್ಡಾಯ'

ನವದೆಹಲಿ (ಪಿಟಿಐ): ಹದಿನೆಂಟು ವರ್ಷಕ್ಕಿಂತ ಕೆಳಗಿನವರು ಸಾಮಾಜಿಕ ಮಾಧ್ಯಮದಲ್ಲಿ ಖಾತೆ ತೆರೆಯಲು ಪೋಷಕರ ಒಪ್ಪಿಗೆ ಕಡ್ಡಾಯ ಎಂದು ಕೇಂದ್ರ ಸರ್ಕಾರವು ಶುಕ್ರವಾರ ಬಿಡುಗಡೆ ಮಾಡಿದ ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ (ಡಿಪಿಡಿಪಿ) ಕುರಿತ ಕರಡು ನಿಯಮಾವಳಿಗಳಲ್ಲಿ ತಿಳಿಸಿದೆ.

ಪೋಷಕರುಅನುಮೋದನೆನೀಡಿರುವುದನ್ನುಖಚಿತಪಡಿಸುವವರೆಗೆ ಸಾಮಾಜಿಕ ಮಾಧ್ಯಮ ಸಂಸ್ಥೆಗಳು 18 ವರ್ಷಕ್ಕಿಂತ ಕೆಳಗಿನವರ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಪ್ರಾರಂಭಿಸಲು ಅಥವಾ ಅವರ ವೈಯಕ್ತಿಕ ಮಾಹಿತಿ ಸಂಗ್ರಹಿಸಲು ಸಾಧ್ಯವಿಲ್ಲ.

ಡಿಪಿಡಿಪಿ ನಿಯಮಾವಳಿ ಉಲ್ಲಂಘಿಸಿದರೆ ದಂಡ ವಿಧಿಸುವ ಬಗ್ಗೆ ಯಾವುದೇ ಪ್ರಸ್ತಾಪವನ್ನು ಸರ್ಕಾರ ಮಾಡಿಲ್ಲ. ಕರಡು ನಿಯಮಾವಳಿಗಳ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಕ್ರೋಢೀಕರಿಸಲಿದೆ. ಫೆಬ್ರುವರಿ 18ರ ಬಳಿಕ ಅಂತಿಮವಾಗಿ ಅಧಿಸೂಚನೆ ಹೊರಡಿಸಲಿದೆ.

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಕಾಯ್ದೆ 2023ರ ಸೆಕ್ಷನ್ 40ರ ಸಬ್ ಸೆಕ್ಷನ್ (1) ಮತ್ತು (2) ಅಡಿ ನೀಡಿರುವ ಅಧಿಕಾರ ಚಲಾಯಿಸುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರವು ಈ ನಿಯಮಾವಳಿಗಳನ್ನು ರೂಪಿಸಿದೆ. ಕರಡು ನಿಯಮಾವಳಿ ಜಾರಿಯ ನಂತರ ಅದು ಪರಿಣಾಮ ಬೀರುವ ವ್ಯಕ್ತಿಗಳ ಮಾಹಿತಿಗಾಗಿ ಇದನ್ನು ಪ್ರಕಟಿಸಲಾಗಿದೆ ಎಂದು ಕರಡು ಅಧಿ-ಸೂಚನೆಯಲ್ಲಿ ಹೇಳಲಾಗಿದೆ.

ಗ್ರಾಮೀಣ ಬಡತನ ಶೇ 4.86ಕ್ಕೆ ಇಳಿಕೆ

ನವದೆಹಲಿ (ಪಿಟಿಐ): 2011–12ರಲ್ಲಿ ದೇಶದ ಗ್ರಾಮೀಣ ಪ್ರದೇಶದ ಬಡತನ ಪ್ರಮಾಣ ಶೇ 25.7ರಷ್ಟಿತ್ತು. 2023–24ನೇ ಆರ್ಥಿಕ ವರ್ಷದ ಅಂತ್ಯಕ್ಕೆ ಶೇ 4.86ಕ್ಕೆ ಇಳಿದಿದೆ ಎಂದು ಎಸ್‌ಬಿಐ ಸಂಶೋಧನಾ ವರದಿ ಶುಕ್ರವಾರ ತಿಳಿಸಿದೆ.

ನಗರ ಪ್ರದೇಶದ ಬಡತನ ಪ್ರಮಾಣ ಕೂಡ ಶೇ 13.7ರಿಂದ ಶೇ 4.09ಕ್ಕೆ ತಗ್ಗಿದೆ ಎಂದು ಹೇಳಿದೆ.

'ಬಡತನ ನಿವಾರಣೆಗೆ ಸಂಬಂಧಿಸಿದಂತೆ ಸರ್ಕಾರದ ಕಾರ್ಯಕ್ರಮಗಳೇ ಇದಕ್ಕೆ ಕಾರಣ. ಅಲ್ಲದೆ, ಆಹಾರ ಪದಾರ್ಥ ಗಳ ಬೆಲೆ ಇಳಿಕೆಯಾಗಿದೆ. ಇದರಿಂದ ಆಹಾರ ವೆಚ್ಚವು ಕಡಿಮೆ ಆಗಿದೆ' ಎಂದು ಎಸ್‌ಬಿಐನ ಬಳಕೆಯ ವೆಚ್ಚ ಸಮೀಕ್ಷೆ ತಿಳಿಸಿದೆ.

ವಾಹನ ತಯಾರಿಕಾ ಕಂಪನಿಗಳ ಒಪ್ಪಿಗೆ: ಗೋಯಲ್

'ಇ.ವಿ ಸಬ್ಸಿಡಿ ಮುಂದುವರಿಕೆ ಇಲ್ಲ'


ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): 'ವಿದ್ಯುತ್‌ಚಾಲಿತ ವಾಹನಗಳಿಗೆ ನೀಡುತ್ತಿರುವ ಸಬ್ಸಿಡಿ ಯೋಜನೆಯ ಅವಧಿ ಮುಕ್ತಾಯಗೊಂಡ ಬಳಿಕ ಮತ್ತೆ ಸಬ್ಸಿಡಿ ಸೌಲಭ್ಯ ಮುಂದುವರಿಸುವ ಅಗತ್ಯವಿಲ್ಲ. ಇದಕ್ಕೆ ಇ.ವಿ ವಾಹನ ತಯಾರಿಕಾ ಕಂಪನಿಗಳು ಸರ್ವಾನುಮತದಿಂದ ಒಪ್ಪಿಗೆ ನೀಡಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಶುಕ್ರವಾರ ವಿದ್ಯುತ್‌ಚಾಲಿತ ವಾಹನ ತಯಾರಿಕಾ ಕಂಪನಿಗಳ ಪ್ರತಿನಿಧಿಗಳೊಟ್ಟಿಗೆ ಬ್ಯಾಟರಿ ಚಾರ್ಜಿಂಗ್ ಕೇಂದ್ರಗಳು ಮತ್ತು ಬ್ಯಾಟರಿಗಳ ವಿನಿಮಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ ಬಳಿಕ ಅವರು ಮಾತನಾಡಿದರು.

'ಚಾರ್ಜ್ ಖಾಲಿಯಾದ ಬ್ಯಾಟರಿಗಳನ್ನು ಚಾರ್ಜ್ ಮಾಡಿದ ಬ್ಯಾಟರಿಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಕಂಪನಿಗಳು ಸಹಕರಿಸಬೇಕು. ಬ್ಯಾಟರಿ ವಿನಿಮಯಕ್ಕಾಗಿ ಸಂಪನ್ಮೂಲವನ್ನು ಹಂಚಿಕೊಳ್ಳಬೇಕು. ಆದರೆ, ಅವರು ಸಂಪನ್ಮೂಲ ಹಂಚಿಕೊಳ್ಳಲು ಇಚ್ಛಿಸುತ್ತಾರೆಯೇ ಅಥವಾ ತಮ್ಮದೇ ಆದ ಬ್ಯಾಟರಿಗಳೊಂದಿಗೆ ವಾಹನಗಳನ್ನು ಮಾರಾಟ ಮಾಡುತ್ತಾರೆಯೇ ಎಂಬುದನ್ನು ನಿರ್ಧರಿಸುವುದು ಕಂಪನಿಗಳಿಗೆ ಬಿಟ್ಟ ವಿಚಾರವಾಗಿದೆ' ಎಂದರು.

ಪೆಟ್ರೋಲ್ ಬಂಕ್‌ಗಳಲ್ಲಿ ಇ.ವಿ ಚಾರ್ಜಿಂಗ್ ಕೇಂದ್ರಗಳು/ ಬ್ಯಾಟರಿ ವಿನಿಮಯ ಸೌಲಭ್ಯ ಒದಗಿಸುವುದಕ್ಕೆ ಸಂಬಂಧಿಸಿದಂತೆ ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ಕರಡು ಮಾರ್ಗಸೂಚಿಗಳನ್ನು ಪ್ರಕಟಿಸಿದೆ ಎಂದರು.

ಕೇಂದ್ರ ಸರ್ಕಾರವು ಕಳೆದ ವರ್ಷದ ಮಾರ್ಚ್‌ನಲ್ಲಿ ಹೊಸ ಇ.ವಿ ನೀತಿ ಪ್ರಕಟಿಸಿದೆ. ಇದರಡಿ ದೇಶದಲ್ಲಿ ಕನಿಷ್ಠ ₹4,150 ಕೋಟಿ ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಪ್ರಕಟಿಸಿದೆ.

ಫೇಮ್ 2 ಯೋಜನೆಯಡಿ ದೇಶದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ 10,763 ಚಾರ್ಜಿಂಗ್ ಕೇಂದ್ರಗಳನ್ನು ತೆರೆಯಲು ನಿರ್ಧರಿಸಿದೆ. ಪಿಎಂ ಇ-ಡ್ರೈವ್ ಯೋಜನೆಯಡಿ ವಿದ್ಯುತ್‌ಚಾಲಿತ ಬಸ್, ತ್ರಿಚಕ್ರವಾಹನ, ಆಟೊರಿಕ್ಷಾ ಮತ್ತು ದ್ವಿಚಕ್ರವಾಹನಗಳಿಗೆ ಪ್ರೋತ್ಸಾಹ ಧನ ನೀಡುತ್ತಿದೆ.

'ರಫ್ತು ಮೌಲ್ಯ ₹68 ಲಕ್ಷ ಕೋಟಿ ದಾಟುವ ನಿರೀಕ್ಷೆ'

ನವದೆಹಲಿ (ಪಿಟಿಐ): 'ಜಾಗತಿಕ ಆರ್ಥಿಕ ಅನಿಶ್ಚಿತತೆ ನಡುವೆಯೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯವು ₹68.63 ಲಕ್ಷ ಕೋಟಿ ದಾಟುವ ನಿರೀಕ್ಷೆಯಿದೆ' ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

2023–24ರಲ್ಲಿ ರಫ್ತು ಮೌಲ್ಯ ₹66.74 ಲಕ್ಷ ಕೋಟಿ ಆಗಿತ್ತು ಎಂದು ತಿಳಿಸಿದ್ದಾರೆ.

ಜಾಗತಿಕ ವ್ಯಾಪಾರ ವ್ಯವಸ್ಥೆಯಲ್ಲಿ ಒತ್ತಡದ ಸ್ಥಿತಿ ಸೃಷ್ಟಿಯಾಗಿದೆ. ಆದರೆ, ದೇಶದ ರಫ್ತು ಪ್ರಮಾಣ ಸದೃಢವಾಗಿದೆ. ಸೇವಾ ವಲಯದ ರಫ್ತು ಕ್ಷಿಪ್ರಗತಿಯಲ್ಲಿ ಏರಿಕೆ ದಾಖಲಿಸುತ್ತಿದೆ ಎಂದು ಹೇಳಿದ್ದಾರೆ.

ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ಕೋವಿಡ್ ಸಾಂಕ್ರಾಮಿಕದ ನಂತರವೂ ವಿದೇಶಿ ವಿನಿಮಯ ಸಂಗ್ರಹದ ಬಿಕ್ಕಟ್ಟನ್ನು ಎದುರಿಸುತ್ತಿವೆ. ಕೆಂಪು ಸಮುದ್ರದ ಬಿಕ್ಕಟ್ಟು ಸರಕು ಸಾಗಣೆ ಮೇಲೆ ಪರಿಣಾಮ ಬೀರಿದೆ ಎಂದು ಹೇಳಿದ್ದಾರೆ.

ಅಮೆರಿಕದ ಹೊಸ ಆಡಳಿತದೊಂದಿಗೆ ದೀರ್ಘ ಮತ್ತು ಮಹತ್ವದ ಹೊಂದಾಣಿಕೆ ಮಾಡಿಕೊಳ್ಳಲು ಎದುರು ನೋಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಕಾರ್ಕಳ	
ಹೊಸತು	25000-35000
ಹಳತು	30000-45000
ಕುಮಟ	
ಚಾಲಿ	33099-37519
ಚಿಪ್ಪು	20189-26899
ಕೋಕ	6589-22229
ಫ್ಯಾಕ್ಟರಿ	3569-20911
ಹಳೆಚಾಲಿ	36569-38899
ಹೊಸಚಾಲಿ	25609-30051
ಪುತ್ತೂರು	
ಕೋಕ	22000-27500
ಹೊಸತು	25000-34500
ಹಳತು	36000-48500
ಶಿವಮೊಗ್ಗ	
ಬೆಟ್ಟೆ	47299-52199
ಗೊರಬಲು	17009-33069
ರಾಶಿ	32189-51111
ಸರಕು	55000-79240
ಸಿದ್ದಾಪುರ	
ಬಿಳಿಗೋಟು	24119-27909
ಚಾಲಿ	31899-37899
ಕೋಕ	21899-26099
ಹೊಸಚಾಲಿ	22709-33409
ಕೆಂಪುಗೋಟು	20319-21389
ರಾಶಿ	41029-47509
ತಟ್ಟಿಬೆಟ್ಟೆ	27509-40009
ಶಿರಸಿ	
ಬೆಟ್ಟೆ	28690-42181
ಬಿಳಿಗೋಟು	22199-30599
ಚಾಲಿ	34199-39018
ಕೆಂಪುಗೋಟು	11919-23809
ರಾಶಿ	41299-45208
ಯಲ್ಲಾಪುರ	
ಅಪಿ	60169-68099
ಬಿಳಿಗೋಟು	12099-29110
ಚಾಲಿ	29600-38799
ಕೋಕ	4242-18812
ಕೆಂಪುಗೋಟು	15900-25300
ರಾಶಿ	39619-58299
ತಟ್ಟಿಬೆಟ್ಟೆ	26860-39419

ಜೈನ್ ಅಸೋಸಿಯೇಷನ್ ಜಿತೇಂದ್ರ ಕುಮಾರ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ


ಎಸ್. ಜಿತೇಂದ್ರ ಕುಮಾರ್

ಬೆಂಗಳೂರು: ಕರ್ನಾಟಕ ಜೈನ ಅಸೋಸಿಯೇಷನ್‌ನ 2024–29ರ ಅವಧಿಗೆ ಅಧ್ಯಕ್ಷರಾಗಿ ಎಸ್. ಜಿತೇಂದ್ರ ಕುಮಾರ್ ಆಯ್ಕೆ ಆಗಿದ್ದಾರೆ.

1999ರಿಂದ 2019ರವರೆಗೆ 20 ವರ್ಷ ಜಿತೇಂದ್ರ ಕುಮಾರ್ ಅವರೇ ಅಧ್ಯಕ್ಷರಾಗಿದ್ದರು. ಮುಂದಿನ ಅವಧಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರು ಮತ್ತೆ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ರಾಜಕೀರ್ತಿ ಮತ್ತು ಕಲಗೌಡ (ಶೀತಲ) ಭುಜಗೌಡ ಪಾಟೀಲ್, ಕಾರ್ಯದರ್ಶಿಯಾಗಿ ಆಶಾಪ್ರಭು, ಸಹ ಕಾರ್ಯದರ್ಶಿಗಳಾಗಿ ನೀರಜಾ ನಾಗೇಂದ್ರ ಕುಮಾರ್, ವಿ. ಪ್ರಶಾಂತ್, ಕೋಶಾಧಿಕಾರಿಯಾಗಿ ಎ.ಸಿ. ಧರಣೇಂದ್ರಯ್ಯ ಆಯ್ಕೆಯಾಗಿದ್ದಾರೆ. ಜೊತೆಗೆ ಬೆಂಗಳೂರು ಸೇರಿದಂತೆ ರಾಜ್ಯದ 26 ವಿಭಾಗಗಳಿಂದ 38 ಜನರನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ.

ದರ: ಪರ–ವಿರೋಧ ಸಮರ

ಗುಲಾಬಿ ಕೊಟ್ಟು ಬಿಜೆಪಿ ಪ್ರತಿಭಟನೆ

ಒಂದನೇ ಪುಟದಿಂದ...

'ಪ್ರಯಾಣದ ದರ ₹200ರಿಂದ ₹300ರಷ್ಟು ಜಾಸ್ತಿ ಆಗಿದೆ. ಟಿಕೆಟ್ ದರ ಮಾತ್ರವಲ್ಲ, ಮುಂದೆ ಹಾಲಿನ ದರವನ್ನೂ ಏರಿಕೆ ಮಾಡುತ್ತಾರೆ. ನೀರಿನ ದರವನ್ನೂ ಏರಿಕೆ ಮಾಡುತ್ತಾರೆ. ಸಿದ್ದರಾಮಯ್ಯ ಎಲ್ಲ ವಸ್ತುಗಳ ಬೆಲೆಯನ್ನು ಗಗನಕ್ಕೆ ಮುಟ್ಟಿಸುವ ಶಪಥ ತೊಟ್ಟಿದ್ದಾರೆ' ಎಂದು ಹೇಳಿದರು.

ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, 'ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣ ದರ ನೀಡಿ, ಗಂಡಸರಿಗೆ ಬರೆ ಹಾಕಿದೆ. ಗ್ಯಾರಂಟಿ ಕಾರಣಗಳಿಂದ ಜನರು ಎಲ್ಲದಕ್ಕೂ ದುಬಾರಿ ಬೆಲೆ ತೆರಬೇಕಾಗಿದೆ. ಅಭಿವೃದ್ಧಿ ಒಂದು ಬಿಟ್ಟು ತಲೆ ಬೋಳಿಸುವ ಕೆಲಸ ಮಾಡುವ ಸರ್ಕಾರ ಇದಾಗಿದೆ' ಎಂದು ಟೀಕಿಸಿದರು.

ಬಿಜೆಪಿಯ ಅವಧಿಯಲ್ಲಿ ಶೇ 47.8ರಷ್ಟು ಏರಿಕೆ

ಒಂದನೇ ಪುಟದಿಂದ...

ವೇತನ ಪರಿಷ್ಕರಣೆ ಮಾಡಿದರೂ ಸೌಲಭ್ಯ ನೀಡಿರಲಿಲ್ಲ. ಖಾಲಿ ಹುದ್ದೆ ಭರ್ತಿ ಮಾಡಲಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಎಲ್ಲರಿಗೂ ಅನುಕೂಲ ಮಾಡಿಕೊಟ್ಟಿದೆ. 9 ಸಾವಿರ ನೇಮಕಾತಿ ಮಾಡಿದೆ ಎಂದರು.

ಶಕ್ತಿ ಯೋಜನೆಗೆ ₹8,800 ಕೋಟಿ ವೆಚ್ಚವಾಗಿದೆ. ಸರ್ಕಾರ ₹6,543 ಕೋಟಿ ಬಿಡುಗಡೆ ಮಾಡಿದೆ. ದರ ಹೆಚ್ಚಳದಿಂದ ₹1,300 ಕೋಟಿ ಹೆಚ್ಚುವರಿ ಸಂಗ್ರಹದ ನಿರೀಕ್ಷೆ ಇದೆ. ಶಕ್ತಿ ಯೋಜನೆ ಹೊರತಾಗಿ ನಾಲ್ಕು ನಿಗಮಗಳಿಗೆ ಪ್ರತಿ ವರ್ಷ ₹2 ಸಾವಿರ ಕೋಟಿ ನೆರವು ನೀಡಲು ಮುಖ್ಯಮಂತ್ರಿಗೆ ಪ್ರಸ್ತಾವ ಸಲ್ಲಿಸಿದ್ದೇವೆ ಎಂದು ಮಾಹಿತಿ ನೀಡಿದರು.

ಜನ ಬೆಲೆ ಏರಿಕೆ ಮರೆತು ಬಿಡುತ್ತಾರೆ: ಎಚ್‌ಡಿಕೆ


ಒಂದನೇ ಪುಟದಿಂದ...

'ಈ ಸರ್ಕಾರದ ಅವಧಿಯಲ್ಲಿ ಜನರು ಬೆಲೆ ಏರಿಕೆಗೆ ಹೊಂದಿಕೊಂಡುಬಿಟ್ಟಿದ್ದಾರೆ. ರಾಜ್ಯದಲ್ಲಿ ಈಗ ಬೆಲೆ ಏರಿಕೆ ಎಂಬುದು ಅಚ್ಚರಿಯ ವಿಷಯವೇ ಅಲ್ಲ. ಸರ್ಕಾರವು ಜನರ ಮೇಲೆ ಬರೆ ಎಳೆಯುತ್ತಲೇ ಇದೆ. ಜನರು ಅದನ್ನು ಸಹಿಸಿಕೊಳ್ಳುತ್ತಲೇ ಇದ್ದಾರೆ. ಇದನ್ನೇ, ಬೆಲೆ ಏರಿಕೆಗೆ ಜನರ ಸಮ್ಮತಿ ಇದೆ ಎಂದು ಸರ್ಕಾರ ಭಾವಿಸಿದಂತಿದೆ. ಆದರೆ ಇದು ಹೆಚ್ಚು ದಿನ ನಡೆಯುವುದಿಲ್ಲ' ಎಂದು ಹೇಳಿದರು. 'ಡೀಸೆಲ್ ಬೆಲೆ ಇಳಿಸುವಂತೆ ಕುಮಾರಸ್ವಾಮಿ ಅವರು ಕೇಂದ್ರ ಸರ್ಕಾರದ ಮನವೊಲಿಸಲಿ ಎಂದು ಕಾಂಗ್ರೆಸ್ ನಾಯಕರು ಹೇಳುತ್ತಿದ್ದಾರೆ. ಡೀಸೆಲ್ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಆಧರಿಸಿರುತ್ತದೆ. ರಾಜ್ಯ ಸರ್ಕಾರವು ಏರಿಕೆ ಮಾಡಿರುವ ಸೆಸ್ ಅನ್ನು ಮೊದಲು ಇಳಿಸಲಿ' ಎಂದರು.

ಅಧಿಕಾರಿಗಳಿಗೆ ಇಂಧನ ಸಚಿವ ಕೆ.ಜೆ.ಜಾರ್ಜ್ ಸೂಚನೆ

ಬೇಸಿಗೆ: ಸಮರ್ಪಕ ವಿದ್ಯುತ್ ಪೂರೈಕೆಗೆ ಕ್ರಮ

ಪ್ರಜಾವಾಣಿ ವಾರ್ತೆ


ಕೆ.ಜೆ ಜಾರ್ಜ್

ಬೆಂಗಳೂರು: 'ಬೇಸಿಗೆಯಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗೆ ಯಾವುದೇ ತೊಂದರೆಯಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿದ್ಯುತ್ ಉತ್ಪಾದನೆ, ಖರೀದಿ, ವಿನಿಮಯ ಮತ್ತು ಪ್ರಸರಣ ಕುರಿತು ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್), ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಪಿಸಿಕೆಎಲ್) ಅಧಿಕಾರಿಗಳೊಂದಿಗೆ ಶುಕ್ರವಾರ ಸಭೆ ನಡೆಸಿ ಅವರು ಈ ಸೂಚನೆ ನೀಡಿದರು.

'ಕಳೆದ ಬೇಸಿಗೆಯಲ್ಲಿ ಸರಾಸರಿ 3,600 ಮೆಗಾವಾಟ್ ವಿದ್ಯುತ್ ಉತ್ಪಾದಿಸಿ ದಾಖಲೆ ನಿರ್ಮಿಸಲಾಗಿತ್ತು. ಈ ಬಾರಿ ಅದಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದನೆ ಮಾಡಿ ಹೊಸ ದಾಖಲೆ ನಿರ್ಮಿಸಬೇಕು. ಅದಕ್ಕಾಗಿ ಎಲ್ಲ ಉತ್ಪಾದನಾ ಘಟಕಗಳನ್ನು ಸನ್ನದ್ಧವಾಗಿ ಇಡಬೇಕು' ಎಂದು ನಿರ್ದೇಶನ ನೀಡಿದರು.

'ಉಷ್ಣ ವಿದ್ಯುತ್ ಸ್ಥಾವರಗಳ ವಾರ್ಷಿಕ ನಿರ್ವಹಣೆಯನ್ನು ಕಾಲಮಿತಿಯಲ್ಲಿ ನಡೆಸಿ ಅಥವಾ ತಾಂತ್ರಿಕ ಸಮಸ್ಯೆಗಳನ್ನು ಬಗೆಹರಿಸಿ ಫೆಬ್ರುವರಿ ಅಂತ್ಯದೊಳಗೆ ಎಲ್ಲಾ ಘಟಕಗಳನ್ನು (ಆರ್‌ಟಿಪಿಎಸ್‌ನ ಒಂದು ಘಟಕ ಹೊರತುಪಡಿಸಿ) ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆಗೆ ಸಿದ್ಧಗೊಳಿಸಬೇಕು' ಎಂದು ಸೂಚಿಸಿದರು.

ವಿದ್ಯುತ್ ವಿನಿಮಯಕ್ಕೆ ಒತ್ತು: ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸುವ ಬದಲು ವಿದ್ಯುತ್ ವಿನಿಮಯಕ್ಕೆ ಆದ್ಯತೆ ನೀಡಬೇಕು. ಈ ಬಗ್ಗೆ ಈಗಿನಿಂದಲೇ ಅನ್ಯ ರಾಜ್ಯಗಳೊಂದಿಗೆ ಒಪ್ಪಂದಕ್ಕೆ ಮಾತುಕತೆ ನಡೆಸಬೇಕು. ಅದೇ ರೀತಿ ಅಲ್ಪಾವಧಿ ವಿದ್ಯುತ್ ಖರೀದಿ ದುಬಾರಿಯಾಗಿರುವು-ದರಿಂದ ಕಡಿಮೆ ದರಕ್ಕೆ ದೀರ್ಘಾವಧಿ ವಿದ್ಯುತ್ ಖರೀದಿಗೆ ಒತ್ತು ನೀಡಬೇಕು. ಹಾಗೆ ಮಾಡಿದಲ್ಲಿ ಹೆಚ್ಚುವರಿ ವಿದ್ಯುತ್ ಅನ್ನು ಬೇಡಿಕೆ ದಟ್ಟಣೆಯ ಸಮಯದಲ್ಲಿ ಹೆಚ್ಚು ದರಕ್ಕೆ ಮಾರಾಟ ಮಾಡಿ ಹೊರೆ ಕಡಿಮೆ ಮಾಡಬೇಕು ಎಂದು ಸೂಚನೆ ನೀಡಿದರು.

'ಸೌರ ವಿದ್ಯುತ್ ಉತ್ಪಾದನೆ ಹೆಚ್ಚಾಗುತ್ತಿರು-ವುದರಿಂದ ಹಗಲು ವೇಳೆಯೇ ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಪೂರೈಸಬೇಕು. ಉಷ್ಣ ವಿದ್ಯುತ್ ಮತ್ತು ಜಲ ವಿದ್ಯುತ್ ಸ್ಥಾವರಗಳಲ್ಲಿ ಸಾಧ್ಯವಾದಷ್ಟು ರಾತ್ರಿ ವೇಳೆಯ ಬಳಕೆಗೆ ವಿದ್ಯುತ್ ಉತ್ಪಾದಿಸಬೇಕು. ಆ ಮೂಲಕ ಬೇಡಿಕೆ ಮತ್ತು ಪೂರೈಕೆಯ ಮಧ್ಯೆ ಅಂತರ-ವಿಲ್ಲದಂತೆ ಎಚ್ಚರಿಕೆ ವಹಿಸಬೇಕು' ಎಂದರು.

ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಪಿಸಿಕೆಎಲ್ ವ್ಯವಸ್ಥಾಪಕ ನಿರ್ದೇಶಕ ಲೋಖಂಡೆ ಸ್ನೇಹಲ್ ಸುಧಾಕರ್, ಕೆಪಿಸಿಎಲ್ ನಿರ್ದೇಶಕರಾದ ಆರ್. ನಾಗರಾಜ್, ಎಸ್.ಕೃಷ್ಣಮೂರ್ತಿ ಸಭೆಯಲ್ಲಿ ಪಾಲ್ಗೊಂಡಿದ್ದರು.

ಜಿಲ್ ಬೈಡನ್‌ಗೆ ದುಬಾರಿ ವಜ್ರ ನೀಡಿದ ಮೋದಿ


ಜಿಲ್ ಬೈಡನ್

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರ ಪತ್ನಿ ಜಿಲ್ ಬೈಡನ್ ಅವರಿಗೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು 2023ರಲ್ಲಿ 20 ಸಾವಿರ ಡಾಲರ್ (₹17.16 ಲಕ್ಷ) ಮೌಲ್ಯದ ವಜ್ರವನ್ನು ಉಡುಗೊರೆಯಾಗಿ ನೀಡಿದ್ದಾರೆ.

ಅದೂ ಸೇರಿದಂತೆ ಜೋ ಬೈಡನ್ ಮತ್ತು ಅವರ ಕುಟುಂಬ 2023ರಲ್ಲಿ ವಿದೇಶಗಳ ಹಲವು ನಾಯಕರಿಂದ ಸಾವಿರಾರು ಡಾಲರ್ ಮೌಲ್ಯದ ಉಡುಗೊರೆಗಳನ್ನು ಪಡೆದಿದೆ. ಅಮೆರಿಕದ ವಿದೇಶಾಂಗ ಇಲಾಖೆಯು ಗುರುವಾರ ಪ್ರಕಟಿಸಿರುವ ತನ್ನ ವಾರ್ಷಿಕ ಲೆಕ್ಕಪತ್ರ ವರದಿಯಲ್ಲಿ ಈ ಬಗ್ಗೆ ಉಲ್ಲೇಖಿಸಲಾಗಿದೆ.

ವಿದೇಶಿ ನಾಯಕರು ನೀಡಿರುವ ಉಡುಗೊರೆಗಳ ಪೈಕಿ ಮೋದಿ ಅವರು ನೀಡಿರುವ ವಜ್ರವು ಅತ್ಯಂತ ದುಬಾರಿ ಮೌಲ್ಯದ ಉಡುಗೊರೆಯಾಗಿದೆ. ಈ ವಜ್ರವು 7.5 ಕ್ಯಾರೆಟ್‌ನಿಂದ ಕೂಡಿದ್ದು, ಬೈಡನ್ ಕುಟುಂಬದವರು ಪಡೆದಿರುವ ಇತರ ಉಡುಗೊರೆ ಗಳಿಗಿಂತ ಅತ್ಯಂತ ದುಬಾರಿಯದ್ದಾಗಿದೆ.

ಇದೇ ಅಲ್ಲದೆ, ಅಮೆರಿಕದಲ್ಲಿ-ರುವ ಉಕ್ರೇನ್‌ನ ರಾಯಭಾರಿಯು ಜಿಲ್ ಅವರಿಗೆ 14,063 ಡಾಲರ್ (₹ 12.06 ಲಕ್ಷ) ಬ್ರೂಚ್ ಅನ್ನು ಉಡುಗೊರೆಯಾಗಿ ನೀಡಿದ್ದಾರೆ. ಈಜಿಪ್ಟ್ ಅಧ್ಯಕ್ಷ ಮತ್ತು ಅಲ್ಲಿನ ಪ್ರಥಮ ಮಹಿಳೆಯು 4,510 ಡಾಲರ್ (₹3.86 ಲಕ್ಷ) ಮೌಲ್ಯದ ಬ್ರೇಸ್ಲೆಟ್, ಬ್ರೂಚ್ ಮತ್ತು ಫೋಟೊ ಆಲ್ಬಂ ಅನ್ನು ಕೊಟ್ಟಿದ್ದಾರೆ.

ಮೋದಿ ಅವರು ನೀಡಿರುವ ದುಬಾರಿ ವಜ್ರವನ್ನು ವೈಟ್‌ಹೌಸ್ ಈಸ್ಟ್ ವಿಂಗ್‌ನಲ್ಲಿ ಉಳಿಸಿಕೊಳ್ಳಲಾಗಿದೆ. ಉಳಿದಂತೆ ಅಧ್ಯಕ್ಷರು ಮತ್ತು ಪ್ರಥಮ ಮಹಿಳೆಗೆ ದೊರೆತ ಉಡುಗೊರೆಗಳನ್ನು 'ಆರ್ಕೈವ್'ಗೆ ಕಳುಹಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ಹೋರಾಟ ತೀವ್ರಗೊಳಿಸಲು ಸಿಪಿಎಂ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಜನತೆಯ ಸಂಕಷ್ಟಗಳನ್ನು ದೂರ ಮಾಡಲು ಹೋರಾಟವನ್ನು ತೀವ್ರಗೊಳಿಸಲು ಹಾಗೂ ಎಡ-ಪ್ರಜಾಸತ್ತಾತ್ಮಕ ಪರ್ಯಾಯ ರಾಜಕೀಯ ರಂಗ ರೂಪಿಸುವ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ಕೆ. ಪ್ರಕಾಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ತುಮಕೂರಿನಲ್ಲಿ ನಡೆದ 24ನೇ ರಾಜ್ಯ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯ ಹಾಗೂ ಮಾಹಿತಿಗಳನ್ನು ಹಂಚಿಕೊಂಡರು.

'ರೈತರು, ಕಾರ್ಮಿಕರು, ಕೂಲಿಕಾರರು, ದುರ್ಬಲ ವರ್ಗಗಳು, ಮಧ್ಯಮ ವರ್ಗಗಳಿಗೆ ಸಂಕಷ್ಟ ತಂದೊಡ್ಡಿರುವ ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಹೋರಾಟ ತೀವ್ರಗೊಳಿಸಬೇಕು. ಮೋದಿ ಸರ್ಕಾರವು ದೇಶದ ಬಹುಸಂಖ್ಯಾತ ಬಡವರನ್ನು ಬಲಿಕೊಟ್ಟು ಮತೀಯವಾದಿ ನೀತಿಗಳ ನೆರಳಲ್ಲಿ, ಕಾರ್ಪೊರೇಟ್ ಬಂಡವಾಳದಾರರ ಹಿತಕ್ಕಾಗಿ ನೀತಿಗಳನ್ನು ಜಾರಿ ಮಾಡುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೂ ಮೋದಿ ಸರ್ಕಾರದ ರೀತಿಯ ನೀತಿಗಳನ್ನೇ ಅನುಸರಿಸುತ್ತಿದೆ ಎಂದು ಸಮ್ಮೇಳನದಲ್ಲಿ ಅಭಿಪ್ರಾಯ ವ್ಯಕ್ತವಾಯಿತು' ಎಂದರು.

ರಾಜ್ಯ ಸಮಿತಿ ಆಯ್ಕೆ: ಮುಂದಿನ ಮೂರು ವರ್ಷಗಳಿಗೆ ಏಳು ಮಹಿಳೆಯರು ಸೇರಿ 35 ಸದಸ್ಯರ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನದಲ್ಲಿ ಆಯ್ಕೆ ಮಾಡಲಾಗಿತ್ತು. ಕೆ.ಪ್ರಕಾಶ್ ರಾಜ್ಯ ಕಾರ್ಯದರ್ಶಿಯಾಗಿದ್ದು, ಯು.ಬಸವರಾಜ, ಜಿ.ಸಿ. ಬಯ್ಯಾರೆಡ್ಡಿ, ಮೀನಾಕ್ಷಿ ಸುಂದರಂ, ಎಸ್.ವರಲಕ್ಷ್ಮಿ, ಕೆ.ನೀಲಾ, ಗೋಪಾಲಕೃಷ್ಣ ಅರಳಹಳ್ಳಿ, ಯಾದವ ಶೆಟ್ಟಿ, ಸೈಯದ್ ಮುಜೀಬ್, ಎಂ.ಪಿ.ಮುನಿವೆಂಕಟಪ್ಪ, ಕೆ.ಮಹಾಂತೇಶ್ ಮತ್ತು ಚಂದ್ರಪ್ಪ ಹೊಸ್ಕೇರಾ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದಾರೆ.

ಅಲ್ಪಮೊತ್ತಕ್ಕೆ ಕುಸಿದ ಬೂಮ್ರಾ ಪಡೆ • ಪಂತ್, ಜಡೇಜ ದಿಟ್ಟ ಬ್ಯಾಟಿಂಗ್ • ಬೋಲ್ಯಾಂಡ್‌ಗೆ ನಾಲ್ಕು ವಿಕೆಟ್

ಬೌಲರ್‌ಗಳ ಮೆರೆದಾಟ ಬ್ಯಾಟರ್‌ಗಳ ಪರದಾಟ

• ಮಧು ಜವಳಿ

ಸಿಡ್ನಿ: ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಅಂತಿಮ ಟೆಸ್ಟ್ ಪಂದ್ಯದ ಮೊದಲ ದಿನ ರೋಹಿತ್ ಶರ್ಮಾ ಅವರ ಅನುಪಸ್ಥಿತಿಯು ಎದ್ದು ಕಂಡಿತು. ಆಗಸದಲ್ಲಿ ಮೋಡ ಕವಿದಂತೆ ಭಾರತ ತಂಡದಲ್ಲೂ ಮಂಕು ಆವರಿಸಿತ್ತು. ಶುಕ್ರವಾರ ಬೆಳಿಗ್ಗೆ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಹಂಗಾಮಿ ನಾಯಕ ಜಸ್‌ಪ್ರೀತ್ ಬೂಮ್ರಾ 'ರೋಹಿತ್ ವಿಶ್ರಾಂತಿ ಪಡೆದಿದ್ದಾರೆ' ಎಂದಷ್ಟೇ ಹೇಳಿದರು.

ಮೊದಲಿನಿಂದಲೂ ಸ್ಪಿನ್ ಸ್ನೇಹಿ ಎಂಬ ಖ್ಯಾತಿ ಹೊಂದಿರುವ ಸಿಡ್ನಿ ಮೈದಾನದ ಪಿಚ್ ಮೊದಲ ದಿನದಾಟದಲ್ಲಿ ಭಿನ್ನವಾಗಿ ಕಂಡಿತು. ಹಸಿರು ಗರಿಕೆಗಳಿದ್ದ ಪಿಚ್ ಮತ್ತು ಮೋಡ ಕವಿದ ವಾತಾವರಣವು ಆತಿಥೇಯ ವೇಗಿಗಳಿಗೆ ಬಹಳಷ್ಟು ನೆರವು ನೀಡಿತು. ಅನಿರೀಕ್ಷಿತ ಮತ್ತು ಎತ್ತರ ಪುಟಿತದೊಂದಿಗೆ ಬರುತ್ತಿದ್ದ ಎಸೆತಗಳನ್ನು ಎದುರಿಸುವಲ್ಲಿ ಭಾರತದ ಬ್ಯಾಟರ್‌ಗಳು ಕಷ್ಟಪಟ್ಟರು. ಅಲ್ಲದೇ ಮೈಕೈಗಳಿಗೆ ಚೆಂಡು ಅಪ್ಪಳಿಸಿ ಆದ ಪೆಟ್ಟುಗಳೂ ಕಮ್ಮಿಯೇನಲ್ಲ.

ಅದರಲ್ಲೂ ದಿನದಲ್ಲಿ ವೈಯಕ್ತಿಕ ಗರಿಷ್ಠ ಸ್ಕೋರ್ ಗಳಿಸಿದ ರಿಷಭ್ ಪಂತ್ (40; 98ಎ) ಎಲ್ಲರಿಗಿಂತ ಹೆಚ್ಚು ಹೊಡೆತಗಳ ನೋವು ಅನುಭವಿಸಿದರು. ಮುಂಗೈ, ತೊಡೆ, ಭುಜ, ಹೆಲ್ಮೆಟ್ ಮತ್ತಿತರೆಡೆ ಚೆಂಡು ಅಪ್ಪಳಿಸಿ ನೋವು ಅನುಭವಿಸಿದರು. ಪದೇ ಪದೇ ಧಾವಿಸಿ ಬಂದ ಫಿಸಿಯೊ ಪ್ರಥಮ ಚಿಕಿತ್ಸೆ ನೀಡಿದರು.

ಆರಂಭದಲ್ಲಿ ಚೆಂಡು ಗಾಳಿಯ ಬಲದಿಂದ ಹೆಚ್ಚು ಚಲನೆಯಾಗುತ್ತಿತ್ತು. ಸ್ವಲ್ಪ ಹೊತ್ತಿನ ನಂತರ ಸೀಮ್ ಮೂವ್‌ಮೆಂಟ್ ಜೋರಾಯಿತು. ಇದರಿಂದಾಗಿ ಬೌನ್ಸರ್‌ಗಳು ಹೆಚ್ಚಿ ಭಾರತ ಬ್ಯಾಟರ್‌ಗಳಿಗೆ ಫಜೀತಿ ತಂದವು. ಆಸ್ಟ್ರೇಲಿಯಾದ 6.2 ಮತ್ತು 6.5 ಅಡಿ ಎತ್ತರದ ಬೌಲರ್‌ಗಳು ಈ ಅವಕಾಶ ಸಮರ್ಥವಾಗಿ ಬಳಸಿಕೊಂಡರು. ಇದರಿಂದಾಗಿ ಮೊದಲು ಬ್ಯಾಟಿಂಗ್ ಮಾಡುವ ಭಾರತದ ನಿರ್ಧಾರ ತಪ್ಪಾಯಿತು.

ವೇಗಿ ಸ್ಕಾಟ್ ಬೋಲ್ಯಾಂಡ್ (31ಕ್ಕೆ4) ಕರಾರುವಾಕ್ ದಾಳಿ ನಡೆಸಿದರು. ಭಾರತದ ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಪೆಟ್ಟುಕೊಟ್ಟರು. ಭಾರತ ಮೊದಲ ಇನಿಂಗ್ಸ್‌ನಲ್ಲಿ 72.2 ಓವರ್‌ಗಳಲ್ಲಿ 185 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು. ಮಿಚೆಲ್ ಸ್ಟಾರ್ಕ್ (49ಕ್ಕೆ3) ಮತ್ತು ಪ್ಯಾಟ್ ಕಮಿನ್ಸ್ (37ಕ್ಕೆ2) ಅವರೂ ಬಲವಾದ ಪೆಟ್ಟುಕೊಟ್ಟರು. ಈ ಪಂದ್ಯದಲ್ಲಿ ರೋಹಿತ್ ಬದಲು ಶುಭಮನ್ ಗಿಲ್, ಆಕಾಶದೀಪ್ ಬದಲಿಗೆ ಪ್ರಸಿದ್ಧಕೃಷ್ಣ ಸ್ಥಾನ ಪಡೆದಿದ್ದಾರೆ.

ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ದಿನದಾಟದ ಅಂತ್ಯಕ್ಕೆ 3 ಓವರ್‌ಗಳಲ್ಲಿ 1 ವಿಕೆಟ್‌ಗೆ 9 ರನ್ ಗಳಿಸಿತು. ಸ್ಯಾಮ್ ಕಾನ್‌ಸ್ಟಸ್ (ಬ್ಯಾಟಿಂಗ್ 7) ಕ್ರೀಸ್‌ನಲ್ಲಿದ್ದಾರೆ. ಅಂತಿಮ ಓವರ್‌ನಲ್ಲಿ ಬೂಮ್ರಾ ಮತ್ತು ಸ್ಯಾಮ್ ನಡುವಿನ ಮಾತಿನ ಚಕಮಕಿ ಆಟಕ್ಕೆ ಮತ್ತಷ್ಟು ಕಾವೇರಿಸಿತು.

ಮೊದಲ ದಿನ 47,566 ಪ್ರೇಕ್ಷಕರು ಸೇರಿದ್ದರು. ಈ ಕ್ರೀಡಾಂಗಣದಲ್ಲಿ ಟೆಸ್ಟ್ ಪಂದ್ಯವೊಂದರ ಆರಂಭಿಕ ದಿನ ಇಷ್ಟೊಂದು ಸಂಖ್ಯೆಯಲ್ಲಿ ಕ್ರಿಕೆಟ್ ಅಭಿಮಾನಿಗಳು ಸೇರಿದ್ದು ಇದೇ ಮೊದಲು.



ಭಾರತದ ಬ್ಯಾಟರ್ ರಿಷಭ್ ಪಂತ್ ಅವರ ತೋಳಿಗೆ ಚೆಂಡು ಬಡಿದು ಗಾಯವಾದ ಸಂದರ್ಭದಲ್ಲಿ ಧಾವಿಸಿದ ಫಿಸಿಯೊ ಐಸ್ ಪ್ಯಾಕ್ ಥೆರಪಿ ಮಾಡಿದರು—ಎಎಫ್‌ಪಿ ಚಿತ್ರಗಳು

ಪಂತ್‌ಗೆ ಎಂಟು ಪೆಟ್ಟು

ಎಡಗೈ ಬ್ಯಾಟರ್ ರಿಷಭ್ ಪಂತ್ ಅವರು ಸಿಡ್ನಿ ಅಂಗಳದಲ್ಲಿ ಅನಿರೀಕ್ಷಿತ ಬೌನ್ಸ್‌ಗಳಿಂದಾಗಿ ಸುಮಾರು ಎಂಟು ಬಾರಿ ಪೆಟ್ಟು ತಿಂದರು. ತೋಳು, ಮುಂಗೈ, ಹೊಟ್ಟೆಯ ಗಾರ್ಡ್, ಹೆಲ್ಮೆಟ್ ಗ್ರಿಲ್ ಮತ್ತು ತೋಳುಗಳಿಗೆ ಪೆಟ್ಟು ಬಿದ್ದವು. ಎರಡೂವರೆ ಗಂಟೆ ಕ್ರೀಸ್‌ನಲ್ಲಿದ್ದ ಅವರು ತಮ್ಮ ದಿಟ್ಟ ಬ್ಯಾಟಿಂಗ್ ಮೂಲಕ ಗಮನ ಸೆಳೆದರು.

ಎರಡು ವರ್ಷಗಳ ಹಿಂದೆ ಭೀಕರ ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಚೇತರಿಸಿಕೊಂಡಿರುವ ಪಂತ್ ಮಾನಸಿಕವಾಗಿ ಬಹಳ ಗಟ್ಟಿಯಾಗಿದ್ದಾರೆ. 'ಬಹುಶಃ ಇದೇ ಮೊದಲ ಸಲ ನಾನು ಇಷ್ಟೊಂದು ಪೆಟ್ಟುಗಳನ್ನು ಅನುಭವಿಸಿದ್ದೇನೆ. ಕ್ರಿಕೆಟ್‌ನಲ್ಲಿ ಯಾವುದೂ ಪೂರ್ವನಿರ್ಧರಿತವಲ್ಲ ಎನ್ನುವುದೂ ನಿಜ' ಎಂದು ದಿನದಾಟದ ನಂತರ ಸುದ್ದಿಗಾರರಿಗೆ ಹೇಳಿದರು.

'ಈ ಪೆಟ್ಟುಗಳಿಂದ ಬಹಳಷ್ಟು ನೋವಾಗಿದೆ. ಅದು ಸಹಜ. ತಂಡಕ್ಕಾಗಿ ಇದೆಲ್ಲವೂ ಸಹನೀಯ. ಚೆಂಡು ನನ್ನ ದೇಹದ ಯಾವ ಭಾಗಕ್ಕೆ ಅಪ್ಪಳಿಸುತ್ತದೆ ಎಂಬುದರ ಬಗ್ಗೆ ನನಗೆ ಯೋಚನೆ ಇರಲಿಲ್ಲ. ಆದರೆ ಪ್ರತಿಯೊಂದು ಎಸೆತವನ್ನೂ ಆಡುವತ್ತ ಮಾತ್ರ ಗಮನವಿತ್ತು' ಎಂದರು. 'ಇದು ಕಠಿಣ ಸವಾಲೊಡ್ಡುವ ಪಿಚ್. ಎರಡನೇ ದಿನವೂ ಇದೇ ರೀತಿ ಇರುತ್ತದೆ' ಎಂದು ಅಭಿಪ್ರಾಯಪಟ್ಟರು.



ಆಸ್ಟ್ರೇಲಿಯಾದ ಬೌಲರ್ ಸ್ಕಾಟ್ ಬೋಲ್ಯಾಂಡ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್; ಭಾರತ 185 (72.2 ಓವರ್‌ಗಳಲ್ಲಿ)

ಜೈಸ್ವಾಲ್ ಸಿ ವೆಬ್‌ಸ್ಟರ್ ಬಿ ಬೋಲ್ಯಾಂಡ್ 10 (26ಎ, 4x1)
ರಾಹುಲ್ ಸಿ ಕಾನ್‌ಸ್ಟಸ್ ಬಿ ಸ್ಟಾರ್ಕ್ 4 (14ಎ)
ಶುಭಮನ್ ಸಿ ಸ್ಮಿತ್ ಬಿ ಲಯನ್ 20 (64ಎ, 4x2)
ಕೊಹ್ಲಿ ಸಿ ವೆಬ್‌ಸ್ಟರ್ ಬಿ ಬೋಲ್ಯಾಂಡ್ 17 (69ಎ)
ಪಂತ್ ಸಿ ಕಮಿನ್ಸ್ ಬಿ ಬೋಲ್ಯಾಂಡ್ 40 (98ಎ, 4x3, 6x1)
ಜಡೇಜ ಎಲ್‌ಬಿಡಬ್ಲ್ಯು ಬಿ ಸ್ಟಾರ್ಕ್ 26 (95ಎ, 4x3)
ನಿತೀಶ್ ಸಿ ಸ್ಮಿತ್ ಬಿ ಬೋಲ್ಯಾಂಡ್ 0 (1ಎ)
ವಾಷಿಂಗ್ಟನ್ ಸಿ ಕ್ಯಾರಿ ಬಿ ಕಮಿನ್ಸ್ 14 (30ಎ, 4x3)
ಪ್ರಸಿದ್ಧ ಸಿ ಕಾನ್‌ಸ್ಟಸ್ ಬಿ ಸ್ಟಾರ್ಕ್ 3 (10ಎ)
ಬೂಮ್ರಾ ಸಿ ಸ್ಟಾರ್ಕ್ ಬಿ ಕಮಿನ್ಸ್ 22 (17ಎ, 4x3, 6x1)
ಸಿರಾಜ್ ಔಟಾಗದೇ 3 (16ಎ)
ಇತರೆ: 26 (ಬೈ 7, ಲೆಗ್‌ಬೈ 13, ನೋಬಾಲ್ 6)
ವಿಕೆಟ್ ಪತನ: 1–11 (ಕೆ.ಎಲ್.ರಾಹುಲ್, 4.6), 2–17 (ಯಶಸ್ವಿ ಜೈಸ್ವಾಲ್, 7.4), 3–57 (ಶುಭಮನ್ ಗಿಲ್, 24.6), 4–72 (ವಿರಾಟ್ ಕೊಹ್ಲಿ, 31.3), 5–120 (ರಿಷಭ್ ಪಂತ್, 56.4), 6–120 (ನಿತೀಶ್ ಕುಮಾರ್ ರೆಡ್ಡಿ, 56.5), 7–134 (ರವೀಂದ್ರ ಜಡೇಜ, 62.4), 8–148 (ವಾಷಿಂಗ್ಟನ್ ಸುಂದರ್, 65.5) 9–168 (ಪ್ರಸಿದ್ಧ ಕೃಷ್ಣ, 68.2), 10–185 (ಜಸ್‌ಪ್ರೀತ್ ಬೂಮ್ರಾ 72.2)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 18–5–49–3, ಪ್ಯಾಟ್ ಕಮಿನ್ಸ್ 15.2–4–37–2, ಸ್ಕಾಟ್ ಬೋಲ್ಯಾಂಡ್ 20–8–31–4, ಬ್ಯೂ ವೆಬ್‌ಸ್ಟರ್ 13–4–29–0, ನೇಥನ್ ಲಯನ್ 6–2–19–1

ಆಸ್ಟ್ರೇಲಿಯಾ 1ಕ್ಕೆ 9 (3 ಓವರ್‌ಗಳಲ್ಲಿ)

ಕಾನ್‌ಸ್ಟಸ್ ಔಟಾಗದೇ 7 (8ಎ, 4x1)
ಖ್ವಾಜಾ ಸಿ ರಾಹುಲ್ ಬಿ ಬೂಮ್ರಾ 2 (10ಎ)
ವಿಕೆಟ್ ಪತನ: 1–9 (ಉಸ್ಮಾನ್ ಖ್ವಾಜಾ, 2.6)
ಬೌಲಿಂಗ್: ಬೌಲಿಂಗ್: ಬೂಮ್ರಾ 2–0–7–1; ಸಿರಾಜ್ 1–0–2–0

ನಿರಾಶೆ ಮೂಡಿಸಿದ ವಿರಾಟ್



ಯಶಸ್ವಿ ಜೈಸ್ವಾಲ್ ಮತ್ತು ಕೆ.ಎಲ್. ರಾಹುಲ್ ಅವರು ಇನಿಂಗ್ಸ್ ಆರಂಭಿಸಿದರು. ಆದರೆ ಈ ಜೋಡಿಗೆ ನೆಲೆಯೂರಲು ಸಾಧ್ಯವಾಗಲಿಲ್ಲ. ಮೆಲ್ಬರ್ನ್ ಟೆಸ್ಟ್‌ನಲ್ಲಿ ಬೆಂಚ್ ಕಾದಿದ್ದ ಗಿಲ್ ಇಲ್ಲಿ ಮೂರನೇ ಕ್ರಮಾಂಕದಲ್ಲಿ ಮರಳಿದರು. ಅವರು ಮತ್ತು ವಿರಾಟ್ ಕೊಹ್ಲಿ ಎಚ್ಚರಿಕೆಯ ಜೊತೆಯಾಟವಾಡಿದರು. ಇದರಿಂದ ಇನಿಂಗ್ಸ್‌ಗೆ ಕೊಂಚ ಸ್ಥಿರತೆ ಲಭಿಸಿತು.

ಆದರೆ ಕೊಹ್ಲಿ ಕ್ರೀಸ್‌ಗೆ ಬಂದು ಎದುರಿಸಿದ ಮೊದಲ ಎಸೆತದಲ್ಲಿಯೇ ಔಟಾಗುವುದರಿಂದ ಸ್ವಲ್ಪದರಲ್ಲಿ ಉಳಿದರು. ಬೋಲ್ಯಾಂಡ್ ಅವರು ಹಾಕಿದ ಬ್ಯಾಕ್ ಆಫ್ ಲೆಂಗ್ತ್ ಎಸೆತವು ಕೊಹ್ಲಿ ಬ್ಯಾಟ್ ಅಂಚು ಸವರಿ ಸ್ಲಿಪ್‌ನತ್ತ ನುಗ್ಗಿತು. ಫೀಲ್ಡರ್ ಸ್ಟೀವ್ ಸ್ಮಿತ್ ಡೈವ್ ಮಾಡಿ ಚೆಂಡನ್ನು ಹಿಡಿತಕ್ಕೆ ಪಡೆದರು. ಆದರೆ ಚೆಂಡಿನ ಅರ್ಧಭಾಗ ಹುಲ್ಲುಹಾಸನ್ನು ಉಜ್ಜಿದ್ದು ಮೂರನೇ ಅಂಪೈರ್ ಪರಿಶೀಲನೆಯಲ್ಲಿ ಸ್ಪಷ್ಟವಾಗಿ ಕಂಡಿತು. ಕೊಹ್ಲಿ ಶೂನ್ಯ ಸುತ್ತುವುದು ತಪ್ಪಿತು.

ಊಟದ ವಿರಾಮಕ್ಕೂ ಮುನ್ನ ಗಿಲ್ ವಿಕೆಟ್ ಗಳಿಸುವಲ್ಲಿ ಸಫಲರಾದ ಸ್ಪಿನ್ನರ್ ನೇಥನ್ ಲಯನ್ ಅವರು ಮೂರನೇ ವಿಕೆಟ್ ಜೊತೆಯಾಟವನ್ನು ಮುರಿದರು. ಇಬ್ಬರೂ 40 ರನ್ ಸೇರಿಸಿದರು. ವಿರಾಮದ ನಂತರ ಕೊಹ್ಲಿ ಭರವಸೆದಾಯಕ ಆಟವಾಡಲು ಆರಂಭಿಸಿದರು. ಆದರೆ ಈ ಹಂತದಲ್ಲಿಯೇ ಎಡವಿದರು. ಬೋಲ್ಯಾಂಡ್ ಹಾಕಿದ ಆಫ್‌ಸ್ಟಂಪ್ ಹೊರಗಿನ ಎಸೆತವನ್ನು ಕೆಣಕುವ ತಮ್ಮ ಹಳೆ ಚಾಳಿಯನ್ನು ಕೊಹ್ಲಿ ಪುನರಾವರ್ತಿಸಿದರು. ವೆಬ್‌ಸ್ಟರ್‌ಗೆ ಕ್ಯಾಚಿತ್ತರು.

ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ತಮ್ಮ ಹೊಡೆತಗಳ ಆಯ್ಕೆಯಿಂದಾಗಿ ರಿಷಭ್ ಪಂತ್ ಇಲ್ಲಿ ಬಹಳ ಎಚ್ಚರಿಕೆಯಿಂದ ಆಡಿದರು. ಪಂತ್ ಮತ್ತು ರವೀಂದ್ರ ಜಡೇಜ ತಾಳ್ಮೆಯಿಂದ ಆಡಿದರು. ಅದರಿಂದಾಗಿ ಚಹಾ ವಿರಾಮಕ್ಕೆ ತಂಡವು 4 ವಿಕೆಟ್‌ಗಳಿಗೆ 107 ರನ್ ಗಳಿಸಿತು. ಮೈತುಂಬಾ ಪೆಟ್ಟುಗಳನ್ನು ತಿಂದ ಪಂತ್ ತಂಡವು ಅಲ್ಪಮೊತ್ತಕ್ಕೆ ಕುಸಿಯದಂತೆ ತಡೆಯಲು ಪ್ರಯತ್ನಿಸಿದರು. ಆದರೆ ಬೌಲರ್‌ಗಳು ಭಾರತದ ಬ್ಯಾಟರ್‌ಗಳ ಆಟ ಹೆಚ್ಚುಹೊತ್ತು ನಡೆಯದಂತೆ ನೋಡಿಕೊಂಡರು. ಕೇವಲ 61 ರನ್‌ಗಳ ಅಂತರದಲ್ಲಿ 6 ವಿಕೆಟ್‌ಗಳನ್ನು ಉರುಳಿಸಿದರು. ಅದರಲ್ಲಿ ವಾಷಿಂಗ್ಟನ್ ಸುಂದರ್ (14 ರನ್) ಮತ್ತು ಬೂಮ್ರಾ ಅವರ ಮಿಂಚಿನ 22 ರನ್ (17ಎಸೆತ) ಕಾಣಿಕೆ ಸೇರಿತ್ತು.

ರೋಹಿತ್ 'ವಿಶ್ರಾಂತಿ'ಯ ಸುತ್ತ

ಪ್ರಜಾವಾಣಿ ವಾರ್ತೆ

ಸಿಡ್ನಿ: ಶುಕ್ರವಾರ ಬೆಳಿಗ್ಗೆ ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಪಂದ್ಯ ಆರಂಭಕ್ಕೂ ಮುನ್ನ ಅಭ್ಯಾಸ ಮಾಡುತ್ತಿದ್ದ ಭಾರತ ತಂಡದ ಆಟಗಾರರಲ್ಲಿ ನಾಯಕ ರೋಹಿತ್ ಶರ್ಮಾ ಕೂಡ ಇದ್ದರು. ನೋಡುಗರ ಗಮನ ಅವರ ಮೇಲೆಯೇ ಇತ್ತು.

ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಗುರುವಾರ ನೀಡಿದ್ದ ಹೇಳಿಕೆಯಿಂದಾಗಿ ರೋಹಿತ್ ಶರ್ಮಾ ಅವರು ಈ ಪಂದ್ಯದಲ್ಲಿ ಆಡುವ ಭಾರತ ತಂಡದ ಹನ್ನೊಂದರ ಬಳಗದಲ್ಲಿ ಸ್ಥಾನ ಪಡೆಯುವರೇ ಇಲ್ಲವೇಎಂಬ ಕುತೂಹಲ ಗರಿಗೆದರಿತ್ತು. ರೋಹಿತ್ ಬ್ಯಾಟಿಂಗ್ ವೈಫಲ್ಯ ಮತ್ತು ಸತತ ಸೋಲುಗಳಿಂದಾಗಿ ರೋಹಿತ್ ಅವರು ಇಲ್ಲಿ ಕಣಕ್ಕಿಳಿಯುವ ಕುರಿತು ಅನುಮಾನಗಳಿದ್ದವು.



ರೋಹಿತ್ ಶರ್ಮಾ

ಜಸ್‌ಪ್ರೀತ್ ಬೂಮ್ರಾ ಅವರು ಭಾರತ ತಂಡದ ಬ್ಲೆಜರ್ ಧರಿಸಿ ಟಾಸ್‌ಗೆ ಬಂದ ಮೇಲೆ ಎಲ್ಲ ಅನುಮಾನಗಳಿಗೂ ಉತ್ತರ ದೊರೆತವು.

'ನಮ್ಮ ನಾಯಕ, ನಾಯಕತ್ವದ ಗುಣ ಪ್ರದರ್ಶಿಸಿದ್ದಾರೆ. ಅವರು ವಿಶ್ರಾಂತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ' ಎಂದು ಬೂಮ್ರಾ ಹೇಳಿದರು. 'ಇದು ನಮ್ಮ ತಂಡದಲ್ಲಿರುವ ಒಗ್ಗಟ್ಟನ್ನು ತೋರಿಸುತ್ತದೆ' ಎಂದೂ ಅವರು ನುಡಿದರು.

ಡ್ರೆಸಿಂಗ್ ಕೋಣೆಯಿಂದ ಪಂದ್ಯ ವೀಕ್ಷಿಸುತ್ತಿದ್ದ ರೋಹಿತ್ ನಗುನಗುತ್ತ ಲವಲವಿಕೆಯಿಂದ ಇರುವ ಪ್ರಯತ್ನ ಮಾಡುತ್ತಿದ್ದರು. ಆದರೂ ಅವರಿಗೆ ತಮ್ಮ ಮನದಲ್ಲಿದ್ದ ಹತಾಶೆ ಭಾವವನ್ನು ಹೆಚ್ಚು ಮುಚ್ಚಿಟ್ಟುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹನ್ನೊಂದರ ಬಳಗದಿಂದ ಹೊರಗಿರುವುದಕ್ಕಿಂತಲೂ ಆ ನಿರ್ಧಾರವನ್ನು ಪ್ರಕಟಿಸಿದ ರೀತಿಯಿಂದ ಅವರಿಗೆ ನಿರಾಶೆಯಾಗಿರುವುದು ಸ್ಪಷ್ಟವಾಗಿತ್ತು.

ಈ ವಿಷಯದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪಾರದರ್ಶಕತೆ ಮತ್ತು ಗೌರವಯುತವಾಗಿ ನಿರ್ವಹಿಸಿದೆಯೇ ಎಂಬುದು ಮೇಲ್ನೋಟಕ್ಕೆ ಕಾಣುತ್ತಿಲ್ಲ. ರೋಹಿತ್ ಶರ್ಮಾ ಅವರು ಆಧುನಿಕ ಕ್ರಿಕೆಟ್‌ನಲ್ಲಿ ಬ್ಯಾಟಿಂಗ್ ದಂತಕಥೆ ಎಂಬುದು ನಿರ್ವಿವಾದದ ಸಂಗತಿ. ಅಲ್ಲದೇ ಹಾಲಿ ನಾಯಕನಾಗಿ ಅವರು ಪಾರದರ್ಶಕತೆ ಬಯಸುವುದು ಸಹಜ. ಕೊನೆಯ ಪಂದ್ಯದಲ್ಲಿ ರೋಹಿತ್ ಲಭ್ಯತೆ ಅಥವಾ ಹೊರಗಿಡುವ ವಿಷಯವಾಗಿ ಕೊನೆಯ ಕ್ಷಣದವರೆಗೂ ಸ್ಪಷ್ಟತೆ ಇರಲಿಲ್ಲ.

ಇದಕ್ಕೆ ತದ್ವಿರುದ್ಧವಾದ ನಡವಳಿಕೆ ಆಸ್ಟ್ರೇಲಿಯಾ ತಂಡದಲ್ಲಿ ಕಂಡಿತು. ನಾಯಕ ಪ್ಯಾಟ್ ಕಮಿನ್ಸ್ ಅವರು ಈ ಟೆಸ್ಟ್‌ನಲ್ಲಿ ತಮ್ಮ ಅನುಭವಿ ಆಟಗಾರ ಮಿಚೆಲ್ ಮಾರ್ಷ್ ಅವರ ಬದಲಿಗೆ ಬಿಯೂ ವೆಬ್‌ಸ್ಟರ್ ಅವರನ್ನು ಕಣಕ್ಕಿಳಿಸುವುದಾಗಿ ಪಂದ್ಯದ ಮುನ್ನಾದಿನ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದ್ದರು. ಇದರಿಂದಾಗಿ ಮಾರ್ಷ್ ಅಲಭ್ಯತೆ ಸ್ಪಷ್ಟವಾಗಿತ್ತು.

ಆಡುವ ಹನ್ನೊಂದರ ಬಳಗವನ್ನು ಪ್ರಕಟಿಸುವಂತೆ ಯಾರೂ ಕೇಳಿರಲಿಲ್ಲ. ಆದರೆ ಹಾಲಿ ನಾಯಕನನ್ನು ಈ ರೀತಿ ಕೈಬಿಟ್ಟಿರುವುದು ಭಾರತ ಕ್ರಿಕೆಟ್‌ನಲ್ಲಿ ಮೊದಲನೇಯ ಬಾರಿ. ಆದ್ದರಿಂದ ಇಂತಹ ನಿರ್ಣಯದ ಬಗ್ಗೆ ಅತಿಯಾದ ಗೋಪ್ಯತೆ ಕಾಪಾಡಿದ್ದು ಗೊಂದಲಗಳಿಗೂ ಕಾರಣವಾಯಿತು. ಇದನ್ನು ತಪ್ಪಿಸಬಹುದಿತ್ತು.

ರೋಹಿತ್ ಅವರು ಕಳೆದ ಐದು ಇನಿಂಗ್ಸ್‌ಗಳಲ್ಲಿ ಕೇವಲ 31 ರನ್‌ಗಳನ್ನು ಗಳಿಸಿದ್ದಾರೆ. 37 ವರ್ಷ ವಯಸ್ಸಿನ ರೋಹಿತ್ ಅವರು ಯಶಸ್ವಿ ಜೈಸ್ವಾಲ್ ಅವರೊಂದಿಗೆ ಉತ್ತಮವಾಗಿ ಆರಂಭಿಕ ಇನಿಂಗ್ಸ್ ಆಡುತ್ತಿದ್ದ ಕೆ.ಎಲ್. ರಾಹುಲ್ ಅವರ ಕ್ರಮಾಂಕವನ್ನು ಕಳೆದ ಪಂದ್ಯದಲ್ಲಿ ಬದಲಾಯಿಸಿ ರೋಹಿತ್ ಆರಂಭಿಕರಾಗಿದ್ದು ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ರೋಹಿತ್ ಅವರನ್ನು ಈ ಪಂದ್ಯದಿಂದ ಹೊರಗಿಟ್ಟ ಗಂಭೀರ್ ನಿರ್ಧಾರ ಸರಿಯೇ ಎಂಬ ಪ್ರಶ್ನೆಗೆ ಹೌದು ಎಂದು ದೃಢವಾಗಿ ಉತ್ತರಿಸಬಹುದು. ಆದರೆ ಕ್ರಿಕೆಟ್ ಮತ್ತು ತಂಡದ ದೃಷ್ಟಿಯಿಂದ ನೋಡಿದಾಗ ಇದು ಸರಿಯೇ ಎಂಬ ಪ್ರಶ್ನೆಗೆ ಇಲ್ಲ ಎಂದೇ ಉತ್ತರಿಸಬಹುದು.

ಇದು ರೋಹಿತ್ ಅವರ ಟೆಸ್ಟ್ ಕ್ರಿಕೆಟ್ ಜೀವನದ ಅಂತ್ಯವೂ ಆಗಬಹುದು. ಅವರು ಏಕದಿನ ಕ್ರಿಕೆಟ್‌ನಲ್ಲಿ ಆಟ ಮುಂದುವರಿಸಬಹುದು. ಕನಿಷ್ಠ ಒಂದೂವರೆ ತಿಂಗಳು ನಂತರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಟೂರ್ನಿಯವರೆಗೂ ಅವರು ಮುಂದುವರಿಯಬಹುದು.

ಟೆಸ್ಟ್ ಸರಣಿ ನಡುವೆ ಸ್ಥಾನ ಕಳೆದುಕೊಂಡ ನಾಯಕರು

ಟೆಸ್ಟ್ ಸರಣಿಯಲ್ಲಿ ತಂಡದ ನಾಯಕತ್ವ ವಹಿಸಿದವರು ವಿವಿಧ ಕಾರಣಗಳಿಗೆ ಹನ್ನೊಂದರ ಬಳಗದಿಂದ ಹೊರಗುಳಿದವರ ಪಟ್ಟಿಯಲ್ಲಿ ರೋಹಿತ್ ಶರ್ಮಾ ಅವರಿಗೆ ಐದನೇ ಸ್ಥಾನವಿದೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಇದಕ್ಕೂ ಮುನ್ನ ಇಂತಹ ಪ್ರಕರಣಗಳು ನಡೆದಿವೆ. 1974ರ ಆ್ಯಷಸ್ ಸರಣಿಯಲ್ಲಿ ಮೊದಲೆರಡು ಟೆಸ್ಟ್‌ಗಳಲ್ಲಿ ಆಸ್ಟ್ರೇಲಿಯಾ ಇಂಗ್ಲೆಂಡ್ ವಿರುದ್ಧ ಗೆದ್ದಿತ್ತು. ಮೂರನೇಯದ್ದು ಡ್ರಾ ಆಗಿತ್ತು. ಇಂಗ್ಲೆಂಡ್ ನಾಯಕ ಮೈಕ್ ಡೆನಿಸ್ ಬ್ಯಾಟಿಂಗ್ ಫಾರ್ಮ್ ಕಳೆದುಕೊಂಡಿದ್ದರು. ನಾಲ್ಕನೇ ಟೆಸ್ಟ್‌ನಲ್ಲಿ ಅವರನ್ನು ಹೊರಗಿಡಲಾಯಿತು. ಟೋನಿ ಗ್ರೇಗ್ ನಾಯಕತ್ವ ವಹಿಸಿದರು. ಆದರೆ ಆ ಪಂದ್ಯದಲ್ಲಿಯೂ ಇಂಗ್ಲೆಂಡ್ ಸೋತಿತು. ಐದನೇ ಟೆಸ್ಟ್‌ಗೆ ಮೈಕ್ ಡೆನಿಸ್ ತಂಡಕ್ಕೆ ಮರಳಿದರು.

2015ರಲ್ಲಿ ಆಸ್ಟ್ರೇಲಿಯಾದ ನಾಯಕ ಮೈಕೆಲ್ ಕ್ಲಾರ್ಕ್ ಕೂಡ ಸರಣಿ ಮಧ್ಯದಲ್ಲಿಯೇ ಹೊರಗುಳಿದರು. 2016ರಲ್ಲಿ ನ್ಯೂಜಿಲೆಂಡ್ ತಂಡದ ಬ್ರೆಂಡನ್ ಮೆಕ್ಲಮ್ ಬ್ಯಾಟಿಂಗ್‌ನಲ್ಲಿ ಲಯವಿಲ್ಲದ ಕಾರಣ ನಿವೃತ್ತಿ ಘೋಷಿಸಿದರು. ಅದೇ ವರ್ಷ ಇಂಗ್ಲೆಂಡ್‌ನ ಅಲೆಸ್ಟೇರ್ ಕುಕ್ ತಮ್ಮ ಕುಸಿದ ಫಾರ್ಮ್‌ನಿಂದಾಗಿ ನಾಯಕತ್ವದಿಂದ ಕೆಳಗಿಳಿದರು.

(ಮಾಹಿತಿ: ಎಚ್.ಆರ್. ಗೋಪಾಲಕೃಷ್ಣ)

ವಿಜಯ್ ಹಜಾರೆ ಟ್ರೋಫಿ: ಮಿಂಚಿದ ಅನೀಶ್, ಮಯಂಕ್, ಕೌಶಿಕ್

ಕರ್ನಾಟಕಕ್ಕೆ ಮಣಿದ ಸೌರಾಷ್ಟ್ರ

ಅಹಮದಾಬಾದ್: ನಾಯಕ ಮಯಂಕ್, ಕೆ.ವಿ.ಅನೀಶ್ ಅವರ ಉತ್ತಮ ಬ್ಯಾಟಿಂಗ್ ಬಳಿಕ ವೇಗದ ಬೌಲರ್ ವಿ.ಕೌಶಿಕ್ (51ಕ್ಕೆ5) ಐದು ವಿಕೆಟ್‌ಗಳ ಗೊಂಚಲು ಪಡೆದರು. ಇದರಿಂದ ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಪಿ ಏಕದಿನ ಕ್ರಿಕೆಟ್ ಟೂರ್ನಿ 'ಸಿ' ಗುಂಪಿನ ಪಂದ್ಯದಲ್ಲಿ ಸೌರಾಷ್ಟ್ರ ತಂಡವನ್ನು ಶುಕ್ರವಾರ 60 ರನ್‌ಗಳಿಂದ ಸೋಲಿಸಿತು.

ಕರ್ನಾಟಕ ಆರು ಪಂದ್ಯಗಳಲ್ಲಿ ಐದನೇ ಗೆಲುವಿನೊಡನೆ ಕ್ವಾರ್ಟರ್ ಫೈನಲ್ ಸ್ಥಾನವನ್ನು ಖಚಿತಪಡಿಸಿಕೊಂಡಿತು. ಗುಂಪಿನಲ್ಲಿ ಪಂಜಾಬ್ ಮತ್ತು ಕರ್ನಾಟಕ ತಲಾ 20 ಪಾಯಿಂಟ್ಸ್ ಗಳಿಸಿದರೂ, ಪಂಜಾಬ್ ರನ್ ಸರಾಸರಿ ಉತ್ತಮವಾಗಿ ಅಗ್ರಸ್ಥಾನದಲ್ಲಿದೆ.

ಕರ್ನಾಟಕ ಗುಂಪು ಹಂತದ ಕೊನೆಯ ಪಂದ್ಯ ನಾಗಾಲ್ಯಾಂಡ್ ತಂಡವನ್ನು ಜ.5ರಂದು ಎದುರಿಸಲಿದೆ.

ಟೂರ್ನಿಯಲ್ಲಿ ಮೂರುಶತಕ ಹೊಡೆದು ಒಳ್ಳೆಯ ಲಯದಲ್ಲಿರುವ ಮಯಂಕ್ ಅದನ್ನು ಮುಂದುವರಿಸುವಂತೆ ಆಡಿದರು. ಈ ಪಂದ್ಯದಲ್ಲಿ ಸಂಯಮದ ಆಟವಾಡಿ 65 ಎಸೆತಗಳಲ್ಲಿ 69 ರನ್ (4x7, 6x1) ಹೊಡೆದರು. ಅವರು ಆರು ಪಂದ್ಯಗಳಿಂದ 124.25ರ ಸರಾಸರಿಯಲ್ಲಿ 497 ರನ್ ಕಲೆಹಾಕಿದ್ದಾರೆ.

ಕೆ.ವಿ.ಅನೀಶ್ ತಂಡದ ಪರ ಅತಿ ಹೆಚ್ಚು 93 ರನ್ (83ಎ, 4x9, 6x2) ಗಳಿಸಿದರು. ಸ್ಮರಣ್ (40) ಮತ್ತು ಅಭಿನವ್ ಮನೋಹರ್ (ಔಟಾಗದೇ 44, 28ಎ) ಕೊನೆಯಲ್ಲಿ ಉಪಯುಕ್ತ ಆಟವಾಡಿದರು. ಕರ್ನಾಟಕ 7 ವಿಕೆಟ್‌ಗಳಿಗೆ 349 ರನ್ ಹೊಡೆಯಿತು. ಉತ್ತರವಾಗಿ ಜಯದೇವ್ ಉನದ್ಕತ್ ಬಳಗ ಒಂದು ಹಂತದಲ್ಲಿ ಉತ್ತಮ ಆರಂಭ ಮಾಡಿದರೂ, ನಂತರ ಕುಸಿದು 289 ರನ್‌ಗಳಿಗೆ ಆಲೌಟ್ ಆಯಿತು.



ವಿ. ಕೌಶಿಕ್

ಈ ಹಿಂದೆ ಕರ್ನಾಟಕಕ್ಕೆ ಕೆಲ ಸಂದರ್ಭಗಳಲ್ಲಿ ಮಗ್ಗುಲ ಮುಳ್ಳಾಗಿರುವ ಸೌರಾಷ್ಟ್ರ 36.3 ಓವರುಗಳಲ್ಲಿ 3 ವಿಕೆಟ್‌ಗೆ 241 ರನ್ ಗಳಿಸಿ ಗೆಲುವಿನ ಹಾದಿಯಲ್ಲಿ ಸಾಗಿತ್ತು. ಆದರೆ ಶತಕ ಬಾರಿಸಿದ ಆರಂಭ ಆಟಗಾರ ಹರ್ವಿಕ್ ದೇಸಾಯಿ (114, 102ಎ) ನಿರ್ಗಮನದ ನಂತರ ಹಳಿ ತಪ್ಪಿತು. ಮೊದಲು ಕೌಶಿಕ್ ಅಗ್ರ ವಿಕೆಟ್‌ಗಳನ್ನು ಪಡೆದರೆ, ನಂತರ ಶ್ರೇಯಸ್ ಗೋಪಾಲ್ (63ಕ್ಕೆ4) ಪೆಟ್ಟು ನೀಡಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರುಗಳಲ್ಲಿ 7 ವಿಕೆಟ್‌ಗೆ 349 (ನಿಕಿನ್ ಜೋಸ್ 34, ಮಯಂಕ್ ಅಗರವಾಲ್ 69, ಕೆ.ವಿ.ಅನೀಶ್ 93, ಆರ್.ಸ್ಮರಣ್ 40, ಕೆ.ಎಲ್.ಶ್ರೀಜಿತ್ 29, ಅಭಿನವ್ ಮನೋಹರ್ ಔಟಾಗದೇ 44, ಹಾರ್ದಿಕ್ ರಾಜ್ 27; ಧರ್ಮೇಂದ್ರಸಿಂಹ ಜಡೇಜ 61ಕ್ಕೆ3, ಪ್ರಣವ್ ಕರಿಯಾ 59ಕ್ಕೆ2); ಸೌರಾಷ್ಟ್ರ: 47.5 ಓವರುಗಳಲ್ಲಿ 289 (ಹರ್ವಿಕ್ ದೇಸಾಯಿ 114, ತರಂಗ್ ಗೊಹೆಲ್ 33, ಜಯ್ ಗೋಹಿಲ್ 40, ಅರ್ಪಿತ್ ವಾಸವದಾ 40; ವಿ.ಕೌಶಿಕ್ 51ಕ್ಕೆ5, ಶ್ರೇಯಸ್ ಗೋಪಾಲ್ 63ಕ್ಕೆ4). ಪಂದ್ಯದ ಆಟಗಾರ: ವಿ.ಕೌಶಿಕ್

ಸಿ ಗುಂಪಿನ ಇತರ ಪಂದ್ಯಗಳು: ನಾಗಾಲ್ಯಾಂಡ್: 50 ಓವರುಗಳಲ್ಲಿ 3 ವಿಕೆಟ್‌ಗೆ 358 (ಸೆದೆಝಲಿ ರುಪೆರೊ 139, ಆರ್. ಜೊನಾಥನ್ 109, ಜೆ.ಸುಚಿತ್ ಔಟಾಗದೇ 43); ಅರುಣಾಚಲ ಪ್ರದೇಶ: 34.3 ಓವರುಗಳಲ್ಲಿ 129 (ವಿನೊ ಝಿಮೊಮಿ 28ಕ್ಕೆ5, ಆರ್.ಜೊನಾಥನ್ 35ಕ್ಕೆ2). ನಾಗಾಲ್ಯಾಂಡ್‌ಗೆ 229 ರನ್‌ಗಳ ಜಯ. **ಪಂಜಾಬ್:** 50 ಓವರುಗಳಲ್ಲಿ 4 ವಿಕೆಟ್‌ಗೆ 426 (ಪ್ರಭಸಿಮ್ರನ್ ಸಿಂಗ್ 137, ಅಭಿಷೇಕ್ ಶರ್ಮಾ 93); ಹೈದರಾಬಾದ್: 47.5 ಓವರುಗಳಲ್ಲಿ 346 (ನಿತೇಶ್ ರೆಡ್ಡಿ 111, ತನಯ್ ತ್ಯಾಗರಾಜನ್ 74; ಅರ್ಷದೀಪ್ ಸಿಂಗ್ 50ಕ್ಕೆ4). ಪಂಜಾಬ್‌ಗೆ 80 ರನ್ ಜಯ. **ಮುಂಬೈ:** 50 ಓವರುರಗಳಲ್ಲಿ 9 ವಿಕೆಟ್‌ಗೆ 290 (ಶ್ರೇಯಸ್ ಅಯ್ಯರ್ ಔಟಾಗದೇ 137); ಪುದುಚೇರಿ: 127 (ಆಕಾಶ್ ಕಾರ್ಗವೆ 54; ಶಾರ್ದೂಲ್ ಠಾಕೂರ್ 47ಕ್ಕೆ3). ಮುಂಬೈಗೆ 163 ರನ್ ಜಯ.

ದಾಖಲೆ ಪುಸ್ತಕಕ್ಕೆ ಕರುಣ್ ನಾಯರ್



ಕರುಣ್

ವಿಜಯನಗರಂ (ಪಿಟಿಐ): ವಿದರ್ಭ ತಂಡದಲ್ಲಿ ಆಡುತ್ತಿರುವ ಕನ್ನಡಿಗ ಕರುಣ್ ನಾಯರ್ ಅವರು ಲಿಸ್ಟ್ 'ಎ' ಕ್ರಿಕೆಟ್‌ನಲ್ಲಿ ಐದು ಇನಿಂಗ್ಸ್‌ಗಳಲ್ಲಿ ಒಂದೂ ಬಾರಿ ಔಟಾಗದೇ ಅತಿ ಹೆಚ್ಚು ರನ್ ಪೇರಿಸಿದ ವಿಶ್ವ ದಾಖಲೆಗೆ ಪಾತ್ರರಾದರು.

ವಿದರ್ಭ ತಂಡ 'ಡಿ' ಗುಂಪಿನ ಪಂದ್ಯದಲ್ಲಿ ಉತ್ತರ ಪ್ರದೇಶ ತಂಡದ ಮೇಲೆ ಎಂಟು ವಿಕೆಟ್‌ಗಳ ಅಧಿಕಾರಯುತ ಜಯ ಪಡೆಯಿತು. ಕರುಣ್ ಈ ಹಿಂದಿನ ಪಂದ್ಯಗಳಲ್ಲಿ 112, 44, 163 ಮತ್ತು 112 ರನ್ ಗಳಿಸಿದ್ದು ಪ್ರತಿ ಬಾರಿ ಅಜೇಯರಾಗಿ ಉಳಿದಿದ್ದರು. ಉತ್ತರ ಪ್ರದೇಶ ವಿರುದ್ಧವೂ ಅವರು 112 ರನ್ (101ಎ, 4X11, 6X2) ಗಳಿಸಿ ಕೊನೆಗೂ ಔಟ್ ಆದರು.

ನಾಯರ್ ಈ ಪಂದ್ಯದಲ್ಲಿ ಔಟ್ ಆಗುವ ಮೊದಲು ಒಟ್ಟು 542 ರನ್ ಪೇರಿಸಿದ್ದರು. ಆ ಮೂಲಕ ನ್ಯೂಜಿಲೆಂಡ್‌ನ ಜೇಮ್ಸ್ ಫ್ರಾಂಕ್ಲಿನ್ (2010ರಲ್ಲಿ 527 ರನ್) ಅವರ ದಾಖಲೆ ಮುರಿದರು.

ಸಮೀರ್ ರಿಝ್ವಿ ಅವರ 104 ರನ್‌ಗಳ ನೆರವಿನಿಂದ ಉತ್ತರ ಪ್ರದೇಶ 8 ವಿಕೆಟ್‌ಗೆ 307 ರನ್ ಗಳಿಸಿತು. ವಿದರ್ಭ 47.2 ಓವರುಗಳಲ್ಲಿ 2 ವಿಕೆಟ್‌ಗೆ 313 ರನ್ ಬಾರಿಸಿತು. ನಾಯರ್ ಜೊತೆಗೆ ಯಶ್ ರಾಠೋಡ್ ಕೂಡ ಅಜೇಯ ಶತಕ (112*, 101ಎ, 4x11, 6x2).

ಗಣ್ಯರ ಲಗೋರಿ ಆಟ ಇಂದು



ಮೈಸೂರು: ಕ್ರೀಡಾ ಭಾರತಿಯು ಜ.4ರಂದು ಬೆಳಿಗ್ಗೆ 8.30ಕ್ಕೆ ಇಲ್ಲಿನ ಕೋಟೆ ಆಂಜನೇಯ ದೇಗುಲದ ಎದುರು ಗಣ್ಯರ ಲಗೋರಿ ಆಟ ಆಯೋಜಿಸಿದ್ದು, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಸೇರಿದಂತೆ ಜನಪ್ರತಿನಿಧಿಗಳು, ವೈದ್ಯರು, ಅಧಿಕಾರಿಗಳು ಪಾಲ್ಗೊಳ್ಳುತ್ತಿದ್ದಾರೆ.

ಜ.19ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ರಾಜ್ಯ ಕ್ರೀಡಾ ಸಮ್ಮೇಳನ ಆಯೋಜಿಸಿದ್ದು, ಇದಕ್ಕೆ ಪೂರ್ವಭಾವಿಯಾಗಿ ಲಗೋರಿ ಆಟ ಆಯೋಜಿಸಲಾಗಿದೆ. ಸಮ್ಮೇಳನದ ಸಭಾಕಾರ್ಯಕ್ರಮ ನಂತರ ಶಾಲಾ ಮಕ್ಕಳಿಗೆ ಓಟ, ವಾಲಿಬಾಲ್, ಕೊಕ್ಕೊ, ಬ್ಯಾಸ್ಕೆಟ್‌ಬಾಲ್, ಹಾಕಿ, ಲಗೋರಿ, ಹಗ್ಗಜಗ್ಗಾಟ, ಸ್ಕೂಲ್ ಬ್ಯಾಂಡ್, ಕುಸ್ತಿ ಸ್ಪರ್ಧೆಗಳು ನಡೆಯಲಿವೆ ಎಂದು ಕ್ರೀಡಾಭಾರತಿಯ ಪ್ರಕಟಣೆ ತಿಳಿಸಿದೆ.

ಟೆನಿಸ್: 'ಲಂಬೂಜಿ' ಆಟಕ್ಕೆ ಮಣಿದ ಜೊಕೊ

ಬ್ರಿಸ್ಬೇನ್ (ಎಎಫ್‌ಪಿ): ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ ನೊವಾಕ್ ಜೊಕೊವಿಚ್ ಅವರು ಆಸ್ಟ್ರೇಲಿಯನ್ ಓಪನ್ ಸಿದ್ಧತೆಯ ಹಾದಿಯಲ್ಲಿ ಹಿನ್ನಡೆ ಕಂಡರು. ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಗೆ ಪೂರ್ವಭಾವಿಯಾಗಿ ನಡೆಯುತ್ತಿರುವ ಬ್ರಿಸ್ಬೇನ್ ಇಂಟರ್‌ನ್ಯಾಷನಲ್ ಟೆನಿಸ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಅಮೆರಿಕದ 'ಲಂಬೂಜಿ' ರೀಲಿ ಒಪೆಲ್ಕಾ ಎದುರು ನೇರ ಸೆಟ್‌ಗಳ ಸೋಲು ಕಂಡರು.

2.11 ಮೀಟರ್ (6 ಅಡಿ 11 ಇಂಚು) ಎತ್ತರದ ಒಪೆಲ್ಕಾ 7–6 (8–6), 6–3 ರಿಂದ 24 ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ಸರ್ಬ್ ಆಟಗಾರನನ್ನು ಸೋಲಿಸಿದರು. ಆಸ್ಟ್ರೇಲಿಯನ್ ಓಪನ್ ಜನವರಿ 12ರಂದು ಆರಂಭವಾಗಲಿದೆ.

27 ವರ್ಷ ವಯಸ್ಸಿನ ಒಪೆಲ್ಕಾ ಈ ಹಿಂದೆ ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನದಲ್ಲಿದ್ದರು. ಆದರೆ ಪೃಷ್ಠ ಮತ್ತು ಮಣಿಕಟ್ಟಿನ ನೋವಿನಿಂದ ಎರಡು ವರ್ಷ ಆಟದಿಂದ ದೂರವುಳಿದಿದ್ದ ಅವರು ಕಳೆದ ವರ್ಷದ ಜುಲೈನಲ್ಲಿ ಪುನರಾಗಮನ ಮಾಡಿದ್ದರು. ಆದರೆ ತಮ್ಮ ಸರ್ವ್‌ಗಳು ಇನ್ನೂ ವೇಗ ಕಳೆದುಕೊಂಡಿಲ್ಲ ಎಂಬುದನ್ನು ಸೂಚಿಸುವಂತೆ 16 ಏಸ್‌ಗಳನ್ನು ಹಾಕಿ ದರು. 1 ಗಂಟೆ 40 ನಿಮಿಷಗಳಲ್ಲಿ ಪಂದ್ಯ ತಮ್ಮದಾಗಿಸಿಕೊಂಡರು.



ಅಮೆರಿಕದ ರೀಲಿ ಒಪೆಲ್ಕಾ (ಬಲ) ಅವರನ್ನು ಅಭಿನಂದಿಸಿದ ಸರ್ಬಿಯಾದ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಅವರು ಸೆಮಿಫೈನಲ್‌ನಲ್ಲಿ ಮತ್ತೊಬ್ಬ ಪ್ರಬಲ ಸರ್ವ್ ಆಟಗಾರ, ಫ್ರಾನ್ಸ್‌ನ ಗಿಯೊವನ್ನಿ ಪೆಟ್ಶಿ ಪೆರಿಕಾರ್ಡ್ ಅವರನ್ನು ಎದುರಿಸಲಿದ್ದಾರೆ. ಮೂರು ಪಂದ್ಯಗಳಲ್ಲಿ 75 ಏಸ್‌ಗಳನ್ನು ಸಿಡಿಸಿರುವ ಈ ಫ್ರೆಂಚ್ ಆಟಗಾರ ಎಂಟರ ಘಟ್ಟದ ಪಂದ್ಯದಲ್ಲಿ ಝೆಕ್ ಆಟಗಾರ ಯಾಕುಬ್ ಮೆನ್ಸಿಕ್ ಅವರನ್ನು 7–5, 7–6 (7/5) ರಿಂದ ಮಣಿಸಿದರು.

ಇನ್ನೊಂದು ಸೆಮಿಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಹಾಗೂ ಎರಡನೇ ಶ್ರೇಯಾಂಕದ ಗ್ರಿಗೊರ್ ಡಿಮಿಟ್ರೋವ್, ಝೆಕ್ ಗಣರಾಜ್ಯದ ಜಿರಿ ಲೆಹೆಸ್ಕಾ ಅವರನ್ನು ಎದುರಿಸಲಿದ್ದಾರೆ.



ಪ್ರಧಾನಿ ಭೇಟಿ

ಫಿಡೆ ಮಹಿಳಾ ವಿಶ್ವ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ ತಮ್ಮ ಕುಟುಂಬದೊಂದಿಗೆ ಶುಕ್ರವಾರ ನವದೆಹಲಿಯಲ್ಲಿ ಪ್ರಧಾನ ನರೇಂದ್ರ ಮೋದಿ ಅವರನ್ನು ಭೇಟಿಯಾದರು. ಇದೇ ವೇಳೆ ಹಂಪಿ ಅವರನ್ನು ಪ್ರಧಾನಿ 'ಕ್ರೀಡಾ ಐಕಾನ್' ಎಂದು ಬಣ್ಣಿಸಿ ಅಭಿನಂದಿಸಿದರು –ಎಕ್ಸ್ ಚಿತ್ರ

ಭಾರತದ ನಾಲ್ಕು ತಂಡಗಳು ಕಣಕ್ಕೆ

ಕೊಕ್ಕೊ ವಿಶ್ವಕಪ್ ಭಾರತ–2025

ನವದೆಹಲಿ (ಪಿಟಿಐ): ಜ.13ರಿಂದ 19ರವರೆಗೆ ಇಲ್ಲಿ ನಡೆಯಲಿರುವ ಚೊಚ್ಚಲ ಕೊಕ್ಕೊ ವಿಶ್ವಕಪ್ ಟೂರ್ನಿಗಾಗಿ 'ಇಂಡಿಯಾ ಎ' ಮತ್ತು 'ಇಂಡಿಯಾ ಬಿ' ಹೆಸರಿನಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಎರಡು ತಂಡಗಳನ್ನು ಇದೇ 8ರಂದು ಭಾರತ ಕೊಕ್ಕೊ ಫೆಡರೇಷನ್ ಪ್ರಕಟಿಸಲಿದೆ.

ಪ್ರತಿ ತಂಡಗಳು 15 ಸದಸ್ಯರನ್ನು ಒಳಗೊಂಡಿರಲಿದೆ. ರಾಷ್ಟ್ರೀಯ ಶಿಬಿರದಿಂದ ಒಟ್ಟು 60 ಮಂದಿಯನ್ನು ಆಯ್ಕೆ ಮಾಡಲಾಗುತ್ತದೆ. ನವದೆಹಲಿಯ ಇಂದಿರಾಗಾಂಧಿ ಒಳಾಂಗಣ ಕ್ರೀಡಾಂಗಣ ಮತ್ತು ನೋಯ್ಡಾ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ.

ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ತಲಾ ಎರಡು ತಂಡ ಗಳನ್ನು ಮತ್ತು ನಾಯಕರನ್ನು ಇದೇ 8ರಂದು ಪ್ರಕಟಿಸಲಾಗುವುದು ಎಂದು ಭಾರತ ಕೊಕ್ಕೊ ಫೆಡರೇಷನ್ ಅಧ್ಯಕ್ಷ ಸುಧಾಂಶು ಮಿತ್ತಲ್ ಶುಕ್ರವಾರ ನಡೆದ ವಿಶ್ವಕಪ್ ಟ್ರೋಫಿ ಮತ್ತು ಮ್ಯಾಸ್ಕಟ್ ಅನಾವರಣ ಕಾರ್ಯಕ್ರಮದಲ್ಲಿ ಹೇಳಿದರು.

ಬೆಂಗಳೂರು ರೇಸ್

ರೀಗಲ್ ರಿಯಾಲಿಟಿ ಗೆಲ್ಲುವ ನಿರೀಕ್ಷೆ

ಬುಕ್‌ಮೇಕರ್ಸ್ ಅಸೋಸಿಯೇಷನ್ ಬೆಂಗಳೂರು ಓಕ್ಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೀಗಲ್ ರಿಯಾಲಿಟಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಿವೈನ್ ಆರ್ಟ್ 6, ಭರತ್ 7, ರೆಕಾರ್ಡೊ 3
2ನೇ ರೇಸ್: ಪ್ರೊಕೊಫೀ 2, ಪರ್ಫೆಕ್ಟ್ ಆಟಿಟ್ಯೂಡ್ 6, ವಾರ್ ಎನ್ವೊ 7
3ನೇ ರೇಸ್: ಲೋನ್ ರೇಂಜರ್ 3, ಸ್ಲಿಂಗ್ ಶಾಟ್ 8, ಎಕ್ಸ್ಟ್ರಾ ಆರ್ಡಿನರಿ 1
4ನೇ ರೇಸ್: ನೆವರ್ ಗೀವ್ ಇನ್ 5, ಟ್ರಿಪಿಟಾಕ 4, ಬೆರೆಟಿನಿ 1
5ನೇ ರೇಸ್: ಪೊಸಿಟಾನೊ 7, ಡಾನ್ ಕಾರ್ಲೋಸ್ 9, ಪ್ರಾಮಿಸ್‌ಆಫ್‌ದಿಫ್ಯೂಚರ್ 4
6ನೇ ರೇಸ್: ಸೀರ್ಯುಸ್ ಕರೇಜಿಯಸ್ 4, ಶ್ಯಾಮ್‌ರಾಕ್ 3, ಯುಕಾನ್ 6
7ನೇ ರೇಸ್: ರೀಗಲ್ ರಿಯಾಲಿಟಿ 4, ಇನ್‌ಸ್ಪೈರ್ 2, ಕ್ವೀನ್ ಆಫ್ ಕಿಂಗ್ಸ್ 3
8ನೇ ರೇಸ್: ಮಾರ್ಥ 4, ಡೇಸ್ ಡೇಟ್ 2, ಫಾಸ್ಟ್ ರೆಸ್ಪಾನ್ಸ್ 1
9ನೇ ರೇಸ್: ಡಿವೈನ್ ಪ್ರೊಟೆಕ್ಟರ್10, ಅಮೇಜಿಂಗ್ ಸ್ಟ್ರೈಡ್ 9, ಸ್ಮೈಲ್ ಆಫ್ ಬ್ಯೂಟಿ 4

ಉತ್ತಮ ಬೆಟ್: ಪೊಸಿಟಾನೊ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಬಿಎಫ್‌ಸಿಗೆ ಜೆಎಫ್‌ಸಿ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಎಫ್‌ಸಿ ತಂಡ, ಜೆಆರ್‌ಡಿ ಟಾಟಾ ಕ್ರೀಡಾ ಕಾಂಪ್ಲೆಕ್ಸ್ ನಲ್ಲಿ ಶನಿವಾರ ನಡೆಯುವ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಜಮ್‌ಷೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡವನ್ನು ಎದುರಿಸಲಿದ್ದು ಹೊಸ ವರ್ಷವನ್ನು ಗೆಲುವಿನೊಡನೆ ಆರಂಭಿಸುವ ಉತ್ಸಾಹದಲ್ಲಿದೆ.

ಹಾಲಿ ಋತುವಿನಲ್ಲಿ ಆಡಿರುವ 13 ಪಂದ್ಯಗಳಲ್ಲಿ ಎಂಟು ಗೆಲುವು, ಮೂರು ಡ್ರಾ ಹಾಗೂ ಎರಡು ಸೋಲು ಕಂಡಿರುವ ಬಿಎಫ್‌ಸಿ ಒಟ್ಟು 27 ಅಂಕ ಕಲೆಹಾಕಿ ಲೀಗ್‌ನಲ್ಲಿ ಎರಡನೇ ಸ್ಥಾನದಲ್ಲಿದೆ. ಮೋಹನ್ ಬಾಗನ್ (14 ಪಂದ್ಯಗಳಿಂದ 32) ಅಗ್ರಸ್ಥಾನದಲ್ಲಿದೆ.

ಬಿಎಫ್‌ಸಿ ವಿರುದ್ಧ ತನ್ನ ಕಳಪೆ ಪ್ರದರ್ಶನವನ್ನು ತೊಡೆದು ಹಾಕಲು ಜಮ್‌ಷೆಡ್‌ಪುರ ತಂಡ ಕೂಡ ಹವಣಿಸುತ್ತಿದೆ. ಇದುವರೆಗೆ ಮುಖಾಮುಖಿಯಾಗಿರುವ ಆರು ಪಂದ್ಯಗಳಲ್ಲಿ ಉಕ್ಕಿನ ನಗರಿಯ ತಂಡ ಎರಡು ಡ್ರಾ ಮಾಡಿಕೊಂಡಿದ್ದು, ಉಳಿದ ನಾಲ್ಕನ್ನು ಸೋತಿದೆ. ಇಲ್ಲಿ ಬಿಎಫ್‌ಸಿ ತನ್ನ ಕೊನೆಯ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದು, ಒಂದು ಡ್ರಾ ಮಾಡಿಕೊಂಡು ಯಶಸ್ಸು ಮುಂದುವರಿಸುವ ಗುರಿಯಲ್ಲಿದೆ.

ಬಿಎಫ್‌ಸಿ ತಂಡ ಸ್ಥಿರ ಪ್ರದರ್ಶನ ನೀಡುತ್ತಿದ್ದು, ಕೊನೆ ಆರು ಐಎಸ್‌ಎಲ್ ಪಂದ್ಯಗಳಲ್ಲಿ ಕಡೇ ಪಕ್ಷ ಎರಡು ಗೋಲುಗಳನ್ನು ದಾಖಲಿಸುತ್ತಾ ಬಂದಿದೆ. ಇನ್ನೊಂದು ಕಡೆ ಜಮ್‌ಷೆಡ್‌ಪುರ ಎಫ್‌ಸಿ ತವರಿನಲ್ಲಿ ಆಡಿದ ಕೊನೆಯ 9 ಪಂದ್ಯಗಳಲ್ಲಿ ಪ್ರತಿ ಬಾರಿ ಒಂದೊಂದು ಗೋಲು ಗಳಿಸುವಲ್ಲಿ ಯಶಸ್ವಿ ಆಗಿದೆ.

ಬಿಎಫ್‌ಸಿ ತನ್ನ ಕೊನೆಯ ಪಂದ್ಯದಲ್ಲಿ 4–2 ಗೋಲು ಗಳಿಂದ ಚೆನ್ನೈಯಿನ್ ಎಫ್‌ಸಿ ವಿರುದ್ಧ ಜಯಗಳಿಸಿದೆ.

ಪಂದ್ಯ ಆರಂಭ: ಸಂಜೆ 7.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ 3–2 ಗೋಲುಗಳಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು ಮಣಿಸಿತು.

ಅಶೋಕನಗರದ ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಅಗ್ನಿಪುತ್ರ ತಂಡದ ಅಜ್ಫರ್ ನೂರಾನಿ (48ನೇ ನಿಮಿಷ) ಮತ್ತು ರಾಹುಲ್ (78, 90ನೇ ನಿ) ಗೋಲುಗಳನ್ನು ಹೊಡೆದರು. ರಿಯಲ್ ತಂಡದ ಪರ ಸಯ್ಯದ್ ಅಹಮದ್ (22 ನಿ.), ಸೋಮ್ಯಾ ತಮ್ಮಾ (57ನೇ ನಿ.) ತಲಾ ಒಂದೊಂದು ಗೋಲು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡ 2–0 ಗೋಲುಗಳಿಂದ ಎಂಎಫ್‌ಎಆರ್ ತಂಡವನ್ನು ಸೋಲಿಸಿತು.



ಎಫ್‌ಸಿ ಅಗ್ನಿಪುತ್ರ ತಂಡದ ಅಜ್ಫರ್ ನೋರಾನಿ (ಎಡ) ಗೋಲು ಗಳಿಸಲು ಯತ್ನ ನಡೆಸಿದರು

ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್



ಪೂರ್ವಿಕಾ
THINK MOBILE..!
THINK POORVIKA..!
Poorvika's
ಸಂಕ್ರಾಂತಿ
ವಿಶೇಷ ಮಾರಾಟ
ಹಳೆಯದು ಕೊಟ್ಟು ಹೊಸದು ಪಡೆಯಿರಿ
Buy above ₹5,000 Participate in Contest & Get Chance to WIN
₹15 Lakhs worth Gold voucher and Exciting Prizes
WIN
GIFT VOUCHER ₹10,000
₹15,00,000 Worth GOLD VOUCHER
CHRISTMAS & New Year SLOGAN CONTEST WINNERS
TECNO Smart Phone Winner
Apple Airpods 2 Winner
TECNO Smart Phone Winner
Gift Voucher Winner GIFT VOUCHER ₹2,000
Gift Voucher Winner GIFT VOUCHER ₹2,000
Air Cooler Winner
HDFC BANK
Upto* 12% INSTANT DISCOUNT On Credit card & Debit card EMIs
1 RUPEE* DOWN PAYMENT
Upto ₹12,000* EXCHANGE BONUS
Upto ₹11,000* CASHBACK HDB FINANCIAL SERVICES
1 EMI CASHBACK TVS CREDIT
BAJAJ FINSERV
ONE INDIA ONE FINANCER #EMI Anywere
iPhone 15 (128 GB) MRP ₹69,900 Effective Price ₹35,900* Per Day EMI ₹87
iPhone 16 (128 GB) MRP ₹79,900 Effective Price ₹44,900* Per Day EMI ₹101*
iPhone 16 Plus (128 GB) MRP ₹89,900 Effective Price ₹54,900* Per Day EMI ₹114*
Upto ₹4,000* Instant Cashback on Credit Cards of ICICI Bank SBI card kotak
*Effective Price after Store Discount, Exchange Value Exchange Bonus & Bank Cashback
SAMSUNG Galaxy Z Fold 6 5G Upto ₹12,500 Upgrade Bonus EMI ₹6,875 Upto ₹18,000 OFF On Galaxy Ultra Smartwatch
SAMSUNG Galaxy S24 Ultra 5G 12+256 GB ₹1,29,999 Effective Price ₹1,17,999 Including Bank Cashback Upto ₹7,000 OFF On Galaxy TWS Buds3 Pro EMI ₹5,417
SAMSUNG Galaxy A35 5G 8+128 GB ₹30,999 Effective Price ₹25,999 EMI Start @ ₹1,722
vivo X200 Pro 5G Upto ₹7,000* Instant Discount Upto 45% Discount On Soundbar Worth ₹18,999
vivo X200 5G Upto ₹5,500* Instant Cashback Upto 70% Discount On Soundbar Worth ₹21,990
Redmi Note 14 Series 5G Upto ₹1,000* Instant Cashback Upto 75% Discount On TWS Worth ₹4,990
realme 14x 5G 6+128 GB ₹14,999 Effective Price ₹13,999 Including Bank Cashback Upto 75% Discount On Neckband Worth ₹3,490
NOTHING CMF Phone 1 / Phone (2a) Phone (2a) Plus Upto ₹4,000* Instant Cashback EMI Start @ ₹1,778
ONEPLUS Nord CE 4 Lite 5G ₹20,999 Effective Price ₹19,999 Including Bank Cashback EMI Start @ ₹2,333
vivo V40e 5G 8+128 GB ₹26,999 Effective Price ₹24,499 Including Bank Cashback Upto 75% Discount On Smartwatch Worth ₹6,990
oppo F27 Pro Plus 5G 8+128 GB ₹25,999 Effective Price ₹23,999 Including Bank Cashback Upto 90% Discount On Smartwatch Worth ₹9,999
realme C65 5G 6+128 GB ₹12,499 Effective Price ₹11,699 Including Bank Cashback Upto 90% Discount On Neckband Worth ₹3,999
Redmi 13 5G 6+128 GB ₹12,999 Effective Price ₹12,349 Including Bank Cashback Upto 90% Discount On Neckband Worth ₹3,999
itel A50 LOWEST PRICE 4 GB RAM ₹7,399 ₹5,999 Upto 90% Discount On Neckband Worth ₹3,999
TECNO Spark 20 Pro 5G LOWEST PRICE 8 GB RAM ₹15,999 ₹9,999 Upto 85% Discount On TWS Worth ₹3,999
XIAOMI Smart TV A Series 32" Upto 5% Instant Cashback EMI ₹1,611
XIAOMI Smart TV X Series 2024-43" Effective Price ₹26,999 ₹24,499 *Including Bank Cashback EMI ₹2,250
*T&C apply. Offer applicable for selected brand and models
Macbook Air-13.3" M1 Chip (8GB+256GB SSD) ₹69,900 Effective Price ₹62,890 Per Day EMI ₹94*
LAPTOP Starts @ ₹26,990
GAMING LAPTOP Starts @ ₹55,990
Buy LAPTOP Get Laptop bag FREE Worth ₹1,999 *On Selected Models
Monitors Starts @ ₹4,999
Printer Starts @ ₹5,399 EPSON
All-in-One PC Starts @ ₹56,990 Lenovo
*Selected Brand & model only
Buy any Smartphone / Tablet & Get*
Neckband worth ₹3,999 @ ₹399
TWS worth ₹3,999 @ ₹599
boAt TWS worth ₹4,990 @ ₹1,099
Smartwatch worth ₹9,999 @ ₹999
boAt AMOLED Smartwatch worth ₹6,990 @ ₹1,499*
Soundbar worth ₹13,999 @ ₹2,999
SCAN QR CODE
IDFC FIRST Bank
HDB FINANCIAL SERVICES
TVS CREDIT
ICICI Bank
kotak Kotak Mahindra Bank
Pine Labs
*EMI OPTIONS AVAILABLE ON SELECTED SHOWROOM ONLY
Customer Helpline : 99406 88855
Shop online @ www.poorvika.com
POORVIKA